
ಕರ್ಮವೀರ

ಜನಪ್ರಿಯ ಸಚಿತ್ರ ವಾರಪತ್ರಿಕೆ - ಹುಬ್ಬಳ್ಳಿ.

೨೩-೫-೪೯

★

ಬೆಲೆ ಎರಡಾಣೆ



ಅಮೇರಿಕೆಯಲ್ಲಿ ಭಾರತದ ರಾಯಭಾರಿ ಶ್ರೀಮತಿ ವಿಜಯಲಕ್ಷ್ಮಿ ಪಂಡಿತರು

Karmaveer. KANNADA ILLUSTRATED WEEKLY HUB

ಮುಖಪತ್ರದಲ್ಲಿ

ಶ್ರೀಮತಿ ವಿಜಯಲಕ್ಷ್ಮಿ ಪಂಡಿತರು ಅಮೇರಿಕೆಯ ಸಂಯುಕ್ತ ಸಂಸ್ಥಾನಗಳಲ್ಲಿ ಭಾರತದ ರಾಯಭಾರಿಯಾಗಿ ಸರ್ ರಾಮರಾಯರ ಸ್ಥಾನದಲ್ಲಿ ನೇಮಿಸಲ್ಪಟ್ಟು ಈಗಾಗಲೆ ವಾಶಿಂಗಟನ್ನಿಗೆ ಹೋಗಿದ್ದಾರೆ. ರಾಜಕಾರಣಿಯಾಗಿ, ದೇಶಭಕ್ತಳಾಗಿ, ಸಮಾಜ ಸುಧಾರಕಳಾಗಿ, ಗೃಹಿಣಿಯಾಗಿ, ಮಾತೆಯಾಗಿ, ಮುತ್ಸದ್ದಿಯಾಗಿ ಶ್ರೀಮತಿ ಪಂಡಿತರು ಪರಿಪೂರ್ಣ ಜೀವನವನ್ನು ನಡೆಸಿದ್ದಾರೆನ್ನಬಹುದು. ಪಂ. ಜವಾಹರಲಾಲರ ತಂಗಿಯೆಂಬದೇ ಇವರ ಗುಣವಿಶೇಷವಾಗಿರದೆ ಸ್ವಂತ ಕರ್ತೃತ್ವಶಕ್ತಿ, ವಾಕ್ಶಕ್ತಿಗಳಿಂದಲೇ ಇವರು ಜನಪ್ರಿಯತೆಯನ್ನು ಗಳಿಸಿದ್ದಾರೆಂಬದಕ್ಕೆ ಯುಕ್ತಪ್ರಾಂತದ ಮಂತ್ರಿಯಾಗಿಯೂ (೧೯೩೭ ರ ಮಂತ್ರಿಮಂಡಲದಲ್ಲಿ), ಯು. ರಾ. ಸಂಘದಲ್ಲಿ ದಕ್ಷಿಣ ಆಫ್ರಿಕೆಯ ಹಿಂದೀಯರ ಪ್ರಕರಣವನ್ನು ಯಶಸ್ವಿಯಾಗಿ ಪ್ರತಿಪಾದಿಸಿಯೂ (೧೯೪೬) ಇವರು ಪ್ರಮಾಣಗೊಳಿಸಿದ್ದಾರೆ. ರಶಿಯದಲ್ಲಿ ಅವರ ರಾಯಭಾರದ ಅವಧಿ ಅಷ್ಟು ಯಶಸ್ವಿಯಾಗಲಿಲ್ಲವೇನೋ ನಿಜ. ಆದರೆ ಅದಕ್ಕೆ ಅವರ ಅವಗುಣ ಕಾರಣವಾಗಿರದೆ, ರಶಿಯದ ವಾತಾವರಣವೇ ಕಾರಣವೆನ್ನಬೇಕು. ರಶಿಯದಲ್ಲಿ ರಾಯಭಾರಿಗಳಿಗೆ ಸ್ನೇಹಬಂಧನ ಬೆಳೆಸುವ ಅವಕಾಶಸಿಗುವದೇ ಅಪೂರ್ವ. ಅಮೇರಿಕೆಯಲ್ಲಿ ಅವರು ವಹಿಸಿದ ಹೊಸ ಹುದ್ದೆ ಪರಿಣಾಮಕಾರಿಯಾಗುವಲ್ಲಿ ಸಂದೇಹವಿಲ್ಲ. ಲಘುವಾದ ಅಮೇರಿಕೆಯ ವಾತಾವರಣದಲ್ಲಿ ಅಮೇರಿಕನ್ನರು ಹೇಳುವಂತೆ ಈ ರಂಜಕ [ಕಲರ್‌ಫುಲ್] ವ್ಯಕ್ತಿತ್ವಕ್ಕೆ ಹೆಚ್ಚು ಕಾರ್ಯಸಾಧನೆಯ ಅವಕಾಶವುಂಟು. ಮೊದಲೇ ಅವರು ಆ ದೇಶದಲ್ಲಿ ಪ್ರಸಿದ್ಧರೂ ಜನಪ್ರಿಯರೂ ಆಗಿದ್ದಾರೆ. ಆದರೆ ಮಾಸ್ಕೋದ "ಸರಳ ಮಂಚ"ಕ್ಕೆ ಯಾರು ಉತ್ತರಾಧಿಕಾರಿಯಾಗುವರೋ ನೋಡಬೇಕು.

ಕರ್ಮವೀರ

ಪ್ರತಿ ಸೋಮವಾರ ಹುಬ್ಬಳ್ಳಿಯಿಂದ ಹೊರಡುವ ವಾರಪತ್ರಿಕೆ

ಸಂಸ್ಥಾಪಕರು :
ಶ್ರೀ. ರಂ. ರಾ. ದಿವಾಕರ

ಸಂಪಾದಕರು :
ಶ್ರೀ. ಹ. ರಾ. ಪುರೋಹಿತ

ಹೊಸ ವರ್ಗಣಿ ವಿವರಗಳು :

೧ ವರ್ಷಕ್ಕೆ	ರೂ. ೬—೧೨—೦
೬ ತಿಂಗಳಿಗೆ	ರೂ. ೩—೮—೦
೩ ,,	ರೂ. ೨—೦—೦

ಬಿಡಿ ಸಂಚಿಕೆ : ೨ ಆಣೆ

ವ್ಹಿ. ಪಿ. ದ್ವಾರಾ ಕಳಿಸಿದರೆ ೦—೬—೦ ಹೆಚ್ಚು ಬೀಳುವದು.

ಸೂಚನೆ : ಈ ವರೆಗೆ ವರ್ಷಕ್ಕೆ ೪ ವಾರ ರಜೆ ತೆಗೆದುಕೊಳ್ಳುವ ಪರಿಪಾಠವಿತ್ತು. ಓದುಗರಿಗೆ ಇದರಿಂದ ತೊಂದರೆಯಾಗುವದನ್ನರಿತು ಇನ್ನು ಮುಂದೆ ರಜೆಗಳನ್ನು ರದ್ದುಗೊಳಿಸಿ ವರ್ಷದಲ್ಲಿ ೫೨ ಸಂಚಿಕೆಗಳನ್ನು ತೆಗೆಯಲಾಗುವದು. ವಿಶೇಷ ಸಂಚಿಕೆಗಳನ್ನು ಹೊರಡಿಸಿದರೆ ಅದರ ಬಗ್ಗೆ ಪ್ರತ್ಯೇಕ ಬೆಲೆಯನ್ನು ಕೊಡಬೇಕಾಗುವದು.

ಲೇಖಕರು: "ಕರ್ಮವೀರ" ದಲ್ಲಿ ಪ್ರಕಟನೆಗಾಗಿ ಕಳಿಸುವ ಲೇಖ ಕತೆ ಕವಿತೆ ಮೊದಲಾದವುಗಳು ಅಸ್ವೀಕೃತವಾದಲ್ಲಿ ತಿರುಗಿ ಪಡೆಯಲಪೇಕ್ಷಿಸುತ್ತಿದ್ದರೆ ಲೇಖದ ಸಂಗಡಲೇ ಅವಶ್ಯವಿದ್ದಷ್ಟು ಅಂಚೆ ತಿಕೀಟುಗಳನ್ನು ಕಳಿಸಿರಬೇಕು. ಹಾಗೆ ಮಾಡದೆ ಮುಂದೆ ಆ ಲೇಖಗಳ ಬಗ್ಗೆ ಪತ್ರವ್ಯವಹಾರ ಮಾಡಿದರೆ ಅಥವಾ ತಿರುಗಿ ಕಳಿಸಬೇಕೆಂದರೆ ಅದು ಸಾಧ್ಯವಾಗದು. ಸ್ವೀಕೃತವಾದ ಕತೆಗಳಿಗೂ ಪೂರ್ವಾಗ್ರಕಾರದ, ಅಂದರೆ "ಕರ್ಮವೀರ"ದ ಎರಡು ಕಾಲಂ ಮೀರಿದ ಲೇಖಗಳಿಗೂ ನಿರ್ದಿಷ್ಟ ಪ್ರತಿಫಲ ಕೊಡಲಾಗುವದು.

— ವ್ಯವಸ್ಥಾಪಕ,
"ಕರ್ಮವೀರ" ಹುಬ್ಬಳ್ಳಿ.

ಸಂಪುಟ ೨೧ ಸಂಚಿಕೆ ೩ **ಕರ್ಮವೀರ** ಸೋಮವಾರ ವೈಶಾಖ ಬ. ೧೧

ತಾರೀಕು ೨೩—೫—೧೯೪೯

ಕಾಮನ್‌ವೆಲ್ತ ನಿರ್ಣಯಕ್ಕೆ ಸಮ್ಮತಿ

ಮೇ ೧೬ ಕ್ಕೆ ಸೇರಿದ ಭಾರತ ಘಟನಾ ಸಮಿತಿಯ ಅಧಿವೇಶನದಲ್ಲಿ, ಕಾಮನ್‌ವೆಲ್ತಿನಲ್ಲಿ ಉಳಿಯುವ ಬಗ್ಗೆ ಭಾರತದ ಪರವಾಗಿ ಮುಖ್ಯಮಂತ್ರಿ ಪಂ. ಜವಾಹರಲಾಲರು ಲಂಡನ್ನಿನಲ್ಲಿ ಮಾಡಿಕೊಂಡು ಬಂದ ಒಪ್ಪಂದಕ್ಕೆ ಸಮ್ಮತಿಮುದ್ರೆ ದೊರಕಿದ್ದು ಆ ಮಹಾಸಭೆಯ ವಿವೇಕಕ್ಕೆ ಭೂಷಣವಾಗಿದೆ. ಹಳೆಯದನ್ನು ಮರೆಯಲಾರದ, ಹೊಸತನ್ನು ಕಲಿಯಲಾರದ ಕೆಲವರು ಇದನ್ನು ತಡೆಯಲು ಪ್ರಯತ್ನಿಸಿದರೇನೋ ನಿಜ. ಆದರೆ ಅಂಥವರು ಕೈಬೆರಳುಗಳಿಂದೆಣಿಸಬಹುದಾದುದಕ್ಕಿಂತ ಹೆಚ್ಚಿಗಿರಲಿಲ್ಲವೆಂದು ನಾವು ಗಮನಿಸಬೇಕು. ಅನುಭವಶಾಲಿಗಳಾದ ಸದಸ್ಯರೆಲ್ಲರೂ ನಿರ್ಣಯವನ್ನು ಸ್ವಾಗತಿಸಿದರು. ನಮ್ಮ ಸರ್ವತಂತ್ರಸ್ವಾತಂತ್ರ್ಯಕ್ಕೆ ಏನೊಂದು ಕುಂದುಬಾರದಂತೆ, ನಾವು ಬಯಸಿಯೋ ಬಯಸದೆಯೋ ನೂರಾರು ವರ್ಷಗಳಿಂದ ಸಂಬಂಧ ಬೆಳಸುತ್ತ ಬಂದಿರುವ ಈ ರಾಷ್ಟ್ರಮಾಲಿಕೆಯೊಡನೆ ಇನ್ನು ಮುಂದೆಯೂ ಕೂಡಿಕೊಂಡಿರಬಹುದಾದರೆ ಅದಕ್ಕೆ ಆಕ್ಷೇಪವೇಕೊ ತಿಳಿಯುವದು ಕಠಿನವಾಗಿದೆ. ಬ್ರಿಟಿಶರು ಭಾರತವನ್ನು ಬಿಟ್ಟು ತೊಲಗಿದ ಮೇಲೆ ನಮಗೆ ಅವರ ಮೇಲಿದ್ದ ಮನಃಕಷಾಯ ದೂರವಾಗಿದೆ. ಇಂದಿನ ಕಾಲದಲ್ಲಿ ಬೆಕ್ಕಿನ ಬಿಡಾರ ಬೇರೆಯೆಂದು ಕುಳಿತುಕೊಳ್ಳುವ ಸಾಮರ್ಥ್ಯ ಅತಿ ಬಲಿಷ್ಠ ರಾಷ್ಟ್ರಕ್ಕೆ ಕೂಡ ಇಲ್ಲ. ಕಾಮನ್‌ವೆಲ್ತಿನಲ್ಲಿರುವದರಿಂದ ನಮಗೆ ವ್ಯಾಪಾರಾದಿ ಸೌಕರ್ಯಗಳು ದೊರಕುವಾಗ ಅದರಿಂದ ಹೊರಬಿದ್ದು ಹೋಗಿ ಹೊಸ ಸಂಬಂಧಗಳನ್ನು ಬೆಸೆಯತೊಡಗುವದು ದಡ್ಡತನವಲ್ಲದೆ ಮತ್ತೇನು ? ಕಾಮನ್‌ವೆಲ್ತಿನಲ್ಲಿ ಉಳಿದಾಕ್ಷಣ ಆಂಗ್ಲೋ ಅಮೇರಿಕನ್ ಬಣದಲ್ಲಿ ನಾವು ಸೇರಿದಂತೆಯೂ ಆಗಲಿಲ್ಲ. ಎಷ್ಟೋ ಮಹತ್ವದ ವಿಚಾರಗಳಲ್ಲಿ ನಾವು ಆ ಬಣದ ವಿರುದ್ಧ ಯು. ರಾ. ಸಂಘದಲ್ಲಿ ಮತವಿತ್ತು ನಮ್ಮ ಸ್ವಾತಂತ್ರ್ಯವನ್ನು ಪ್ರದರ್ಶಿಸಿದ್ದೇವೆ. ಕಾಶ್ಮೀರಾದಿ ಪ್ರಕರಣಗಳಲ್ಲಿ ಬ್ರಿಟಿಶರು ನಮಗೆ ಸಹಾಯ ಮಾಡಲಿಲ್ಲವೆಂದು ದೂರುವವರೂ ಇದ್ದಾರೆ. ಆದರೆ ನಾವು ಕಾಮನ್‌ವೆಲ್ತಿನಿಂದ ಹೊರಬಿದ್ದಾಕ್ಷಣ ಇದು ಬದಲಾಗುವದೆ? ಸದಸ್ಯರೊಬ್ಬರು ಹೇಳಿದಂತೆ ಈ ಕೋಪದ ನಡೆವಳಿಯಿಂದ ಪಾಕಿಸ್ತಾನಕ್ಕೆ ಸಹಾಯ ಮಾಡಲು ಬ್ರಿಟಿಶರ ಮಾರ್ಗ ಸುಗಮವೇ ಆಗುವದು. ದ. ಆಫ್ರಿಕೆ, ಆಸ್ಟ್ರೇಲಿಯಗಳಲ್ಲಿರುವ ವರ್ಣದ್ವೇಷಗಳನ್ನೆತ್ತಿ ತೋರಿಸುವವರಿಗೂ ಮುಖ್ಯಮಂತ್ರಿಗಳು ಸಮರ್ಪಕ ಉತ್ತರ ಕೊಟ್ಟರು. ಕಾಮನ್‌ವೆಲ್ತಿನ ಒಳಗಿಂದಲೂ ಹೊರಗೆ ಯು. ರಾ. ಸಂಘದಲ್ಲಿಯೂ ಹೀಗೆ ಇಕ್ಕಡೆಯಿಂದ ವರ್ಣದ್ವೇಷದ ವಿರುದ್ಧ ಹೋರಾಡಲು ನಮಗೆ ಈ ನಿರ್ಣಯದಿಂದ ಸಾಧ್ಯವಾಗುವದು. ಮೇಲಾಗಿ ಹೊರಗೆ ಉಳಿಯುವದು ಶ್ರೇಯಸ್ಕರವೆಂದು ತೋರಿದಾಗ ನಾವೂ ಆಯರ್ಲಂಡಿನಂತೆ ಏನೂ ತಡವಿಲ್ಲದೆ ಹೊರಬೀಳುವದನ್ನು ಯಾರೂ ತಡೆಯಲಾರರು. ನಿಜವಾಗಿ ನಮ್ಮ ಸದಾಶಯವನ್ನು ನಾವು ಪ್ರಕಟಿಸಿದ್ದೇವೆ. ಇನ್ನು ಆ ಸದಾಶಯವನ್ನು ಯೋಗ್ಯ ರೀತಿಯಲ್ಲಿ ಸ್ವೀಕರಿಸಿ ನಡೆದುಕೊಳ್ಳುವ ಹೊಣೆ ಉಳಿದ ಸದಸ್ಯರದು. ಅವರ ನೀತಿ ಬದಲಾಗದಿದ್ದರೆ ಭಾರತವೊಂದೇ ಅಲ್ಲ, ಪಾಕಿಸ್ತಾನ, ಸಿಂಹಲಗಳು ಕೂಡ ತಮ್ಮ ಧೋರಣೆಯನ್ನು ಪುನರ್ವಿಮರ್ಶಿಸಬೇಕಾದ ಕಾಲ ಬರಬಹುದು. ಅಂಥದು ಬಾರದಂತೆ ಕಾಮನ್‌ವೆಲ್ತ ರಾಷ್ಟ್ರಗಳಿಗೆ ಜ್ಞಾನೋದಯವಾಗಲಿ. ಇತ್ತ ಭಾರತೀಯ ರಾಜಕಾರಣಿಗಳೂ ಶಾಸನಕರ್ತರೂ ಪಂ. ಜವಾಹರಲಾಲರ ಸೂಚನೆಯನ್ನು ಗಮನಿಸಿ ವಿದೇಶ ಸಂಬಂಧದಲ್ಲಿ ಏಕಾಭಿಪ್ರಾಯವನ್ನು ಪ್ರಕಟಿಸಲು ಸಿದ್ಧರಾಗಬೇಕೆಂದು ಹಾರೈಸಬೇಕಾಗಿದೆ. ನಮ್ಮ ಒಳಜಗಳಗಳೇನೇ ಇರಲಿ, ಹೊರಗಿನವರೊಡನಿರುವ ನಮ್ಮ ಸಂಬಂಧದ ಬಗ್ಗೆ ಐಕ್ಯ ಪ್ರದರ್ಶಿಸದಿದ್ದರೆ ನಮ್ಮ ದುರಂತ ಇತಿಹಾಸದ ಪುನರಾವರ್ತನೆಯಾಗಬಹುದು.

ದಕ್ಷಿಣ ಆಫ್ರಿಕದ ಭಾರತೀಯರು

ಯುಕ್ತರಾಷ್ಟ್ರ ಸಂಘದ ರಾಜಕೀಯ ಸಮಿತಿ ಮತ್ತು ಸಾಧಾರಣ ಸಭೆಗಳಲ್ಲಿ ಭಾರತಕ್ಕೆ ಕಳೆದವಾರ ಎರಡು ಮಹತ್ವದ ವಿಜಯಗಳು ದೊರೆತವು. ರಾಜಕೀಯ ಸಮಿತಿಯಲ್ಲಿ, ದಕ್ಷಿಣ ಆಫ್ರಿಕೆಯಲ್ಲಿನ ಭಾರತೀಯರ ಸ್ಥಿತಿಗತಿಗಳನ್ನು ವಿಚಾರಿಸಿ ವರದಿ ಮಾಡಲು ಒಂದು ಯು. ರಾ. ಸಮಿತಿಯನ್ನು ನೇಮಿಸಬೇಕೆಂಬ ಗೊತ್ತುವಳಿ ಬಹುಮತದಿಂದ ಪಾಸಾದುದು. ಎರಡನೆಯದು, ಸಾಧಾರಣ ಸಭೆಯಲ್ಲಿ ಫ್ರೆಂಚ್-ಮೆಕ್ಸಿಕನ್ ಪ್ರತಿನಿಧಿಗಳು ತಂದ, ದ. ಆಫ್ರಿಕಾ ಹಿಂದೀಯರ ಬಗ್ಗೆ ವಿಚಾರ ಮಾಡಲು ಭಾರತ—ಪಾಕಿಸ್ತಾನ-ದ. ಆಫ್ರಿಕಾ ಪ್ರತಿನಿಧಿಗಳನ್ನೊಳಗೊಂಡ ದುಂಡುಮೇಜಿನ ಪರಿಷತ್ತನ್ನು ಕೂಡಿಸಬೇಕೆಂಬ ಗೊತ್ತುವಳಿ ಎರಡು ಮೂರಂಶ ಬಹುಮತದಿಂದಲೇ, ಏಕೆ, ಕೇವಲ ದಕ್ಷಿಣ ಆಫ್ರಿಕೆಯೊಂದರ ವಿರೋಧದಿಂದ ಪಾಸಾದುದು. ರಾಜಕೀಯ ಸಮಿತಿಯಲ್ಲಿ ಪಾಸಾದ, ತನ್ನ ಹೆಚ್ಚು ತೀವ್ರಗಾಮಿಯಾದ ಗೊತ್ತುವಳಿಯನ್ನು ಸಾಧಾರಣ ಸಭೆಯಲ್ಲಿ ಮುಂದೊತ್ತದೆ ಭಾರತವು ಫ್ರೆಂಚ್—ಮೆಕ್ಸಿಕನ್ ಗೊತ್ತುವಳಿಗೇ ಬೆಂಬಲ ಕೊಟ್ಟದ್ದು ಭಾರತದ ಪ್ರತಿನಿಧಿಗಳಾದ ಶ್ರೀ ಸೆಟಲವಾಡರ ಮುತ್ಸದ್ದಿತನಕ್ಕೆ ಮಾತ್ರವಲ್ಲ, ಎದುರಾಳಿಗೆ ಇನ್ನೊಂದು ಅವಕಾಶ ಕೊಡುವ ಭಾರತದ ಉದಾರ ವೃತ್ತಿಗೆ ನಿದರ್ಶನವಾಗಿದೆ. ೧೯೪೬ ರಲ್ಲಿ ಯು. ರಾ. ಸಂಘದ ಸಾಮಾನ್ಯ ಸಭೆಯಲ್ಲಿ ಇಂಥದೇ ಒಂದು ಗೊತ್ತುವಳಿಯಾದುದನ್ನು ದಕ್ಷಿಣ ಆಫ್ರಿಕೆ ಕಡೆಗಣಿಸಿಬಿಟ್ಟಿತ್ತು. ಜಗತ್ತಿನಲ್ಲಿ ವರ್ಣದ್ವೇಷದ ಬಗ್ಗೆ ಎಷ್ಟು ತಿರಸ್ಕಾರವಿದೆಯೆಂದು ಇದೀಗ ಪುನಃ ಸ್ಥಿರಪಟ್ಟಿದೆ. ದ. ಆಫ್ರಿಕೆಯ ಬಿಳಿಯರ ಸರಕಾರ ಇನ್ನಾದರೂ ಜಾಗತಿಕ ಅಭಿಪ್ರಾಯಕ್ಕೆ ತಲೆವಾಗಿದರೆ ಅದಕ್ಕೂ ಹಿತ, ಉಳಿದವರಿಗೂ ಹಿತ.

ಕರ್ನಾಟಕಕ್ಕೆ ಅರಣ್ಯ ಕಾಲೇಜು

ಮುಂಬಯಿ ಒಕ್ಕಲತನ ಮತ್ತು ಅರಣ್ಯ ಮಂತ್ರಿಗಳಾದ ಶ್ರೀ ಮಲ್ಲನಗೌಡ ಪಾಟೀಲರು ಧಾರವಾಡದಲ್ಲಿ ತಾ. ೧೬ ಕ್ಕೆ ಉದ್ಘಾಟಿಸಿದ ಅರಣ್ಯ ಕಾಲೇಜು ಕರ್ನಾಟಕದ ಶಿಕ್ಷಣದ ಪ್ರಗತಿಗೆ ಹೊಸತೊಂದು ಉತ್ತೇಜನವಾಗದಿರದು. ಈ ಕಾಲೇಜಿನಲ್ಲಿ ಸದ್ಯಕ್ಕೆ ರೇಂಜರ ಕ್ಲಾಸಿಗೆ ೩೦ ವಿದ್ಯಾರ್ಥಿಗಳನ್ನೂ ಫಾರೆಸ್ಟರ ಕ್ಲಾಸಿಗೆ ೨೪ ವಿದ್ಯಾರ್ಥಿಗಳನ್ನೂ ತೆಗೆದುಕೊಳ್ಳಲಾಗುವದು. ಈ ಕಾಲೇಜು ಧಾರವಾಡದ ಒಕ್ಕಲತನ ಕಾಲೇಜಿಗೇ ಹೊಂದಿಕೊಂಡಿರುವದು. ಈ ಅರಣ್ಯ ಕಾಲೇಜು ಭಾರತಕ್ಕೇ ಮೂರನೆಯದಾಗುವದು. ಇನ್ನೆರಡು ಡೆಹರಾಡೂನ ಮತ್ತು ಕೋಯಮತ್ತೂರಿನಲ್ಲಿವೆ. ಆದರೆ ಆವೆರಡೂ ಹಳೇ ಪದ್ಧತಿಯನ್ನವಲಂಬಿಸಿದ ಸಂಸ್ಥೆಗಳು. ಅರಣ್ಯ ಸಂಪತ್ತಿಗೆ ಪ್ರಸಿದ್ಧವಾಗಿರುವ ಭಾರತದಲ್ಲಿ ಅರಣ್ಯ ಕಾಲೇಜುಗಳ ಈ ಪರಿಯ ಕೊರತೆ ನಿಜವಾಗಿ ಲಾಂಛನಾಸ್ಪದ. ಈ ಕಾಲೇಜಿಗೆ ಹೊರಗಿನವರಾರೂ ಬಾರದಿದ್ದರೂ ಪ್ರಾಂತಕ್ಕೇ ವರ್ಷಕ್ಕೆ ೩೦ ಅರಣ್ಯಾಧಿಕಾರಿಗಳು ಬೇಕಾಗುವದರಿಂದ ಇದನ್ನು ನಡೆಸಿಕೊಂಡು ಹೋಗಬಹುದೆಂದು ಮಂತ್ರಿಗಳು ಅಭಿಪ್ರಾಯಪಟ್ಟಿದ್ದಾರೆ. ಈ ವರೆಗೆ ಅರಣ್ಯ ಖಾತೆಗೆ ಭರ್ತಿಮಾಡಿಕೊಂಡವರನ್ನೆಲ್ಲ ತರಬೇತಿಗಾಗಿ ಕಳಿಸಲಾಗುತ್ತಿದ್ದರೆ ಇನ್ನು ಮೇಲೆ ಇಂಟರ ಸಾಯನ್ಸ ಪಾಸಾದವರು ಮೊದಲೇ ಅರಣ್ಯಶಾಸ್ತ್ರದ ಪದವಿ ಪಡೆಯುವ ಅವಕಾಶದೊರಕಿದೆ. ಅರಣ್ಯಶ್ರೀಗೆ ಹೆಸರಾಗಿರುವ ಕಾರವಾರದಲ್ಲಿ ಈ ಕಾಲೇಜು ತೆರೆಯುದುದಕ್ಕೆ ಆಕ್ಷೇಪವೆತ್ತುವವರು ಆರ್ಥಿಕ ಪ್ರಶ್ನೆಯನ್ನು ಗಮನಿಸಬೇಕೆಂದು ಸೂಚಿಸಬೇಕಾಗಿದೆ. ೧೯೨೦ ರಲ್ಲಿ ಧಾರವಾಡದಲ್ಲಿಯೂ ೧೯೩೮ ರಲ್ಲಿ ಪುಣೆಯಲ್ಲಿಯೂ ತೆರೆದ ಕಾಲೇಜುಗಳು ತುಂಬ ಹಾನಿಗೆ ಕಾರಣವಾದವು. ಆದುದರಿಂದ ಈ ಬಾರಿ ಧಾರವಾಡದ ಈಗಾಗಲೆ ಇರುವ ಒಕ್ಕಲತನ ಕಾಲೇಜಿಗೆ ಹೊಂದಿಸಿ ಇದನ್ನು ತೆರೆಯುವದು ಮಿತವ್ಯಯದ ದೃಷ್ಟಿಯಿಂದ ಅನಿವಾರ್ಯವಾಗಿತ್ತು. ಪ್ರಿನ್ಸಿಪಾಲ ಹೆಜಮಾಡಿಯವರ ನೇತೃತ್ವದಲ್ಲಿ ಈ ಸಂಸ್ಥೆ ಅಭಿವೃದ್ಧಿ ಹೊಂದಲಿ. ಈ ಕಾಲೇಜಿನ ಸ್ಥಾಪನೆಗೆ ಕಾರಣರಾದ ಶ್ರೀ ಮಲ್ಲನಗೌಡರು ಅಭಿನಂದನಾರ್ಹರಾಗಿದ್ದಾರೆ.

ಕೆ ಈ ಬೋರ್ಡಿನ ಸಾಯನ್ಸ ವರ್ಗಗಳು

೧೯೪೪ ರಲ್ಲಿ ಧಾರವಾಡದಲ್ಲಿ ಸ್ಥಾಪಿತವಾಗಿ ಶಿಕ್ಷಣ ಕಾರ್ಯವನ್ನು ಸಾಗಿಸುತ್ತ ಬಂದ ಧಾರವಾಡದ ಕೆ. ಈ. ಬೋರ್ಡಿನ ಕಾಲೇಜಿನಲ್ಲಿ ಈ ವರ್ಷದಿಂದ ಸಾಯನ್ಸ (ವಿಜ್ಞಾನ) ವರ್ಗಗಳು ಪ್ರಾರಂಭವಾಗುವವೆಂದು ಬೋರ್ಡಿನ ಅಧ್ಯಕ್ಷರಾದ ಶ್ರೀ ಹುಕ್ಕೇರಿಕರ ರಾಮರಾಯರು ಪ್ರಸಿದ್ಧಿಸಿದ್ದಾರೆ. ಈ ವರೆಗೆ ಸರಕಾರಿ ಕಾಲೇಜಿನ ವಿಜ್ಞಾನ ವರ್ಗಗಳಲ್ಲಿ ಸ್ಥಾನಗಳು ದೊರೆಯದೆ ಅನೇಕ ವಿದ್ಯಾರ್ಥಿಗಳು ತಮಗೊಗ್ಗದ ವಿಷಯಗಳಲ್ಲಿ ಪದವೀ ಸಂಪಾದನೆ ಮಾಡಬೇಕಾಗುತ್ತಿತ್ತು. ಈ ಕೊರತೆಯನ್ನು ಹೋಗಲಾಡಿಸುವ ಕೆ. ಈ. ಬೋರ್ಡಿನ ಸಾಹಸ ಅಭಿನಂದನಾರ್ಹವಾಗಿದೆ. ಹಲವಿಧ ಶಿಕ್ಷಣ ಸಂಸ್ಥೆಗಳನ್ನು ನಾನಾ ಆತಂಕಗಳ ಮಧ್ಯೆ ಅನೇಕ ವರ್ಷಗಳಿಂದ ನಡೆಸಿಕೊಂಡಿರುವ ಈ ಸಂಸ್ಥೆ ಧಾರವಾಡದ ಹೊರ ವಲಯದಲ್ಲಿ ವಿದ್ಯಾರ್ಥಿ ವಸತಿ ಹಾಗು ಕಾಲೇಜು ಕಟ್ಟಡಗಳನ್ನು ಕಟ್ಟಿಸತೊಡಗಿದ್ದು ವಸತಿಯ ಕಟ್ಟಡ ಪೂರ್ತಿಯಾಗಿದೆ. ಈ ಕಾಲೇಜುಗಳ ವ್ಯವಸ್ಥೆ ಪರಿಪೂರ್ಣವಾಗಬೇಕಾದರೆ ೫ ಲಕ್ಷ ರೂಪಾಯಿಗಳು ಬೇಕಾಗಬಹುದು. ಅಷ್ಟು ನಿಧಿಯನ್ನು ಕೂಡಿಸಲು ಶ್ರೀ ಹುಕ್ಕೇರಿಕರರು ಈಗಾಗಲೆ ಪ್ರಾರಂಭಿಸಿದ್ದಾರೆ. ಉತ್ಸಾಹಕರ ದಾನಗಳೂ ಅವರಿಗೆ ದೊರೆತಿವೆ. ಈ ಸತ್ಕಾರ್ಯಕ್ಕಾಗಿ ಕೊಡುಗೈಯಿಂದ ದಾನ ಮಾಡಬೇಕೆಂದು ಬಿನ್ನವಿಸುತ್ತೇವೆ.

ಸಂಸ್ಥಾನ ವಿಸರ್ಜನೆಯ ಪ್ರಗತಿ

ಭಾವೀ ಘಟನೆಗಳ ಮುನ್ನೆರಳು ಹಾಯಿಸುತ್ತ ಮತ್ಸ್ಯ ಒಕ್ಕೂಟವು ಈ ವಾರ ರಾಜಸ್ಥಾನ ಸಂಸ್ಥಾನ ಒಕ್ಕೂಟದಲ್ಲಿ ಲೀನವಾಯಿತು. ನಾಲ್ಕು ಸಂಸ್ಥಾನಗಳನ್ನೊಳಗೊಂಡು ಕಳೆದ ವರ್ಷ ರಚಿತವಾಗಿದ್ದ ಈ ಒಕ್ಕೂಟದ ವಿಸರ್ಜನೆಯ ಬಗ್ಗೆ ಈಚೆಗೆ ಶ್ರೀ ಶಂಕರರಾವ ದೇವ ಸಮಿತಿ ವರದಿ ಒಪ್ಪಿಸಿತ್ತು. ಮಧ್ಯ ಭಾರತ ಮತ್ತು ವಿಂಧ್ಯ ಒಕ್ಕೂಟಗಳ ಜನಪ್ರಿಯ ಮುಂದಾಳುಗಳು ಹೊಣೆಯರಿತು ಕೆಲಸ ಮಾಡದಿದ್ದರೆ ಅವುಗಳಿಗೂ ಇದೇ ಗತಿ ಬರುವದೆಂದು ಸರದಾರ ವಲ್ಲಭಭಾಯಿ ಪಟೇಲರು ಕೆಲವೇ ದಿನ ಹಿಂದೆ ಎಚ್ಚರಿಕೆ ಕೊಟ್ಟಿದ್ದಾರೆ. ಚಿಕ್ಕಪುಟ್ಟ ಸಂಸ್ಥಾನಗಳಲ್ಲಿ ಭೋಪಾಲ ಮತ್ತು ರಾಮಪುರಗಳು ಈ ವರೆಗೆ "ಸ್ವಾತಂತ್ರ್ಯ"ವನ್ನು ಕಾಪಾಡಿಕೊಂಡು ಈಗ ದಾರಿಗೆ ಬಂದಿವೆ. ಭೋಪಾಲ ನವಾಬರು ಬಹಳ ಹೆಣಗಾಡಿ ಕೊನೆಗೆ ಜುಲೈ ಮೊದಲನೆ ತಾರೀಖಿನಿಂದ ಸಂಸ್ಥಾನವನ್ನು ಕೇಂದ್ರದ ಆಡಳಿತೆಗೊಪ್ಪಿಸಲು ಒಪ್ಪಿದ್ದಾರೆ. ಆದರೆ ತಮ್ಮ ಸಂಸ್ಥಾನವನ್ನು ಬೇರೆ ಘಟಕವಾಗಿ ಉಳಿಸುವ ಹುಚ್ಚನ್ನು ಅವರು ಬಿಡಲಿಲ್ಲ. ರಾಮಪುರವನ್ನು ಜುಲೈ ೧ ಕ್ಕೆ ವಹಿಸಿಕೊಂಡು ಕೇಂದ್ರವು ಮುಂದೆ ಅದನ್ನು ಯುಕ್ತಪ್ರಾಂತದಲ್ಲಿ ಲೀನಗೊಳಿಸುವದು. ಕಾಶಿ ಸಂಸ್ಥಾನಕ್ಕೆ ಸರದಿ ಬಂದಿದೆ. ತಿರುವಾಂಕೂರು-ಕೊಚ್ಚಿ ಸಮಾವೇಶ ಜೂನ್ ೧ ಕ್ಕೆ ನಡೆಯುವ ಲಕ್ಷಣವಿದೆ. ತ್ರಿಪುರ ಸಂಸ್ಥಾನವೊಂದೇ ಆ ಮೇಲೆ ಉಳಿಯುವ ಚಿಲ್ಲರೆ ಸಂಸ್ಥಾನಗಳಲ್ಲಿ ಮಹತ್ವದ್ದು. ಅವರ ಬಗ್ಗೆಯೂ ಈಗಾಗಲೆ ಮಾತುಕತೆಗಳು ನಡೆದಿವೆ. ಬಹುಶಃ ಹೊಸ ರಾಜ್ಯಘಟನೆ ಪಾಸಾಗುವ ಸಮಯದಲ್ಲಿ ಹೈದರಾಬಾದ, ಮೈಸೂರುಗಳ ಭವಿತವ್ಯವೂ ನಿರ್ಧರಿಸಲ್ಪಡುವದೆಂಬಲ್ಲಿ ಸಂದೇಹವಿಲ್ಲ.

ಶ್ವೇತಜನಾಂಗದ ಕೃಷ್ಣ ಕಾರಭಾರ

ಜರ್ಮನರ ಶಾಸ್ತ್ರೀಯ ಹಿಂಸಾಚಾರ– ಹೆರೆರೋಗಳ ಅವರ್ಣನೀಯ ದುರ್ಗತಿ–ಬ್ರಿಟಿಶರ ವಂಚನಾವೈಖರಿ– ಮಲಾನರ ಮಾಯಾವಿತನ

ಬಹುಸಂಖ್ಯ ಭಾರತೀಯರು ಬಿಳಿಯರನ್ನು ನಂಬುತ್ತಿದ್ದಿಲ್ಲ. ಇತ್ತೀಚೆಗೆ ಆ ಅಪನಂಬಿಗೆ ಸ್ವಲ್ಪ ಕಡಿಮೆಯಾಗಿದೆ; ಇದು ಕ್ಷೇಮಕ್ಕಲ್ಲ. ಪ್ರವೃತ್ತಿಭೇದ ಅವರಲ್ಲಿ ಉಂಟಾದುದಕ್ಕೆ ಯಾವ ನಿದರ್ಶನವೂ ಇಲ್ಲ. ಆಫ್ರಿಕದ ಬಣ್ಣದ ಜನರಿಗೆ ಈ ಅನಿರ್ವಣ್ಯರಾದ ವಿವರ್ಣರು ಕೊಟ್ಟ ಮತ್ತು ಕೊಡುತ್ತಿರುವ ಹಿಂಸೆಯ ಕತೆಯನ್ನು ಪ್ರೊ. ಬಾಗಲೋಡಿ ದೇವರಾಯರು ಈ ಕೆಳಗೆ ಕೊಟ್ಟಿದ್ದಾರೆ. ಮೇಲಿನ ಮಾತಿಗೆ ಇದಕ್ಕಿಂತ ಹೆಚ್ಚಿನ ಸಾಕ್ಷಿ ಬೇಕೇ ?

ದಕ್ಷಿಣ ಆಫ್ರಿಕದ ವರ್ಣಮದವೇರಿದ ಸರಕಾರಕ್ಕೆ ಅಲ್ಲಿಯ ಹಿಂದೀಯರನ್ನೂ ನೀಗ್ರೋ ಮೂಲನಿವಾಸಿಗಳನ್ನೂ ಪೀಡಿಸಿ ತನ್ನ ದಾಸರನ್ನಾಗಿ ಇಡುವುದರಲ್ಲೇ ತೃಪ್ತಿಯಾಗಿಲ್ಲ. ರಾಜ್ಯತೃಷ್ಣೆ ಅದನ್ನು ಕಾಡುತ್ತಿದೆ. ಪಕ್ಕದಲ್ಲೇ ಇರುವ ನೈಋತ್ಯ ಆಫ್ರಿಕವನ್ನು ಸಂಪೂರ್ಣ ನುಂಗಿ, ಅಲ್ಲಿಯ ಮೂಲನಿವಾಸಿ ಜನಾಂಗಗಳನ್ನು ಸಂಪೂರ್ಣವಾಗಿ ತನ್ನ ಅಧೀನಗೊಳಿಸಿ, ಅಲ್ಲಿಯ ಭೂಸಂಪತ್ತನ್ನು ದೋಚಬೇಕೆಂದು ದಕ್ಷಿಣ ಆಫ್ರಿಕ ಸೊಂಟ ಗಟ್ಟಿದೆ.

ಸ್ವಾಹಾಕಾರದ ಹಂಚಿಕೆ

ಇದು ವರೆಗೆ ನೈಋತ್ಯ ಆಫ್ರಿಕವು ಹಿಂದಿನ ಲೀಗ್ ಆಫ್ ನೇಶನ್ಸಿನ ಏರ್ಪಾಡಿನಂತೆ ಆದಿಷ್ಟ ಪ್ರದೇಶ (Mandated territory) ವಾಗಿದ್ದು ಲೀಗ್ ಆಫ್ ನೇಶನ್ಸದ ಮೇಲ್ವಿಚಾರಣೆಯಲ್ಲಿ ದ. ಆಫ್ರಿಕದಿಂದ ಆಳಲ್ಪಡುತ್ತ ಇದೆ. ವರ್ಷ ವರ್ಷವೂ ಆಡಳಿತ, ಜನರ ಸ್ಥಿತಿಗತಿಗಳ ವರದಿಯನ್ನು ಸಂ. ರಾಷ್ಟ್ರಸಂಘಕ್ಕೆ ಒಪ್ಪಿಸಬೇಕಾಗಿರುವುದರಿಂದ, ಅಲ್ಲಿ ಇದು ತನಕ ದಬ್ಬಾಳಿಕೆ, ಶೋಷಣೆ, ಕರಿಯರನ್ನು ಪೀಡಿಸಿ ಬಿಳಿಯರ ಗುಲಾಮಗಿರಿಯಲ್ಲಿರಿಸುವದು, ಇತ್ಯಾದಿ ಅತ್ಯಾಚಾರಗಳಿಗೆ ತುಸು ಮಿತಿ ಇತ್ತು. ದ. ಆಫ್ರಿಕಕ್ಕೆ ಇದರಿಂದ ಸಮಾಧಾನವಿಲ್ಲ. ನೈಋತ್ಯ ಆಫ್ರಿಕವನ್ನು ತನ್ನ ಸಾಮ್ರಾಜ್ಯದೊಳಗೇ ಸೇರಿಸಿಕೊಂಡು, ಅದನ್ನು ಸ್ವಚ್ಛಂದವಾಗಿ ಸುಲಿಯಲು, ಮತ್ತು ಅಲ್ಲಿಯ ಸಂಪತ್ತನ್ನೆಲ್ಲ ಬಿಳಿಯರ ಸೊತ್ತನ್ನಾಗಿ ಮಾಡಲು ಅಸ್ಪದ ಬೇಕಾಗಿದೆ. ಅದುಧರಿಂದ ಈ ಭೂಭಾಗವನ್ನು ದ. ಆಫ್ರಿಕದೊಳಗೇ ಸೇರಿಸುವ ಹವಣಿಕೆ ಭರದಿಂದ ಸಾಗಿದೆ. ಸಂ. ರಾ. ಸಂಘದಲ್ಲಿ ಎರಡೆರಡು ಬಾರಿ ಸ್ಪಷ್ಟವಾಗಿ ಹೀಗೆ ಮಾಡಬಾರದೆಂದು ನಿರ್ಧಾರವಾದರೂ ದ. ಆಫ್ರಿಕವು ಸಂಘದ ನಿರ್ಣಯವನ್ನು ಸಂಪೂರ್ಣ ಕಡೆಗಣಿಸಿದೆ.

ಮೊನ್ನೆ ತಾನೆ ನೈಋತ್ಯ ಆಫ್ರಿಕದ ಪ್ರತಿನಿಧಿಗಳು ದ. ಆಫ್ರಿಕದ ಶಾಸನ ಸಭೆಯಲ್ಲಿ ಸೇರುವಂತೆ ಅಲ್ಲಿ ನಿರ್ಣಯವಾಯಿತು. ಇದು ನೈಋತ್ಯ ಆಫ್ರಿಕವನ್ನು ಗುಲಾಮಗಿರಿಗಿಳಿಸುವುದರ ಪ್ರಥಮ ಸೋಪಾನ. ಮುಂದಕ್ಕೆ ಇದೇ ಭಾಗವನ್ನೇ ನುಂಗುವೆವೆಂದು ದೃಢವಾಗಿ ಮುಖ್ಯಮಂತ್ರಿ ವರ್ಣಮದಾಂಧ ಮಲಾನರೂ ಅವರ ಸರಕಾರವೂ ಘೋಷಿಸಿವೆ. ದ. ಆಫ್ರಿಕದ ಶಾಸನಸಭೆಯಲ್ಲಿ ನೈ. ಆಫ್ರಿಕಕ್ಕೆ ಕೊಡುವ ಪ್ರಾತಿನಿಧ್ಯವೆಂದರೆ [illegible] ಪ್ರಹಸನ; ಏಕೆಂದರೆ, ಮಲಾನರ ಹೊಸ ಕಾನೂನಿನ ಪ್ರಕಾರ ದ. ಆಫ್ರಿಕದ ಶಾಸನ ಸಭೆಯಲ್ಲಿ ಬಿಳಿಯರು ಮಾತ್ರ ಕುಳ್ಳಿರಲು ಅರ್ಹರು. ಆದುದರಿಂದ ನೈ. ಆಫ್ರಿಕದ ಪ್ರತಿನಿಧಿಗಳೆಲ್ಲ, ಅಲ್ಲಿಯ ಜನಸಂಖ್ಯೆಯಲ್ಲಿ ಅತಿ ಅಲ್ಪಸಂಖ್ಯಾದ ಬಿಳಿಯರೇ. [illegible] ಇವರ ಸಂಖ್ಯೆ ಅರೆಓಡಿ [illegible]. [illegible] ನೈ. ಆಫ್ರಿಕ ಸಂಪೂರ್ಣ [illegible] — ಅಂದರೆ— ಬಿಳಿಯರ ಸೊತ್ತು [illegible] ಮಾಡುವಾದುಗಳಾಗಿ [illegible] ಕೊಂಡಿದ್ದಾರೆ. ಈ [illegible] ಜೋಸಲ್ "ಪ್ರತಿನಿಧಿ" ಗಳು [illegible] ಆಫ್ರಿಕವು ದ. ಆಫ್ರಿಕದ ಭಾಗವಾಗ [illegible] ನಿರ್ಣಯವನ್ನು ತಂದು "ಸರ್ವಾನು[illegible] ಮತದಿಂದ" ಮಂಜೂರು ಮಾಡಿಸಿದರು. [illegible] ದ. ಆಫ್ರಿಕವು ನೈ. ಆಫ್ರಿಕ [illegible] ನೂ ಸಂತೋಷದಿಂದ ಸ್ವೀಕರಿಸುವುದು. [illegible] ಪ್ರಪಂಚದ [illegible] ಮುಂದಾಗಿ, [illegible] ಈ ಅಲ್ಪಸಂಖ್ಯ ಬಿಳಿಯರ [illegible] ಅವರ ಪ್ರತಿನಿಧಿಗಳೆ? [illegible] ಮುಷ್ಟಿಹಂಚಿಕೆ, ಸಂ. ರಾ.

ಸಂಘದ ನಿಷ್ಕ್ರಿಯತೆ ಮತ್ತು ರಕ್ಷಕ ಎನಿಸಿಕೊಳ್ಳುವ ದ. ಆಫ್ರಿಕದ "ಬೇಲಿ ಹೊಲನೆಲ್ಲಂ ಮೇಯುವ" ಮೋಸಗಾರಿಕೆಯಿಂದ ಬೇಗನೆ ಕೈಗೂಡುವಂತೆ ತೋರುತ್ತದೆ.

ಜರ್ಮನರ ನಾಗರಿಕತೆ!

ನೈಋತ್ಯ ಆಫ್ರಿಕದ ಇತಿಹಾಸ ಅತಿದಾರುಣವಾದುದು. ೧೯ ನೆಯ ಶತಮಾನದ ತನಕ ಅಲ್ಲಿ ಅನೇಕ ಸ್ವತಂತ್ರ ನೀಗ್ರೋ ಜನಾಂಗಗಳು ಸ್ವಚ್ಛಂದವಾಗಿ ಬಾಳಿಕೊಂಡಿದ್ದವು. ಅವುಗಳಲ್ಲಿ ಹೆರ್ರೆರೊ (Herrero) ಎಂಬ ಜನಾಂಗ ಶ್ರೇಷ್ಠವೂ ಬಲಿಷ್ಠವೂ ಆದುದು; ಆಕಾರದಲ್ಲೂ ವರ್ಣದಲ್ಲೂ ಆಫ್ರಿಕ ಖಂಡದ ನೀಗ್ರೋ ಜಾತಿಗಳಲ್ಲಿ ಉತ್ಕೃಷ್ಟವಾದ ಯೋಧರ ಮತ್ತು ಗೋವಳರ ಜನಾಂಗ. ಆ ಕಾಲದಲ್ಲಿ ಜರ್ಮನ್ ವಲಸೆಗಾರರು ಭೂಮಿಯ ಲಾಲಸೆಯಿಂದ ಹಸಿದ ತೋಳಗಳಂತೆ ಬಂದು ಎರಗಿ ಈ ನಿರಪರಾಧಿಗಳ ಮೇಲೆ ಬಿದ್ದರು. ಹೆರೆರೋ ಜನರು ಅತಿಶೌರ್ಯದಿಂದ ಕಾದಿದ್ದು ಫಿರಂಗಿ ಗುಂಡುಗಳೆದುರು ವ್ಯರ್ಥವಾಯಿತು. ಜರ್ಮನರ ಸೇನಾನಿ ಜನರಲ್ ಫೋನ್‌ತ್ರೋಥಾ (Von Trotha) ನು ಮೂಲನಿವಾಸಿಗಳನ್ನೆಲ್ಲ ಆ ಭೂಮಿಯನ್ನು ಬಿಟ್ಟುಕೂಡಲೇ ತೊಲಗಬೇಕೆಂದೂ, ಆ ಭೂಮಿ ಮಹಾಪುರುಷರಾದ ಜರ್ಮನರಿಗೇ ದಕ್ಕಬೇಕೆಂದೂ ಘೋಷಿಸಿದನು. ಹೆರೆರೋಗಳು ಪ್ರತಿಭಟಿಸಿದರು. ಕೂಡಲೇ ದನಕರು ಸಹಿತ ಅವರ ಸರ್ವಸ್ವವನ್ನೂ ಜರ್ಮನರಿಗೆ ಒಪ್ಪಿಸಬೇಕೆಂದು ಅಜ್ಞೆ ಹೊರಟಿತು. ಹೆರೆರೋಗಳು ತಾವಾಗಿಯೇ ಸರ್ವನಾಶವನ್ನು ಅಪ್ಪಲು ಒಪ್ಪಲಿಲ್ಲ. ಆದುದರಿಂದ ಜರ್ಮನ್ ಜನರಲ್ ತ್ರೋಥಾನು ನಿರ್ದಾಕ್ಷಿಣ್ಯವಾಗಿ ೧೯೦೪ ರಲ್ಲಿ "ವಿನಾಶದಆಜ್ಞೆ" (Extermination Order–"Vernichtungs Befehl") ಯನ್ನು ಹೊರಡಿಸಿದನು. ಘೋರವಾದ ಕೊಳ್ಳೆ, ಕೊಲೆ, ವಿನಾಶ, ವಿಧ್ವಂಸ, ಹಿಂಸಾಕಾಂಡಗಳಾದುವು. ಮಕ್ಕಳು ಮರಿ ಹೆಂಗಸು ಗಂಡಸೆನ್ನದೆ ಕಂಡಕಂಡವರನ್ನು ಬಂದೂಕಿನಿಂದ ಸುಟ್ಟರು. ಕತ್ತಿಯಿಂದ ತಿವಿದು ಕೊಂದರು. ಜರ್ಮನರದು ಅತಿ ವೈಜ್ಞಾನಿಕ ಮತ್ತು ಶಾಸ್ತ್ರೀಯವಾದ ಬುದ್ಧಿ. ಎಲ್ಲ ಕೆಲಸಗಳನ್ನೂ ಶಾಸ್ತ್ರೀಯವಾಗಿ ಮಾಡುತ್ತಾರೆ! ಹಾಗೆಯೆ ಹೆರೆರೋಗಳ ವಿನಾಶವನ್ನೂ ಅತಿ ನಾಜೂಕಾಗಿ, ಶಾಸ್ತ್ರೀಯವಾಗಿ ನಡೆಸಿದರು. Judgment On German Africa ಎಂಬ ಗ್ರಂಥದಲ್ಲಿ ಈ ಧ್ವಂಸ ಕಾರ್ಯದ [illegible] ವರ್ಣನೆಯಿದೆ.

ಜರ್ಮನ್ ಸೈನಿಕರು ಹೆರೆರೊ ಗಂಡಸರನ್ನು ಕೊಲೆ ಮಾಡುದುದು ಮಾತ್ರವಲ್ಲದೆ ಹೆಂಗಸರ ಮೇಲೆ ಅಮಾನುಷ ಅತ್ಯಾಚಾರಗಳನ್ನು ನಡೆಸಿದರು. ಸೈನಿಕರ ಹೋಟೇಲು, ಉಪಾಹಾರಗೃಹಗಳಲ್ಲಿ (Canteen) ಮೇಜಿನ ಮೇಲೆ ಹೆರೆರೋ ರಮಣಿಯರನ್ನು ಮಲಗಿಸಿ ಅವರ ನಗ್ನ ಹೊಟ್ಟೆಯ ಮೇಲೆ ಇಸ್ಪೀಟು ಆಡುತ್ತಿದ್ದರಂತೆ! "ನಾಗರಿಕ" ರಾದ ಜರ್ಮನ್ ಜನಾಂಗದ ವಿನೋದ ವಿಹಾರವಿದು! ಹೆರೆರೊ ಜನರ ವಿಶಬಾಣ– ಬಿಲ್ಲು, ಗದೆಗಳು ಬಿಳಿಯರ ಫಿರಂಗಿ ಗುಂಡುಗಳೆದುರು ನಿಷ್ಫಲವಾದುವು. [illegible] ಹೆರೆರೋಗಳಲ್ಲಿ [illegible] ಅಭಾಗ್ಯ [illegible] ರು. ಈ ಹತರೇಶು ೬೫,೦೦೦ ಮಂದಿ ಬೇಚು [illegible] ಮತ್ತು [illegible] ಭೂಮಿಗಳಲ್ಲಿ [illegible] ದರು. ಬೆಚುವ [illegible] ಅವರ ಸಂಕಟದ [illegible] ಪ್ರತ್ಯಕ್ಷ [illegible] ಎಂಬಾತನನ್ನು ಅರಸನನ್ನಾಗಿ ಮಾಡಿಕೊಂಡು ಬಾಳಿಕೊಂಡಿದೆ. ಉಳಿದ ಎಪ್ಪತ್ತೈದು ಸಾವಿರ ಜನರನ್ನು ಮೃಗಗಳಂತೆ ಬೇಟೆಯಾಡಿ ಕೊಂದರು. (ಫ್ರಾಂಕ್ಫರ್ಟರ ಲೇಖನದಿಂದ)

ಬ್ರಿಟಿಶರ ನ್ಯಾಯ !

೧೯೧೪ ನೇ ಇಸವಿಯಲ್ಲಿ ಬ್ರಿಟನ್ನಿಗೆ ಗಂಡಾಂತರ ಪ್ರೊದಗಿತಷ್ಟೆ. ಆಗ ಬ್ರಿಟಿಶರು ಹೆರೆರೋ ಜನರಿಗೆ ಅವರ ಭೂಮಿಯನ್ನು ಅವರಿಗೆ ಹಿಂದೆ ಕೊಡುವ ಆಶೆ ತೋರಿಸಿ, ಅಲ್ಲಲ್ಲಿ ಚದರಿ ಹೋಗಿದ್ದ ಈ ಹತಭಾಗ್ಯರನ್ನು ಕಲೆ ಹಾಕಿ, ಸೈನ್ಯ ಕಟ್ಟಿ ಜರ್ಮನರ ಮೇಲೆ ಛೂ ಬಿಟ್ಟು, ಧಾಳಿ ಮಾಡಿಸಿದರು. ಹೆರೆರೋಗಳ ಸಾಹಸ ಮತ್ತು ಸೇವೆ, ದುಡಿತಗಳಿಂದ ಬ್ರಿಟಿಷರಿಗೆ ಜರ್ಮನರನ್ನು ಆಫ್ರಿಕ ಖಂಡದಿಂದ ಒದ್ದೋಡಿಸುವುದು ಸಾಧ್ಯವಾಯಿತು. ಆದರೆ ವಿಜಯ ದೊರೆತೊಡನೆಯೇ ಬ್ರಿಟಿಷರಿಗೆ ತಮ್ಮ ವಚನ, ಹೆರೆರೋಗಳ ಸೇವೆ-ಸಹಾಯ ಎಲ್ಲ ಮರವೆಯಾಯಿತು. ೧೯೧೫ ರಲ್ಲಿ ಹೆರೆರೋಜನರೆಲ್ಲ ಆಶೆಯಿಂದ, ತಮ್ಮ ಮಾತೃಭೂಮಿಗೆ ದನಕರುಗಳ ಮಂದೆಗಳೊಡನೆ ಮರಳಿದಾಗ, ಅಲ್ಲಿ ಅವರಿಗೆ ದಕ್ಷಿಣ ಆಫ್ರಿಕದ ಕೋವಿ ಹಿಡಿದ ಪೋಲೀಸರ ಸ್ವಾಗತ ದೊರೆಯಿತು. ಲೀಗ್ ಆಫ್ ನೇಶನ್ಸ್ ಬ್ರಿಟಿಷರ ಸೂಚನೆಯಂತೆ ನೈಋತ್ಯ ಆಫ್ರಿಕವನ್ನು "ಆದಿಷ್ಟ ಪ್ರದೇಶ"ವಾಗಿ ದಕ್ಷಿಣ ಆಫ್ರಿಕಕ್ಕೆ ದಾನ ಮಾಡಿತ್ತು. ದ. ಆಫ್ರಿಕದ ಬೋವರರ ಸತ್ತೆ ಅಲ್ಲಿ ನೆಲಸಿತು.

ಆ ಭೂಮಿಯ ಮೂಲ ನಿವಾಸಿಗಳೂ, ನಿಜವಾದ ಹಕ್ಕುದಾರರೂ ಆಗಿದ್ದ ಹೆರೆರೋ ಜನರಿಗೆ ಅವರ ಜನ್ಮ ಭೂಮಿಯನ್ನೂ ಹುಲ್ಲುಗಾವಲುಗಳನ್ನೂ ಹಿಂದೆ ಕೊಡುವ ಮಾತು ಅಂತಿರಲಿ. ಅದರ ಬದಲು, ಅಂಗೋಲದಿಂದ ಜಮೀನು ಇಲ್ಲದ ದರಿದ್ರ ಬಿಳಿಯರು ಪಡೆಗಟ್ಟಿ ಬಂದರು. ಸರಕಾರವು ಅವರಿಗೆ ಭೂಮಿಯನ್ನೆಲ್ಲ ಹಂಚಿತು. ಹೆರೆರೋಗಳ ಭೂಮಿ ಅವರ ಕಣ್ಣೆದುರೇ ಸೂರೆಯಾಯಿತು. ನಿರಾಶರಾದ ಹೆರೆರೋಗಳಲ್ಲಿ ಕೆಲವರು ಕುನೆನೆ ನದಿಯ ದಡದಲ್ಲಿ ಗುಟ್ಟಾಗಿ ನೆಲಸಿ, ಗುಡಿಗುಡಾರ (Kraal) ಗಳನ್ನು ಕಟ್ಟಿ ಮಂದೆಗಳನ್ನು ಸಾಕತೊಡಗಿದ್ದರು; ಸ್ವಲ್ಪವೇ ಸಮಯದಲ್ಲಿ ಸರಕಾರವು "ಈ ಭೂಮಿಯೂ ಅಂಗೋಲದಿಂದ ಕರೆತಂದ ದರಿದ್ರ ಬಿಳಿಯರಿಗೆ ಬೇಕು" ಎಂದು ಸಾರಿ ಹೆರೆರೋಗಳನ್ನು ಅಲ್ಲಿಂದ ಅಟ್ಟಿತು. ಇದೊಂದು ಗಡುತರವಾದ ಕೆಲಸವಾಗಿರಲಿಲ್ಲ. ಸೈನಿಕರು ಅವರ ದನಕರುಗಳ ಹಿಂಡುಗಳನ್ನು ಅಟ್ಟಿ ಬಿಡುತ್ತಿದ್ದರು. ಈ ಬಡವರು ತಮ್ಮ ಸರ್ವಸ್ವವಾದ ಹಿಂಡುಗಳ ಹಿಂದೇ ಓಡಬೇಕಾಗುತ್ತಿತ್ತು.

ಹೆರೆರೋಗಳ ಸ್ವಾಭಿಮಾನ

ಕೊನೆಗೆ ಅತಿ ಔದಾರ್ಯದಿಂದೆಂಬಂತೆ ಎಂಟು ತುಂಡು ಬಂಜರು ಗ್ರಾಮಗಳನ್ನು ಈ ಜನಾಂಗಕ್ಕೆ ಕೊಟ್ಟರು. ಇಲ್ಲಿ ಹೆರೆರೋಗಳಿಗಾಗಲಿ, ಅವರ ದನಕರುಗಳಿಗಾಗಲಿ, ಹೊಟ್ಟೆ ಹೊರೆದುಕೊಳ್ಳುವುದು ಅಸಾಧ್ಯ. ಈ ಜನಾಂಗದ ಜೀವನದ ಧಾರಣೆಯ, ಪೋಷಣೆಯ ಭಾರವನ್ನು ಜನಾಂಗದ ಹೆಣ್ಣು ಜಾತಿ ಹೊತ್ತಿದೆ. ಹೆರೆರೋ ಜನಾಂಗದ ಹೆಂಗಸರು ತಮ್ಮ ದೇಹವನ್ನು ಬಿಳಿಯರಿಗೂ, [illegible] (ಅರೆಬಿಳಿ ಮನುಷ್ಯ ಜಂತು) ಮಾರಿ ತಮ್ಮ ಗಂಡಂದಿರ ಉದರ ಪೋಷಣೆ ಮಾಡುತ್ತಾರೆ. ಆದರೆ ಈ ಹತಭಾಗ್ಯ ಜನಾಂಗಕ್ಕೆ ಆತ್ಮ ಗೌರವವಿನ್ನೂ ಹೋಗಿಲ್ಲ. ಈ ಹೆಂಗಸರು ಹೊಟ್ಟೆಯ ಹಸಿವಿಗಾಗಿ ದೇಹವಿಕ್ರಯಕ್ಕೆ ತುತ್ತಾದರೂ, ಬಿಳಿಯನ ರಕ್ತದ ಮಕ್ಕಳನ್ನು ಹೆರಲು ಇಷ್ಟಪಡುವುದಿಲ್ಲ.

ಸಂಕರ ಜಾತಿಯ ಪ್ರಾಣಿಯ ತಾಯಿಯಾಗುವುದು ಅಪಮಾನಕರನೆಂದು ತಿಳಿದು ಈ ವೃತ್ತಿಯನ್ನು ಕೈಗೊಂಡ ಹೆಂಗಸರಲ್ಲಿ ಹೆಚ್ಚಿನವರು ಮದ್ದು–ಮಾಟಗಳಿಂದ ತಮ್ಮನ್ನು ಬಂಜೆಯರನ್ನಾಗಿ ಮಾಡಿಕೊಳ್ಳುತ್ತಾರೆ. ಇದರ ಫಲವಾಗಿ ಹೆರೆರೋಗಳಲ್ಲಿ ಸಂತಾನಾಭಿವೃದ್ಧಿ ಇಲ್ಲ. ಮರಣ ಸಂಖ್ಯೆಯೋ, ಹಸಿವು, ದಾರಿದ್ರ್ಯ, ರೋಗಾದಿಗಳಿಂದ ದಿನೇ ದಿನೇ ಏರುತ್ತಲಿದೆ. ವೇಶ್ಯಾವೃತ್ತಿ, ಅದರ ಫಲವಾದ ಗುಹ್ಯ ರೋಗಗಳು ಮತ್ತು ಸಂತಾನನಿರೋಧದಿಂದ ಜನಸಂಖ್ಯೆ ದಿನೇ ದಿನೇ ಕುಂದುತ್ತಲಿದೆ. ಹಾಗಾಗಿ ಇಡೀ ಜನಾಂಗವೇ ಕ್ಷಮಿಸುತ್ತಾ, ಕ್ಷಯಿಸುತ್ತಾ, ಮರಣಾಸನ್ನವಾಗಿದೆ. ಇದು ದ. ಆಫ್ರಿಕದ ಬಿಳಿಯರ ಕುಪಾತ್ರ್ಯಧರ್ಮ. ಇದನ್ನೇ ಕುರಿತು ಇದೇ ಬಿಳಿಯರು ಸಂ. ರಾ. ಸಂಘದಲ್ಲಿ "ಹೆರೆರೋ ಜನರು ಅಯೋಗ್ಯರು, ಕ್ಷಯಿಸುತ್ತಿರುವವರು ಪತಿತರು; ಅವರು ಸ್ವತಂತ್ರ್ಯಕ್ಕಾಗಲಿ, ನಾಗರಿಕ ಹಕ್ಕು ಬಾಧ್ಯತೆಗಳಿಗಾಗಲಿ, ಯಾವ ರೀತಿಯಿಂದಲೂ ಅರ್ಹರಲ್ಲ" ಎಂದು ಅನುಕೂಲವಾಗಿ ಚಾತುರ್ಯದಿಂದ ಘೋಷಿಸಿದ್ದಾರೆ. ("The Hereros Are Demoralisd, Degenerate, And Dying They Do Not Matter At All") "ಕರಿಯನಿಂದ ಬಲಾತ್ಕಾರದಿಂದ ಬೂಟು ತಿಕ್ಕಿಸಿ, ಆ ಮೇಲೆ ಅತನ ಕಡೆ ಬೆರಳು ತೋರಿಸಿ, 'ಕರಿಯ ಜನಾಂಗವಿದೇ ಬೂಟು ತಿಕ್ಕುವುದಕ್ಕೆಯೇ ಹುಟ್ಟಿದುದೆಂದೂ, ಆ ಕೆಲಸಕ್ಕೆ ಅರ್ಹವೆಂದೂ ಸಿದ್ಧಾಂತಪಡಿಸುವುದು ಬಿಳಿಯರ ಹಳೆಯ ನೀತಿ" ಎಂದು ಬರ್ನಾರ್ಡ್ ಷಾ ಅಂದುದು ಸುಮ್ಮನಲ್ಲ.

ದೊಡ್ಡ ದೊಡ್ಡ ಧ್ಯೇಯಗಳನ್ನು ಒದರುತ್ತಿರುವ ಸಂ. ರಾ. ಸಂಘವಾಗಲಿ, "ನಾಗರಿಕ" ರೆಂದೆನಿಸಿಕೊಳ್ಳುವ ಜನಾಂಗಗಳಾಗಲಿ, ನೀತಿಪ್ರವಾದಿಗಳೆಂದೆನಿಸಿಕೊಳ್ಳುವ ಕ್ರೈಸ್ತ ಪಾದರಿಗಳಾಗಲಿ, ಈ ದುಃಖಿ ಜನಾಂಗದ ಸಹಾಯಕ್ಕೆ ಬರುತ್ತಿಲ್ಲ. ದೀನ ಬಂಧುವಾದ ರೆವರೆಂಡ್ ಮೈಕೇಲ್ ಸ್ಕಾಟ್ ಒಬ್ಬನೇ ಇದಕ್ಕೆ ಅಪವಾದ.

ಬಿಳಿಯರ ಧರ್ಮಪ್ರಸಾರದ ಸೋಗು

ಧರ್ಮ ಪ್ರಚಾರಕರ "ನೀತಿ–ಧರ್ಮ" ಗಳ ಒಂದು ಉದಾಹರಣೆ ಕಾಣಿರಿ: ಹೆರೆರೋ ಜನಾಂಗದವರು, "ನಾಗರಿಕ" ರೆಂದೆನಿಸಿಕೊಳ್ಳುವ ಸ್ವಾರ್ಥಿಬೋವರ ಜನಾಂಗಗಳ ಸಂಪರ್ಕವಾಗುವ ತನಕ ಶುದ್ಧ ನಗ್ನರಾಗಿಯೇ ಇರುತ್ತಿದ್ದರು. ಆಫ್ರಿಕದ ಉರಿಸೆಕೆಯಲ್ಲಿ ಉಡುಪೆಂಬುದು ಬರಿಯ ಐರೋಪ್ಯ ಬೆಡಗೇ ಸರಿ. ಬಿಳಿಯರು ಬಂದ ಮೇಲೂ, ಅವರ ಅನ್ಯಾಯ ಕೋಟಿಯನ್ನು ಅನುಭವಿಸಿದ ಹೆರೆರೋ ಜನರು ಬಿಳಿಯರ ಉಡಿಗೆ–ತೊಡಿಗೆಯನ್ನು ಮೋಹಿಸಲಿಲ್ಲ. ಆದರೆ ಕ್ರಿಸ್ತೀ ಪಾದರಿಗಳೂ ಮಿಶನರಿಗಳೂ ಬಂದು ಅವರನ್ನು ಸರಕಾರ ಮತ್ತು ಪೋಲೀಸುಗಳ ಸಹಾಯ ಬಲಾತ್ಕಾರಗಳಿಂದ ಕ್ರಿಸ್ತ ಧರ್ಮಕ್ಕೆ ಬಗ್ಗಿಸಿದರು. ಅವರ ಪೂರ್ವಜರ ದೈವ ದೇವತೆಗಳ ಪವಿತ್ರ ಗುಡಿಗಳನ್ನು ನಾಶಮಾಡಿದರು; ಮತ್ತು ಬೆತ್ತಲೆಯಾಗಿರುವುದು ದೇವರು ಧರ್ಮಗಳಿಗೆ ವಿಪರೀತವೆಂದೂ ಅನೀತಿಕರವೆಂದೂ ಗದರಿಸಿ ಬೆದರಿಸಿ ಹೆರೆರೋ ಹೆಂಗಸರಿಗೆ ಒತ್ತಾಯದಿಂದ ಗವನು (ಲಂಗ) ತೊಡಿಸಿದರು. ಹೆರೆರೋ ಹೆಂಗಸರ "ನೀತಿ" ಉಳಿಯಿತಷ್ಟೇ! ಈ "ನೀತಿವಂತ" ಪಾದರಿಗಳ ಕಣ್ಣೆದುರೇ ಲಂಗ ಧರಿಸಿದ ಬಡ ಹೆರೆರೋ ಹೆಂಗಸರು ಬಿಳಿಯರ ವೇಶ್ಯೆಯರಾಗಿ ಜೀವಧಾರಣೆ ಮಾಡಿಕೊಂಡುದೂ ಅದರಿಂದ ಗುಹ್ಯರೋಗಗಳು ಪಾರಂಪರಿಕವಾಗಿ ಹಬ್ಬುತ್ತಿರುವುದೂ, ಈ ದೇವ ಭಕ್ತರಾದ ಪುಣ್ಯಾತ್ಮರಿಗೆ ಅನೀತಿಯಾಗಿ ತೋರಲೇ ಇಲ್ಲ. ಅವರೊಂದು ಕಿರಿ ಬೆರಳನ್ನೂ ಎತ್ತದೆ, ತಮ್ಮ ಧರ್ಮ ಪ್ರಚಾರದ ಪುಣ್ಯಕಾರ್ಯದಲ್ಲೇ ಮಗ್ನರಾಗಿದ್ದಾರೆ!

ಸ್ಮಟ್ಸರ ಪ್ರಹಸನ

ಹಿಂದಿನ ವರುಷ, ನೈಋತ್ಯ ಆಫ್ರಿಕದಲ್ಲಿ ದ. ಆಫ್ರಿಕದ ಹಿಂದಿನ ಪ್ರಧಾನಮಂತ್ರಿ ಸ್ಮಟ್ಸ್ ಸಾಹೇಬರು ದ. ಆಫ್ರಿಕದೊಳಗೆ ನೈ. ಆಫ್ರಿಕವೂ ಅಂತರ್ಗತವಾಗಬೇಕೇ ಬೇಡವೇ ಎಂಬ ಪ್ರಶ್ನೆಯನ್ನು "ಜನತೆ"ಯ ಎದುರಿಗಿಟ್ಟು ಜನಮತಗಣನೆಯ ಪ್ರಹಸನ ನಡೆಸಿದರು. ಅಲ್ಲಿಯ ಮೂರು ಹಿಡಿಯಷ್ಟರ ಬಿಳಿಯರೇನೋ ಸರ್ವಾನುಮತಿಯಿಂದ ದ. ಆಫ್ರಿಕಕ್ಕೇ ಸೇರಬೇಕು– ಎಂದು ಗಂಟಲು ಹರಿವಂತೆ ಅರ್ಭಟಿಸಿದರು. ಆದರೆ ಹೆಚ್ಚಿನ ಮೂಲನಿವಾಸಿಗಳು ಇದನ್ನು ಮೆಚ್ಚಲಿಲ್ಲ. ದ. ಆಫ್ರಿಕದ ಆದಿಷ್ಟ ಪ್ರದೇಶದ ರಾಮರಾಜ್ಯವನ್ನು ಅನುಭವಿಸಿಯೇ ಅವರು ಬೆಂಡಾಗಿದ್ದಾರೆ. ಇನ್ನು ದ. ಆಫ್ರಿಕದ ಪ್ರತ್ಯಕ್ಷ ಸ್ವರ್ಗ ಸುಖ ಅವರಿಗೆ ಬೇಕಿರಲಿಲ್ಲ. ಆದರೆ ಸ್ಮಟ್ಸರು ಚಮತ್ಕಾರ ನಡೆಯಿಸಿ ಕೆಲವು ಗುರಿಕಾರರನ್ನು ಗದರಿಸಿ ಬೆದರಿಸಿ, ಕೆಲವರನ್ನು ಬೆಸಗಾಗಿಸಿ ಅವರ ಅನುಮತಿಯನ್ನು ಸೆಳೆದುಕೊಂಡರು. ಅವರೂ, ಈ "ಮತಗಣನೆ"ಯಲ್ಲಿ ಸ್ಮಟ್ಸರ ಗದರಿಕೆ ಬೆದರಿಕೆ, ಪ್ರಲೋಭನ, 'ಮರುಗುವ ಮಾತುಗಳಿಗೆ ಹೆರೆರೋ ಜನಾಂಗವು ಸೊಪ್ಪುಹಾಕಲೇ ಇಲ್ಲ. ಆ ಜನಾಂಗಕ್ಕೆ ಬಿಳಿಯರ ನ್ಯಾಯದ ಸ್ವರೂಪ ಛೀಕರವಾಗಿ ತಿಳಿದಿದೆ. ಆದುದರಿಂದ ಹಠತೊಟ್ಟು ಸ್ಮಟ್ಸರ ಬರವಣಿಗೆ ಮತ್ತು ಪ್ರಕಟಣೆಗೆ ರುಜುಮಾಡಲು ನಿರಾಕರಿಸಿದರು. ಅವರಿರುವ ಅತೀವ ದುರ್ಗತಿ ಮತ್ತು ಸಂಕಟದ ತಾಪದಲ್ಲಿ ಅವರಿಗೆ ಬಿಳಿಯರ ಭಯವೂ ಆರಿ ಹೋಗಿದೆ!

—೪ ನೆಯ ಪುಟಕ್ಕೆ

ಸೇಡು— ಸಾವು

[ವೀ. ಪುಟ್ಟಮಾದಪ್ಪ]

ಅಂದು ಆತ ವೈರಿಗಳ ಮೇಲೆ ಸೇಡುತೀರಿಸಿಕೊಳ್ಳಲು ಪಣತೊಟ್ಟು ವಿಮಾನವನ್ನೇರಿದ್ದ. ಅವನ ವಿಚಿತ್ರವರ್ತನೆಯನ್ನು ಕಂಡು ಅಂದು ಅವನ ಸ್ನೇಹಿತರೆಲ್ಲರೂ ಚಕಿತರಾಗಿದ್ದರು. ವಿಮಾನ ನಿಲ್ದಾಣಕ್ಕೆ ಬಂದೊಡನೆ ತನ್ನ ಸ್ನೇಹಿತರೆಲ್ಲರೂ ಕಲೆತಿರುತ್ತಿದ್ದ ಕೊಠಡಿಗೆ ಹೋಗಿ, ಅವರೊಡನೆ ನಕ್ಕುನಲಿದು ವೇಳೆಯಾಯಿತೆಂದು ಗಂಟೆಬಾರಿಸಿದಾಗ ವಿಮಾನವನ್ನೇರಿ ಶತ್ರುನಗರದ ಮೇಲೆ ದಾಳಿಮಾಡಲು ಹೋಗುತ್ತಿದ್ದುದು ಆತನ ರೂಢಿ. ವಿಮಾನವನ್ನೇರುವಾಗಮಾತ್ರ ಅವನ ಮುಖ ಕಠೋರವಾಗುತ್ತಿತ್ತು. ಇತರ ಸಮಯಗಳಲ್ಲಿ ಆತ ಹಸನ್ಮುಖಿಯಾಗಿರುತ್ತಿದ್ದ. ಆದರೆ ಅಂದು ಬಹಳ ಮೌನದಿಂದ, ಕೆಳಮೊಗನಾಗಿ ಒಳ ಬಂದ ಆತನನ್ನು ಕಂಡು ಆತನ ಸ್ನೇಹಿತರೆಲ್ಲರೂ ಆಶ್ಚರ್ಯಪಟ್ಟರು. ಮೂಲೆಯಲ್ಲಿದ್ದ ಒಬ್ಬಿಬ್ಬರು, "ಇಂದು ಎಲ್ಲೋ ಬಹಳ ಕುಡಿದಿರಬೇಕು" ಎಂದು ನಗೆಯಾಡಿದರು. ಅವರ ಪಕ್ಕದಲ್ಲಿದ್ದ ಮತ್ತೆ ಕೆಲವರು, "ಆತ ದಾಳಿಯ ವಿಷಯವನ್ನು ಕುರಿತು ಯೋಚಿಸುತ್ತಿರಬೇಕು" ಎಂದುಕೊಂಡರು. ಆತ ಮಾತ್ರ ಯಾವುದನ್ನೂ ಲಕ್ಷಿಸದೆ ನೇರವಾಗಿ ಗುಂಪಿನ ನಡುವೆ ಬಂದು ನಿಂತ. ನೆರೆದಿದ್ದವರಿಗೆ ಆತನ ಮುಖ ಬಹಳಕಠೋರವಾಗಿ ಕಂಡುಬಂದಿತು. ಆತನ ಕಣ್ಣುಗಳು ಕೆಂಪಗಾಗಿದ್ದುವು. ಆತ ಒಮ್ಮೆ ಸುತ್ತಲೂ ನೋಡಿ, ಹತ್ತಿರದಲ್ಲಿದ್ದ ಒಬ್ಬ ಹಿಡಿದಿದ್ದ ಲೋಟವನ್ನು ಇಸಿದುಕೊಂಡು ಲೋಟವನ್ನು ಮೇಲಕ್ಕೆತ್ತಿಹಿಡಿದು ಉಚ್ಚ ಕಂಠದಲ್ಲಿ "ಸೇಡು ಇಲ್ಲವೇ ಸಾವು" ಎಂದೆಂದು ಲೋಟದಲ್ಲಿದ್ದ ದ್ರವವನ್ನು ಬಾಯಿಗೆ ಸುರಿದುಕೊಂಡ. ಅವನ ಸ್ನೇಹಿತರೆಲ್ಲರೂ ದಿಙ್ಮೂಢರಾಗಿ ನಿಂತರು. ಆತನೇಕೆ ಹಾಗೆ ಹೇಳಿದ ಎನ್ನುವುದು ಮಾತ್ರ ಒಬ್ಬನಿಗೂ ತಿಳಿಯಲಿಲ್ಲ. ಬರಿದಾದ ಲೋಟವನ್ನು ಆತ ರೊಯ್ಯನೆ ನೆಲಕ್ಕೆಸೆದ. ಗಾಜಿನ ಚೂರುಗಳು ಸಿಡಿದು ಬಹುದೂರಕ್ಕೆ ಹೋಗಿಬಿದ್ದುವು. ಬಳಿಕ ಆತ ಸರಿದು ಗುಂಪಿನಿಂದ ಹೊರಗೆ ಬಂದು ಕಂಭವೊಂದಕ್ಕೊರಗಿ ನಿಂತ. ನಿಲ್ದಾಣವನ್ನು ವಿಮಾನಗಳು ಬಿಡಲು ಇನ್ನೂ ವೇಳೆಯಿತ್ತು. ಅಷ್ಟರಲ್ಲಿ ಸೇವಕನೊಬ್ಬ ಏದುತ್ತ ಓಡಿಬಂದು ಕೊಠಡಿಯಲ್ಲಿ ಸೇರಿದ್ದ ವಿಮಾನಚಾಲಕರಿಗೆ ಕಾಗದವೊಂದನಿತ್ತ. ಕುತೂಹಲದಿಂದ ಎಲ್ಲರೂ ಕಾಗದ ಓದುವವನ ಸುತ್ತ ನಿಂತರು. ಕಾಗದದಲ್ಲಿ ಅಂದು ದಾಳಿಮಾಡಬೇಕಾದ ಪಟ್ಟಣದ ಹೆಸರು, ಸ್ಥಳಗಳ ಹೆಸರು ಎಲ್ಲವೂ ಬರೆಯಲ್ಪಟ್ಟಿದ್ದುವು. ವೈಮಾನಿಕನೊಬ್ಬ ಹೊರಗೆ ಬಂದು ಕಂಭಕ್ಕೊರಗಿನಿಂತಿದ್ದ. ಆತನಿಗೆ ಸುದ್ದಿ ತಿಳಿಸಿದ. ಆತ ಮಾತನಾಡಲಿಲ್ಲ. 'ಒಳ್ಳೆಯದು' ಎಂದು ಮಾತ್ರ ಹೇಳಿದ. ಒಂದೆರಡು ನಿಮಿಷಗಳಲ್ಲಿ ಆತನ ತುಟಿಗಳ ಮೇಲೆ ಹುಸಿನಗೆಯೊಂದು ಮೂಡಿತು; ಆತನ ಬೆರಳುಗಳು ಮುಷ್ಟಿಬಿಗಿದುವು. ಮೆಲ್ಲನೆ ಆತ "ಎಲ್ಲವೂ ಒಳ್ಳೆಯದಕ್ಕೆ. ಈ ಪಟ್ಟಣದ ಮೂಲೆ ಮೂಲೆಯೂ ನನಗೆ ತಿಳಿದಿದೆ. ನನ್ನ ಸೇಡನ್ನು —ನನ್ನಪತ್ನಿಯ ಸೇಡನ್ನು—ಇಂದೇ ತೀರಿಸಿಕೊಳ್ಳುತ್ತೇನೆ" ಎಂದುಕೊಂಡ.

ಗಂಟೆ ಬಾರಿಸಿತು. ಲಗುಬಗೆಯಿಂದ ಕೊಠಡಿಯಲ್ಲಿ ಕೂಡಿದ್ದವರೆಲ್ಲ ತಮ್ಮ ಬಟ್ಟೆಗಳನ್ನು ಸರಿಪಡಿಸಿಕೊಳ್ಳುತ್ತ ವಿಮಾನಗಳು ನಿಂತಿದ್ದ ಸ್ಥಳಕ್ಕೆ ನಡೆದರು. ಎಲ್ಲರಿಗೂ ಮುಂದೆ ಆತ ಹಾರಿದ್ದ. ಅಂದು ವಿಮಾನದಲ್ಲಿ ಕುಳಿತುಕೊಳ್ಳುವ ಮೊದಲೇ ಆತನ ಮೂಗಿನ ಮೇಲೆ ಕನ್ನಡಕ ಏರಿತ್ತು. ವಿಮಾನ ಮೆಲ್ಲನೆ ಮೇಲಕ್ಕೇರಿತು. ಅವನ ವಿಮಾನವನ್ನು ಇತರ ವಿಮಾನಗಳು ಹಿಂಬಾಲಿಸಿದುವು. ಗಾಳಿಯನ್ನು ಸೀಳಿ ಮೋಡದಲ್ಲಿ ತೂರಿ ವೇಗದಿಂದ ಹೊರಟಿತ್ತು ವಿಮಾನ. ಆತನ ದೃಷ್ಟಿ ಮುಂದಿದ್ದ ನಕ್ಷೆಯನ್ನೇ ನೋಡುತ್ತಿತ್ತು. ಒಮ್ಮೆ ಆತ ಬಾಗಿ ನೋಡಿದ. ಬೆಟ್ಟ ಗುಡ್ಡಗಳು, ಮರಗಿಡಗಳು, ಮನೆ ಹೊಲಗಳು ಅಸ್ಪಷ್ಟವಾಗಿ ಕಂಡುಬಂದವು. ಹೊಲಗದ್ದೆಗಳು ಸ್ಪರ್ಧೆಯ ಕಣಗಳಂತಿದ್ದುವು. ಆತ ಮತ್ತೆ ತಲೆ ಎತ್ತಿದ. ಗಡಿಯಾರದ ಕಡೆ ನೋಡಿದ. ೨೦ ನಿಮಿಷಗಳಲ್ಲಿ ಆತ ಅಂದು ದಾಳಿ ನಡಸಬೇಕಾದ ಪಟ್ಟಣ ಸಿಗುತ್ತಿತ್ತು.

ಅದೇ ಆತನ ಸೇಡಿನ ತಾಣ! ಒಮ್ಮೆ ಗಟ್ಟಿಯಾಗಿ ನಕ್ಕು ಆತ ಕನ್ನಡಕವನ್ನು ಸರಿಪಡಿಸಿಕೊಂಡ. ಹಿಂದಿನ ದಿನ ತನ್ನ ದುಡಿತ ಮುಗಿಸಿ ಮನೆಗೆ ಮರಳಿದಾಗ ಆತ ಕಂಡ ದೃಶ್ಯವೆಂತಹುದು? ತನ್ನ ಮನೆ, ತನ್ನ ಸೊಗಸಿನ ಮನೆ ತನ್ನೆದುರಿಗೆ ಕೆಂಡವಾಗಿ ಬಿದ್ದಿತ್ತು. ಸುತ್ತಲೂ ಪಹರೆಯವರು ನಿಂತಿದ್ದರು. ಅವರವರನ್ನು ವಿಚಾರಿಸಿ ಕೊನೆಗೆ ಆತ ಆಸ್ಪತ್ರೆಯೊಂದನ್ನು ಹೊಕ್ಕ. ಎದುರಿಗೆ ಗುರುತೇ ಸಿಗದಷ್ಟು ವಿಕಾರಹೊಂದಿ ಆತನ ಪತ್ನಿ— ಸುಂದರ ಪತ್ನಿ-- ಮಲಗಿದ್ದಳು. ಆತನನ್ನು ಕಾಣುತ್ತಲೇ ಆಕೆ ಬಿಕ್ಕಲು ಪ್ರಾರಂಭಿಸಿದಳು. ಆಕೆಯ ಅಳು ಮತ್ತಿತರ ರೋಗಿಗಳನ್ನು ಹೊಡೆದೆಬ್ಬಿಸಿತು. ಕಣ್ಣುಗಳಿಂದ ನೀರು ಸುರಿಸುತ್ತ ಆಕೆ ಆತನ ಕೈಹಿಡಿದು ನಡೆದುದೆಲ್ಲವನ್ನೂ ಹೇಳಿದಳು. ವೈರಿಗಳ ಆಕಸ್ಮಿಕ ದಾಳಿ, ಅನಾಹುತಗಳು, ನಿರ್ದಯ ಕೊಲೆಗಳು-- ಎಲ್ಲವನ್ನೂ ವಿವರಿಸಿದ ಮೇಲೆ ಆಕೆ ತುಸು ಹೊತ್ತು ತೆಪ್ಪಗಿದ್ದು ಮತ್ತೆ ಅಳಲು ಪ್ರಾರಂಭಿಸಿದಳು. ಆತನಂತೂ ಆಕೆಯ ಬಳಿ ಮೂಕನಾಗಿ ಕುಳಿತಿದ್ದ. ಸ್ವಲ್ಪ ಹೊತ್ತಿನ ಬಳಿಕ ಆಕೆ "ಮನೆಯ ಜೊತೆಯಲ್ಲಿ ನಿಮ್ಮ ಮಗನೂ ಬೂದಿಯಾಗಿ ಹೋದ. ನನ್ನ ಪಾಪಿ ಜನ್ಮಮಾತ್ರ ಉಳಿಯಿತು" ಎಂದು ಬಿಕ್ಕಿಬಿಕ್ಕಿ ಅತ್ತಳು. ಕೊನೆಗೆ ಆತನಿಗೆ ಆಕೆ "ನನಗೊಂದು ಭಾಷೆಕೊಡಿ" ಎಂದಳು. ಆತ "ಆಗಲಿ" ಎಂದ. ಮಾತೃಹೃದಯ ತಪ್ತವಾಗಿ ಜ್ವಾಲೆ ಕಾರುತಿತ್ತು; "ನಾನು ಸಾಯಲು ಒಂದೆರಡು ನಿಮಿಷಗಳು ಮಾತ್ರ ಉಳಿದಿವೆ. ಸಾಯುವ ಮುನ್ನ ನಿಮ್ಮಲ್ಲಿ ನನ್ನದೊಂದು ಬೇಡಿಕೆಯಿದೆ. ನಿಮ್ಮ ಪುತ್ರನ ದೇಹವನ್ನು ಬೂದಿಮಾಡಿದವರ ಮೇಲೆ ನೀವೂ ನಿಷ್ಕರುಣೆಯಿಂದ ಸೇಡು ತೀರಿಸಿಕೊಳ್ಳುವಿರೆಂದು ನನಗೆ ವಾಗ್ದಾನ ಕೊಡಿ. ನಮ್ಮ ವೈರಿಗಳನ್ನು ಮಾತ್ರವಲ್ಲ, ಅವರ ಮಕ್ಕಳುಗಳನ್ನೆಲ್ಲಾ ಬೂದಿಮಾಡುವೆನೆಂದು ನನಗೆ ಭಾಷೆ ಕೊಡಿರಿ. ಆಗ ನನಗೆ ತುಸುಶಾಂತಿ ಸಿಗುತ್ತದೆ" ಎಂದಳು ಆಕೆ. ಬಹಳ ಕಷ್ಟದಿಂದ ಆತ ಆಕೆಗೆ ಭಾಷೆಯಿತ್ತ. ಮರುಗಳಿಗೆಯಲ್ಲಿ ಆಕೆ ಆತನ ತೋಳುಗಳಲ್ಲಿ ಮೃತಳಾದಳು.

ಹಣೆಯ ಮೇಲೆ ಜಾರುತ್ತಿದ್ದ ಬೆವರು ಹನಿಯನ್ನು ಬೆರಳುಗಳಿಂದ ಮಿಡಿದು ಆತ ಮತ್ತೆ ಗಡಿಯಾರ ನೋಡಿದ. ಕೇವಲ ೫ ನಿಮಿಷ! ಐದೇ ನಿಮಿಷ!! ಆತನ ದೇಹದ ಪ್ರತಿಯೊಂದು ನರವೂ ಮೇಲೆದ್ದು ನಿಂತಿತು. ಮಾನವ ದಾನವನಾದ ಆತನ ದೃಷ್ಟಿ ಈಗ ನಕ್ಷೆಯೆಡೆಗೆ ಹರಿಯಿತು.

ತನ್ನ ಹಿಂದಿದ್ದವನಿಗೆ ದಾಳಿಮಾಡಲು ಸಿದ್ಧನಾಗಿರುವಂತೆ ಆತ ಆಜ್ಞೆಯಿತ್ತ. ದೂರದಿಂದ ಮೇಲಕ್ಕೆ ಹಾರಿಬರುತ್ತಿರುವ ಗುಂಡುಗಳ ಶಬ್ದ ಕೇಳಿಬಂದಿತು. ಬೆಂಕಿ ವಿಮಾನಗಳ ದಿಕ್ಕಿಗೆಧಾವಿಸಿಬರುತ್ತಿತ್ತು. ವೈರಿಗಳು ವಿಮಾನಗಳಿಗೆ ಗುಂಡಿಡಲು ಪ್ರಾರಂಭಿಸಿದ್ದರು. ಆ ಪಟ್ಟಣದ ಪ್ರತಿಯೊಂದು ಸ್ಥಳವೂ ಪ್ರತಿಯೊಂದು ರಸ್ತೆಯೂ ಆತನಿಗೆ ತಿಳಿದಿದ್ದಿತು. ಶಿಶುವಿಹಾರಗಳಿದ್ದ ತಾಣಗಳನ್ನೆಲ್ಲಾ ಆತ ಚೆನ್ನಾಗಿ ಅರಿತಿದ್ದ. ವಿಮಾನವನ್ನು ಆತ ಇದ್ದಕ್ಕಿದ್ದಂತೆಯೇ ವೇಗದಿಂದ ಮೇಲಕ್ಕೆ ಕೊಂಡೊಯ್ದ. ಗುಂಡುಗಳ ಹಾವಳಿ ಬಲವಾಗಿತ್ತು. ಬಳಿಕ ಒಮ್ಮೆಗೇ ಹದ್ದಿನಂತೆ ಅತೀವ ವೇಗದಿಂದ ಆತ ವಿಮಾನವನ್ನು ಕೆಳಗಿಳಿಸಿದ. ಆತನ ಹಲ್ಲುಗಳು ಗಟ್ಟಿಯಾಗಿ ಒಂದನ್ನೊಂದು ಕಚ್ಚಿಹಿಡಿದಿದ್ದುವು. ಎತ್ತರದಿಂದ ನೀರಿಗೆ ಹಾರುತ್ತಿರುವ ಮನುಷ್ಯನಂತೆ ಆತನ ವಿಮಾನ ಕೆಳಗಿಳಿದು ಬಂದಿತು.

ಬಾಂಬಿನ ಆಸ್ಫೋಟನೆ!
ಕಿವಿಕಿವುಡಾಗಿಸುವ ಶಬ್ದ!!
ಹೊಗೆ, ಬೆಂಕಿ!!!

ಆರ್ತನಾದ, ಶಾಪ, ನರಳುವಿಕೆ. ಛಿನ್ನಭಿನ್ನವಾದ ದೇಹದ ಅವಯವಗಳು!

ಮತ್ತೆ ಆತನ ವಿಮಾನ ಮೇಲಕ್ಕೇರಿತು. ಗುಂಡೊಂದು ಆತನ ಸಮೀಪದಲ್ಲಿ ಹಾದು ಹೋಯಿತು. ವಿಮಾನದ ಗತಿಯನ್ನು ಬದಲಾಯಿಸಿ ಆತ ವೇಗವನ್ನು ಹೆಚ್ಚಿಸಿದ. "ಎರಡನೆಯ ದಾಳಿ ಶಿಶು ವಿಹಾರದ ಮೇಲೆ" ಆತ ತನ್ನಲ್ಲಿಯೇ ಹೇಳಿ ನಕ್ಕ. ಆತನ ಮಿತ್ರರು ದಾಳಿಯನ್ನು ಮುಂದುವರಿಸಿದ್ದರು. ಮೆಲ್ಲನೆ ಆತ ವಿಮಾನವನ್ನು ಬಲಕ್ಕೆ ತಿರುಗಿಸಿದ. ನಕ್ಷೆಯನ್ನೊಮ್ಮೆ ದಿಟ್ಟಿಸಿ ನೋಡಿದ. ಬಳಿಕ "ಇದೀಗ ನನ್ನ ಪತ್ನಿಗೆ ಕೊಟ್ಟ ಭಾಷೆಯನ್ನು ಪೂರ್ಣ ಮಾಡುತ್ತೇನೆ. ನನ್ನ ಮಗುವನ್ನು ಬೂದಿ ಮಾಡಿದ ವೈರಿಗಳ ಮಕ್ಕಳುಗಳನ್ನೆಲ್ಲಾ ಆಹುತಿ ತೆಗೆದುಕೊಳ್ಳುತ್ತೇನೆ" ಎಂದು ತನ್ನಲ್ಲಿಯೇ ಹೇಳಿಕೊಂಡು ವಿಮಾನವನ್ನು ಕೆಳಗಿಳಿಸಿದ. ಕೆಳಗಡೆ ಒಂದು ವಿಶಾಲವಾದ ಕಟ್ಟಡ. ಆ ಕಟ್ಟಡದ ಮುಂದೆ ಬಿಳಿಯದೊಂದು ಬಾವುಟ. ಬಾವುಟದ ಪಕ್ಕಕ್ಕೆ ಯೇಸುಕ್ರಿಸ್ತನ ವಿಗ್ರಹ. ಕ್ರಿಸ್ತನ ಕೈಲಿ ಎಳೆಯ ಮಗುವೊಂದು ಕ್ರಿಸ್ತನ ಪಾದದ ಬಳಿ, ಅವನ ಮೊಗವನ್ನೇ ನೋಡುತ್ತ ನಿಂತಿರುವ ಕುರಿಮರಿಯೊಂದು. ಕಟ್ಟಡದ ಮುಂಭಾಗದಲ್ಲಿ ವೃತ್ತಾಕಾರದ ಹಲಗೆಯೊಂದರ ಮೇಲೆ ಬರೆದಿರುವ ಹಲವಾರು ಅಕ್ಷರಗಳು. ವೇಗದಿಂದ ಆತ ಕೆಳಗಿಳಿದು ಬಂದ. ಆತನ ಹಿಂದಿದ್ದವನು ಬಾಂಬೆಸೆಯಲು ಅಣಿಯಾಗಿದ್ದ. ಕೆಳಗಿಳಿದು ಬರುತ್ತಿದ್ದ ಆತನಿಗೆ ಕ್ರಿಸ್ತನ ವಿಗ್ರಹ ಕಂಡು ಬಂದಿತು. ಮತ್ತೂ ಕೆಳಗಿಳಿದು ಬಂದ. ಕ್ರಿಸ್ತನ ಕೈಲಿದ್ದ ಮಗು ಕಾಣಿಸಿತು. ಅದೇ ವೇಳೆಗೆ ವಿಮಾನ ಕೆಳಗಿಳಿದು ಬರುತ್ತಿದ್ದ ಶಬ್ದವನ್ನು ಕೇಳಿ ಮಕ್ಕಳ ಅಳುವ ಧ್ವನಿ, ಚೀತ್ಕಾರ ಧ್ವನಿ ಕೇಳಿಬಂದಂತೆ ಆತನಿಗೆ ಭಾಸವಾಯಿತು. ಇದ್ದಕ್ಕಿದ್ದಂತೆಯೇ ಆತ ವಿಮಾನವನ್ನು ಮತ್ತೆ ಮೇಲಕ್ಕೇರಿಸಿದ. ಆತನ ಹಿಂದಿದ್ದವ ಚಕಿತನಾದ. ಮೇಲಕ್ಕೆ ಹೋದ ಆತನಿಗೆ ತಲೆ ತಿರುಗಿ ಬಂದಂತಾಯಿತು. ಅವನ ಬಾಯಿ ಒಣಗಿ ಹೋಗಿತ್ತು. ಏಕೋ, ಅವನ ಕೈಕಾಲುಗಳು ಕಂಪಿಸುತ್ತಿದ್ದುವು. ತುಸುಹೊತ್ತು ಮೇಲಿದ್ದು ಆತ ಮತ್ತೆ ವಿಮಾನವನ್ನು ಕೆಳಗಿಳಿಸಿದ. ಆತನ ಮುಖದಿಂದ ಸ್ವೇದಬಿಂದುಗಳು ಜಾರುತ್ತಿದ್ದುವು.

ಅದೇ ಶಾಂತಿಮೂರ್ತಿ ಯೇಸುಕ್ರಿಸ್ತನ ವಿಗ್ರಹ!

ಆತನ ತೋಳ್ತೆಕ್ಕೆಯಲ್ಲಿ ನಗುನಗುತ್ತಿರುವ ಮಗು! ಪ್ರೀತಿಯಿಂದ ಮೇಲೆ ತಲೆಯೆತ್ತಿರುವ ಕುರಿಮರಿ!! ಅದೇ ಮಕ್ಕಳ ಚೀತ್ಕಾರ!!! ಆತನ ಹಿಡಿತ ಸಡಿಲುಗೊಂಡಿತು. ವಿಮಾನ ವಿಕಾರ ಶಬ್ದ ಮಾಡಿತು. ಹಿಂದಿದ್ದವನು ತೂರಾಡುತ್ತ ಪಕ್ಕದಲ್ಲಿದ್ದ ಕಂಬಿಯೊಂದನ್ನು ಅಪ್ಪಿದ.

ಆತ ಈಗ ಮಾತ್ರ ತೀರ ಕೆಳಗಿಳಿದು ಬಂದ. ಬಿಳಿಯ ಬಾವುಟ ಸ್ಪಷ್ಟವಾಗಿ ಕಂಡುಬಂದಿತು. ಕಟ್ಟಡ ನಡುಗುತ್ತಿರುವಂತೆ ಭಾಸವಾಯಿತು. ಕಣ್ಣು ಮಂಜಾಯಿತು... ಆತನ ಕಣ್ಣುಗಳಿಗೆ ಏನೋ ಅಕ್ಷರಗಳು ಕಂಡುಬಂದುವು... "Come unto me for thine is the kingdom of God...."

ತನ್ನರಿವಿಲ್ಲದೆಯೇ ಆತ ವಿಮಾನವನ್ನು ಮೇಲಕ್ಕೇರಿಸಿದ್ದ. ಆತನಿಗೆ ಮೈಜಡ್ಡಾದಂತೆ ತೋಚಿತು. ತಲೆ ಸುತ್ತುತ್ತಿತ್ತು. ಅಷ್ಟರಲ್ಲಿ ಆತನಿಗೆ ತನ್ನ ಪತ್ನಿಯ ಮಾತುಗಳು, ತಾನು ಆಕೆಗೆ ಕೊಟ್ಟ ಭಾಷೆ ಎಲ್ಲವೂ ಜ್ಞಾಪಕಕ್ಕೆ ಬಂದುವು. "ಈ ಸಲ ಈ ಶಿಶುವಿಹಾರವನ್ನು ಖಂಡಿತವಾಗಿಯೂ ಬೂದಿ ಮಾಡುವೆ" ಆತನೆಂದುಕೊಂಡ. ಹಿಂದಕ್ಕೆ ಕೈನೀಡಿ ಸೀಸೆಯೊಂದನ್ನು ತೆಗೆದುಕೊಂಡು ಅದರಲ್ಲಿದ್ದ ದ್ರವವನ್ನು ಬಾಯಿಗೆ ಸುರಿದುಕೊಂಡ. ಆಗ ಅವನಿಗೆ ಮತ್ತೆ ಬಲ ಬಂದಿತು. ಕೈಕಾಲುಗಳು ಸ್ಥಿಮಿತಗೊಂಡುವು. ತುಟಿಗಳ ಮೇಲೆ ನಗೆ ಮೂಡಿತು. ವಿಮಾನವನ್ನು ಅಂತರಿಕ್ಷದಲ್ಲಿ ಒಂದು ಸುತ್ತು ತಿರುಗಿಸಿದ. ಇನ್ನೇನು ಕೆಳಗಿಳಿಯಬೇಕು, ಅಷ್ಟರಲ್ಲಿ ಹಿಂದಿರುಗಲು ಸೀಟಿ ಕೇಳಬಂದಿತು. ವಿಮಾನಗಳೆಲ್ಲ ಹಿಂದಿರುಗಿದುವು. ಆತ ಹಲ್ಲುಗಳನ್ನು ಕಟಕಟನೆ ಕಡಿದ. ಬಳಿಕ ಇತರ ವಿಮಾನಗಳನ್ನು ಹಿಂಬಾಲಿಸಿದ.

ತಾನು ತನ್ನ ಪತ್ನಿಗೆ ಕೊಟ್ಟ ಭಾಷೆ!
ಬೂದಿಯಾಗಿದ್ದ ತನ್ನ ಪುತ್ರನ ದೇಹ!
ಸೇಡು.. ಸಾವು!!!

ಆಕಾಶವೇ ಕಳಚಿ ಬಿದ್ದಷ್ಟು ಶಬ್ದವಾಯಿತು. ಹಿಂದಿನಿಂದ ಚಿಟಿಲ್.. ಚಿಟಿಲ್.. ಎಂಬ ಶಬ್ದ ಕೇಳಿ ಬರುತ್ತಿತ್ತು. ಆತನ ಹಿಂದಿದ್ದವನು "ಸರ್ವನಾಶವಾಯ್ತು.. ಪೆಟ್ರೋಲಿನ ಟ್ಯಾಂಕಿಗೆ ಗುಂಡುಬಿದ್ದು ಹತ್ತಿ ಉರಿಯುತ್ತಿದೆ!" ಎಂದು ಒದರಿದ. ಆತನ ಮುಖ ತುಸು ಹೊತ್ತು ಕಳೆಗುಂದಿತು. ಆದರೆ ಮತ್ತೆ ಗೆಲುವಾಯಿತು. ಆತನ ವಿಮಾನ ಕೆಳಗುರುಳುತ್ತಿತ್ತು. ಒಳ ಜೇಬಿನಿಂದ ಪತ್ನಿಯ ಫೋಟೋವನ್ನು ಹೊರತೆಗೆದು ಆತ ಅದನ್ನು ಎದೆಗೆ ಗುರಿಯುಟ್ಟುಕೊಂಡ. ವಿಮಾನ ನೆಲಕಾಣುವ ಮೊದಲೇ ಆತನ ದೇಹ ಕೆಳಗುರುಳಿ ಬಿತ್ತು....

[illegible]

"ಲಂಡನ್ ನಿರ್ಣಯಕ್ಕೆ ಘಟನಾ ಸಮಿತಿಯ ಸಮ್ಮತಿ

ಶ್ರೀ. ನಿಜಲಿಂಗಪ್ಪನವರ ಮೇಲೆ ಕ್ರಮ?—
ಅ. ಭಾ. ಸಂಪಾದಕ ಪರಿಷತ್ತಿನ ಕಾರ್ಯಕಲಾಪಗಳು

ಘಟನಾಸಮಿತಿಯ ಪ್ರಾರಂಭ

ಮೇ ೧೬ ಸೋಮವಾರ ದಿನ ಪ್ರಾರಂಭವಾದ ಘಟನಾ ಸಮಿತಿಯ ಅಧಿವೇಶನು ಘಟನಾ ರಚನೆಯ ಮಟ್ಟಿಗೆ, ಆ ಸಭೆಯ ಕೊನೆಯ ಅಧಿವೇಶನವೆಂದು ತೋರುತ್ತದೆ. ನಡುವೆ ವೈವಿಕವೇನಾದರೂ ಘಟಿಸದಿದ್ದರೆ ಭಾರತದ ರಾಜ್ಯಘಟನೆಯನ್ನು ಸಂಪೂರ್ಣವಾಗಿ ರೂಪಿಸಿ, ಸ್ವೀಕರಿಸಿ ಅದು ಕೊನೆಗೊಳ್ಳಬೇಕೆಂದು ಮುಂದಾಳುಗಳ ಅಭಿಪ್ರಾಯ. ಈ ದೃಷ್ಟಿಯಿಂದ ಈ ಅಧಿವೇಶನಕ್ಕೆ ಬಹಳ ಮಹತ್ತ್ವವಿದೆ.

ಸ್ವಾತಂತ್ರ್ಯ ದಿನವಾದ ಅಗಸ್ಟ್ ೧೫ ನೆ ದಿನದೊಳಗೆ ಘಟನೆ ಸ್ವೀಕೃತವಾಗಬೇಕೆಂದು ಈಗಿನ ಪ್ರಯತ್ನ. ಕಾಮನ್‌ವೆಲ್ತಿನೊಡನೆ ಭಾರತದ ಸಂಬಂಧ ಎಂಥದಿರಬೇಕೆಂಬ ಪ್ರಶ್ನೆಯೀಗ ಬಗೆಹರಿದಿರುವ ಕಾರಣ ಘಟನೆಯ ಸ್ವೀಕಾರವನ್ನು ಮುಂದೆ ಹಾಕಬೇಕಾದ ಪ್ರಮೇಯವಿಲ್ಲ. ಆದರೆ ಈಗ ಅಂಬೇಡಕರ ಕರಡಿನ ಸಮಿತಿ ತಯಾರಿಸಿ ಪ್ರಕಟಿಸಿದ ಕರಡು ಮಹತ್ವದ ಬದಲಾವಣೆಗಳನ್ನು ಹೊಂದುವದರಲ್ಲಿ ಸಂಶಯವಿಲ್ಲ. ಈಗಾಗಲೆ ಅಧಿಕೃತ ವರ್ಗಗಳಿಂದ ಸೂಚಿಸಲ್ಪಟ್ಟ ಎರಡು ಬದಲಾವಣೆಗಳು ಘಟನೆಯ ಸ್ವರೂಪವನ್ನು ಬಹಳ ಮಟ್ಟಿಗೆ ಬದಲಾಯಿಸಲಪೇಕ್ಷಿಸುತ್ತವೆ. ಒಂದು, ಅಲ್ಪಸಂಖ್ಯರ ಪ್ರಾತಿನಿಧ್ಯದ ಬಗೆ. ಮುಸ್ಲಿಮರಿಗೆ, ಮತ್ತು ಕೆಲವೆಡೆ ಕ್ರಿಶ್ಚನ್ನರಿಗೆ ಸ್ಥಳಗಳನ್ನು ಕಾದಿಟ್ಟು ಸಂಯುಕ್ತ ಮತದಾನ ಪದ್ಧತಿಯಿಂದ ಚುನಾವಣೆಗಳನ್ನು ನಡೆಸುವದು ಕರಡಿನ ಅಭಿಪ್ರಾಯವಾಗಿತ್ತು. ಆದರೆ ಅಲ್ಪಸಂಖ್ಯ ಸಮಿತಿಯ ಈಚೆಗಿನ ನಿರ್ಣಯದಂತೆ ಅದನ್ನು ರದ್ದುಗೊಳಿಸಿ ಕೇವಲ ಹಿಂದುಳಿದ ವರ್ಗಗಳಿಗೆ ಮಾತ್ರ, ಕೆಲಕಾಲ, ಸ್ಥಳಗಳನ್ನು ಕಾದಿರಿಸುವ ಸೂಚನೆ ಬಂದಿದೆ. ಅರ್ಥಾತ್ ಹಿಂದುಳಿದ ವರ್ಗಗಳನ್ನು ಬಿಟ್ಟರೆ ಚುನಾವಣೆಗಳಲ್ಲಿ ಜಾತೀಯತೆಗೆ ಪ್ರವೇಶವೇ ಇಲ್ಲವೆಂದಾಯಿತು. ಕೆಲ ಮುಸ್ಲಿಂ ಸದಸ್ಯರು ಈ ಹೊಸ ಸೂಚನೆಯನ್ನು ವಿರೋಧಿಸುವರೆಂದು ನಿರೀಕ್ಷಿಸಲಾಗಿದೆ. ಇನ್ನೊಂದು ಮಹತ್ವದ ಬದಲಾವಣೆಯೆಂದರೆ ಸಂಸ್ಥಾನಗಳಿಗೂ ಪ್ರಾಂತಗಳಿಗೂ (ಘಟನೆಯಲ್ಲಿ ಇವೆರಡನ್ನೂ ಸಂಸ್ಥಾನಗಳೆಂದೇ ಕರೆಯಲಾಗಿದೆ.) ಇರುವ ಭೇದವನ್ನು ಇಲ್ಲವೆಂಬಲ್ಲಿ ವರೆಗೆ ಇಳಿಸಿ ಬಿಡುವದು; ಇದರಿಂದ ಸಂಸ್ಥಾನಿಕರ ದರ್ಜೆ ಪ್ರಾಂತಿಕ ಗವರ್ನರನಕ್ಕೆ ಸಮಾನವಾಗಿ ಬಿಡುವದಲ್ಲದೆ, ಸಂಸ್ಥಾನಗಳು (ಮತ್ತು ಸಂಸ್ಥಾನಕೂಟಗಳು) ಕೇಂದ್ರಕ್ಕೆ ಬಿಟ್ಟುಕೊಟ್ಟ ಕೇವಲ ಮೂರು ವಿಷಯಗಳಲ್ಲದೆ ಇನ್ನೂ ಅನೇಕ ಅಧಿಕಾರಗಳನ್ನು ಬಿಟ್ಟುಕೊಡಬೇಕಾಗುವದು. ಸಂಸ್ಥಾನ ಪ್ರತಿನಿಧಿಗಳಿಂದಲೂ ಸಂಸ್ಥಾನಿಕರಿಂದಲೂ ಇದಕ್ಕೆ ಎಷ್ಟು ವಿರೋಧ ಬರಬಹುದೋ ಊಹಿಸುವದು ಸಾಧ್ಯವಿಲ್ಲ. ಆದರೆ ಕೆಲ ಸಂಸ್ಥಾನಗಳಲ್ಲಿ ಈಗಾಗಲೆ ಅಸ್ತಿತ್ವದಲ್ಲಿರುವ ಘಟನಾ ಸಮಿತಿಗಳಿಗೆ ಈ ಬದಲಾವಣೆಯಾಗಲಿ, ಸಂಸ್ಥಾನಗಳ ಮೇಲೆ (ಪ್ರಾಂತಗಳಂತೆ) ಒಂದು ಏಕರೂಪ ಘಟನೆಯನ್ನು ಹೇರಬೇಕೆಂಬ ಸೂಚನೆಯಾಗಲಿ ರುಚಿಸಿಲ್ಲವೆಂಬದು ನಿಶ್ಚಯ. ಆದರೆ ಅದರ ವಿರುದ್ಧ ಸಂಘಟಿಸಲು ಅವರಿಗೆ ಅವಕಾಶವಿಲ್ಲೆಂದು ಹೇಳಬಹುದು.

ಕಾಮನ್‌ವೆಲ್ತ್ ಸಂಬಂಧ

ಭಾರತವು ಪ್ರಜಾರಾಜ್ಯವಾಗಿಯೂ ಕಾಮನ್‌ವೆಲ್ತದಲ್ಲಿ ಉಳಿಯಬೇಕೆಂಬದಾಗಿ ಮುಖ್ಯ ಮಂತ್ರಿ ನೆಹರೂ ಅವರು ಲಂಡನ್ನಿನಲ್ಲಿ ಮಾಡಿಕೊಂಡು ಬಂದ ಒಪ್ಪಂದವನ್ನು ಸ್ವೀಕರಿಸುವ ಗೊತ್ತುವಳಿಯನ್ನು ಅಧಿವೇಶನ ಪ್ರಾರಂಭದಲ್ಲಿ ಘಟನಾ ಸಮಿತಿಯ ಮುಂದೆ ಮುಖ್ಯ ಮಂತ್ರಿಗಳು ಇರಿಸಿದರು. ಎರಡು ದಿನಗಳ ಚರ್ಚೆಯ ಕೊನೆಯಲ್ಲಿ ಅದು ಯಾವುದೊಂದು ತಿದ್ದುಪಡಿಯಿಲ್ಲದೆ ಅಂಗೀಕೃತವಾಯಿತು. ಅನಂತರವೇ ಘಟನೆಯ ಕಲಮುಗಳ ಮೇಲೆ ಸಮಿತಿ ಚರ್ಚೆ ನಡೆಸತೊಡಗಿತು. ಕಾಮನ್‌ವೆಲ್ತ್ ಸಂಬಂಧದ ಗೊತ್ತುವಳಿಗೆ ಸಾಮಾನ್ಯ ಬೆಂಬಲ ದೊರೆತರೂ ಕೆಲ ಸದಸ್ಯರಿಂದ ನಿಷ್ಠುರವಾದ ವಿರೋಧವೂ ಎದುರಾಯಿತು. ಮೊದಲೇ ಕಾಂಗ್ರೆಸ್ ಪಕ್ಷದ ಸಭೆಯಲ್ಲಿ ಇದು ಚರ್ಚಿಸಲ್ಪಟ್ಟು ಪಕ್ಷದ ಯಾವ ಸದಸ್ಯನೂ ತಿದ್ದುಪಡಿ ಮಂಡಿಸಕೂಡದೆಂದು ನಿರ್ಣಯಿಸಲ್ಪಟ್ಟಿತು. ಆದರೆ ಶ್ರೀ ಶಿಬ್ಬನಲಾಲ ಸಕ್ಸೇನಾ, ಶ್ರೀ ಲಕ್ಷ್ಮೀನಾರಾಯಣ ಸಾಹು ಮತ್ತು ಅವರಿಗೆ ಬೆಂಬಲ ನೀಡಿದ ಸೇಠ ದಾಮೋದರ ಸ್ವರೂಪರು ನಿಯಮಾತೀತರೆಂದು ತೋರುತ್ತದೆ. ಶ್ರೀ ಸಕ್ಸೇನರಂತೂ ಮುಖ್ಯ ಮಂತ್ರಿ ನೆಹರು ಅವರಿಂದ ವಿದೇಶ ಧೋರಣೆಯ ವಿಷಯದಲ್ಲಿ ಏಕಾಭಿಪ್ರಾಯ ಬೇಕೆಂದು ಬಂದ ಬಿನ್ನಹವನ್ನು ಗಣಿಸದೆ ಕೊನೆತನಕ ತಮ್ಮ ವಿರೋಧವನ್ನು ಸಾಧಿಸಿದರು. ಇದರಲ್ಲಿ ಮೌಲಾನಾ ಹಜರತ ಮೊಹಾನಿಯವರ ವಾಚಾಲತನ—ಅವರ ಬೆಂಬಲಕ್ಕೆ ಬಂತು. ಮೊಹಾನಿಯವರು ಕೊನೆಗೆ ಈ ಬಗ್ಗೆ ಮತಗಣನೆಯಾಗಬೇಕೆಂದು ಕೇಳುವವರೆಗೂ ಹೋದರು. ವಿರೋಧಿಗಳ ಮುಖ್ಯ ವಾದಗಳು ಮೂರು: ಒಂದು, ಕಾಮನವೆಲ್ತಿನಲ್ಲಿ ಉಳಿದರೆ ನಾವು ಆಂಗ್ಲೋ ಅಮೇರಿಕನ್ ಗುಂಪಿಗೆ ಸೇರಿದಂತಾಗುವದು; ಎರಡು, ವರ್ಣದ್ವೇಷವನ್ನು ಸಾಧಿಸುವವರು ಸದಸ್ಯರಾಗಿರುವ ಕಾಮನವೆಲ್ತಿನಲ್ಲಿ ಉಳಿಯದಿರುವದು ಲೇಸು; ಮತ್ತು ಮೂರು, ಸಾಮ್ರಾಜ್ಯವಾದದ ಪುರಸ್ಕರ್ತರ ಸಂಬಂಧ ಬಿಟ್ಟುಕೊಂಡರೆ ಏಶಿಯದ ಉದ್ಧಾರಕ್ಕಾಗಿ ದುಡಿಯಲು ನಮಗೆ ಅವಕಾಶವಿಲ್ಲದಾಗುವದು. ಪಂ. ಜವಾಹರಲಾಲರು ಇವೆಲ್ಲ ವಾದಗಳನ್ನು ಮುಂಗಂಡು ಅವಕ್ಕೆ ಉತ್ತರ ಕೊಟ್ಟಿದ್ದರೂ ವಿರೋಧಿಗಳಿಗೆ ತುಷ್ಟಿಯಾಗಲಿಲ್ಲ. ನಮ್ಮ ಕ್ರಿಯಾಸ್ವಾತಂತ್ರ್ಯಕ್ಕೆ ಈ ಒಪ್ಪಂದದಿಂದ ಯಾವ ಅಡ್ಡಿಯೂ ಇಲ್ಲ; ಇಂದಿನ ಜಗತ್ತಿನಲ್ಲಿ ಇದ್ದ ಸಂಬಂಧಗಳನ್ನು ಹರಿದೊಗೆಯುವದು ಕ್ಷೇಮವಲ್ಲ; ಒಂದೊಂದು ರಾಷ್ಟ್ರದ ಒಂದೊಂದು ರೀತಿ ನಮಗೆ ಸರಿಹೋಗಲಿಕ್ಕಿಲ್ಲ, ಹಾಗೆಂದು ಅದರ ಸಂಬಂಧವೇ ಬೇಡೆನ್ನುವದು ದಡ್ಡತನ; ಕಾಮನ್‌ವೆಲ್ತಿನೊಳಗೆ ಉಳಿದುಕೊಂಡು ವರ್ಣದ್ವೇಷವನ್ನು ಎದುರಿಸುವದು ಸುಲಭವೆಂದಿತ್ಯಾದಿಯಾಗಿ ಪಂಡಿತರು ಸಮಾಧಾನ ಹೇಳಿದರು. ಈ ನಿರ್ಣಯದ ವಿರುದ್ಧ ಕೆಲ ಸಾಮ್ಯವಾದಿಗಳು ಸಭಾಭವನದ ಹೊರಗೆ ಪ್ರದರ್ಶನ ಮಾಡಿದರು.

"ಸ್ವತಂತ್ರ" ಕಾಶ್ಮೀರ!

ಕಾಶ್ಮೀರದ ಹುಣ್ಣಿನ ಮೇಲೆ ಹೊಸ ಬೊಕ್ಕೆಯೊಂದು ಕಳೆದವಾರ ಕಾಣಿಸಿಕೊಂಡು ಭಾರತದ ರಾಜಕೀಯ ವರ್ಗಗಳಲ್ಲಿ ತುಂಬ ಚಿಂತೆಗೆ ಕಾರಣವಾಯಿತು. ಕಾಶ್ಮೀರದ ವಿಭಜನೆಯಾಗುವದೆಂಬ ಸುದ್ದಿಗಳ ಕಾಲ್ಮರಿಯುವದರಲ್ಲಿ ಭಾರತ ಪಾಕಿಸ್ತಾನ ಸರಕಾರಗಳು ಇತ್ತ ಕಂಠಶೋಷಣೆ ಮಾಡಿಕೊಳ್ಳುತಿದ್ದಾಗ ಅತ್ತ ಬ್ರಿಟಿಶ ಪತ್ರಿಕಾಪ್ರತಿನಿಧಿಯೊಬ್ಬನಿಗಿತ್ತ ಸಂದರ್ಶನದಲ್ಲಿ ಕಾಶ್ಮೀರ ಮುಖ್ಯಮಂತ್ರಿ ಶೇಖ ಅಬ್ದುಲ್ಲಾ ಅವರು ಜಮ್ಮು—ಕಾಶ್ಮೀರ ಸಂಸ್ಥಾನ "ಸ್ವತಂತ್ರ" ರಾಜ್ಯವಾಗಿ ಯುಕ್ತರಾಷ್ಟ್ರ ಸಂಘದ ಸಂರಕ್ಷಣೆಯನ್ನು ಪಡೆಯಬಯಸಬಹುದೆಂದು ಅಭಿಪ್ರಾಯಪಟ್ಟರೆಂದು ಲಂಡನ್ "ಅಬ್ಜರ್ವರ್" ಪತ್ರಿಕೆಯಲ್ಲಿ ಪ್ರಕಟವಾಯಿತು. ಈ ಸುದ್ದಿ ಪ್ರಕಟವಾದ ಕೂಡಲೆ ದಿಲ್ಲಿಯಿಂದ ಶೇಖ ಅಬ್ದುಲ್ಲಾರಿಗೆ ಕರೆ ಬಂದದ್ದು ಭಾರತ ಸರಕಾರಕ್ಕೆ ಇದರಿಂದಾದ ತಳಮಳದ ದ್ಯೋತಕವಾಗಿದೆ. ಶೇಖ ಅಬ್ದುಲ್ಲಾರನ್ನು ನಂಬಬಾರದೆಂದು ಮೊದಲಿಂದ ಸಾಧಿಸುತಿದ್ದ ಜಾತ್ಯಂಧ ವರ್ಗಕ್ಕೆ ಈ ಸುದ್ದಿ ತುಂಬ ಸಂತೋಷವುಂಟುಮಾಡಿರಬೇಕು. ಕಾಶ್ಮೀರದ ಭವಿತವ್ಯವಿನ್ನೂ ಬೆಕ್ಕಿನ ತಲೆಯ ಮೇಲಿನ ದೀಪವಾಗಿರುವಾಗ ಇಂಥ ಹೇಳಿಕೆ ಹೊರಟದ್ದು ತುಂಬ ವಿಷಾದಕರವೆಂದು ಭಾವಿಸಲಾಯಿತು. ಗಡಿನಾಡು ಪ್ರಾಂತದಲ್ಲಿ ಮತಗಣನೆ ನಡೆಯುವ ಮೊದಲು ಸ್ವತಂತ್ರ ಪಠಾಣಿಸ್ತಾನದ ಬೇಡಿಕೆ (ಖಾನಬಂಧುಗಳಿಂದ) ಬಂದುದರ ನಂತರದ ಘಟನೆಗಳನ್ನು ಇನ್ನೂ ಮರೆಯದ ಭಾರತೀಯರು ಶೇಖ ಸಾಹೇಬರ ಈ ಹೊಸ ಪ್ರಮೇಯದಿಂದ ತುಸು ಚಿಂತಾತುರರಾದುದರಲ್ಲಿ ಆಶ್ಚರ್ಯವಿಲ್ಲ. ಆದರೆ ಶೇಖ ಸಾಹೇಬರು ಕಾಶ್ಮೀರದ "ಸ್ವಾತಂತ್ರ್ಯ"ದ ಮಾತು ಅರ್ಥವಿಲ್ಲದ್ದೆಂದು ಬಹಿರಂಗವಾಗಿ ಹೇಳಿ ಈ ಚಿಂತೆಯನ್ನು ದೂರೀಕರಿಸಿದ್ದರಿಂದ ಸ್ವಲ್ಪ ಸಮಾಧಾನವಾಗಿದೆ.

ಮೈಸೂರು ಕಾಂಗ್ರೆಸ್ ರಾಜಕಾರಣ

ಬೆಂಗಳೂರಲ್ಲಿ ಸೇರಿದ ಮೈಸೂರು ಕಾಂಗ್ರೆಸ ಸಮಿತಿ ಕರ್ನಾಟಕ ಏಕೀಕರಣದ ತತ್ವವನ್ನೊಪ್ಪುವ ಬೀದರು ಅ. ಮೈ. ಕಾಂ. ನಿರ್ಣಯಕ್ಕೇ ಅಂಟಿಕೊಂಡು ಅದು ನಿಯಮಿಸಿದ ಸಮಿತಿಯ ವರದಿ ಹೊರಬರುವತನಕ ಕಾಂಗ್ರೆಸಿಗರು ಬೃಹತ್ಕರ್ನಾಟಕ ರಚನೆಯ ಬಗ್ಗೆ ಪ್ರಚಾರ ಮಾಡತಕ್ಕದ್ದಲ್ಲೆಂದು ಗೊತ್ತುವಳಿ ಮಾಡಿದ್ದರೂ ಮೈಸೂರಿನ ಪ್ರತ್ಯೇಕತಾ ಭಾವನೆಯನ್ನು ಶಾಶ್ವತಗೊಳಿಸುವ ಆಸೆ ಅದರ ಇನ್ನೊಂದು ನಿರ್ಣಯದಿಂದ ಹೊರಪಡುತ್ತದೆ. ಕರ್ನಾಟಕ ಪ್ರಾಂತಿಕ ಕಾಂಗ್ರೆಸ್ ಸಮಿತಿಯಲ್ಲಿ ಮೈಸೂರು ಕಾಂಗ್ರೆಸ್ಸನ್ನು ಸಮಾವೇಶಗೊಳಿಸಬೇಕೆಂಬ ಅ. ಭಾ. ಕಾಂಗ್ರೆಸ್ ಕಾರ್ಯಸಮಿತಿಯ ಅಪೇಕ್ಷೆಯನ್ನು ಅದು ಮತ್ತೆ ನಿರಾಕರಿಸಿದೆ. ಮೈಸೂರು ಪ್ರತ್ಯೇಕ ಆಡಳಿತೆಯ ಘಟಕವಾಗಿ ಉಳಿಯುವ ವರೆಗೂ ಮೈಸೂರು ಕಾಂಗ್ರೆಸ್ಸೂ ಬೇರೆಯಾಗಿರಬೇಕೆಂದು ಅದರ ವಾದ. ಜೂನ್ ೧೮ ಕ್ಕೆ ತುಮಕೂರಲ್ಲಿ ಸೇರಲಿರುವ ಅ. ಮೈ. ಕಾಂಗ್ರೆಸ್ ಅಧಿವೇಶನದಲ್ಲಿ ಮೈಸೂರು ಸೇರಿದ ಕರ್ನಾಟಕ ಪ್ರಾಂತ ರಚನೆಯ ವಿಷಯದಲ್ಲಿ ಮೈಸೂರಿನ ನಿಲುವು ಬೆಳಕಿಗೆ ಬರಬಹುದೆಂದು ತೋರುತ್ತದೆ. ಆದರೂ ಮೈಸೂರಿನ "ವೈಶಿಷ್ಟ್ಯ"ವನ್ನುಳಿಸಿಕೊಳ್ಳಲು ಮೈಸೂರಿನ ಕೆಲ ಪ್ರಮುಖರು ಶತಪ್ರಯತ್ನ ಮಾಡದಿರರು. ಈಗಾಗಲೇ ಶ್ರೀ ನಿಜಲಿಂಗಪ್ಪನವರ "ನೆತ್ತರು ಕುಡಿಯಲು" ಕೆಲವರು ಹಾತೊರೆಯುತ್ತಿರುವರಂತೆ. ಮೈಸೂರು ಘಟನಾ ಸಮಿತಿಯ "ರಾಜಭಕ್ತಿ" ಮತ್ತು ಮೈಸೂರ "ವೈಶಿಷ್ಟ್ಯ"ಗಳನ್ನೊಳಗೊಂಡ ಧ್ಯೇಯ ನಿರೂಪಣ ಗೊತ್ತುವಳಿಯನ್ನು ಮುರಿದು ಮೈಸೂರನ್ನೊಳಗೊಂಡ ಕರ್ನಾಟಕ ರಚನೆಯ ಚಳವಳಿಯಲ್ಲಿ ಅವರು ಭಾಗವಹಿಸುತ್ತಿರುವದು "ಮೈಸೂರು ಜನತೆ ಹಾಗು ಕಾಂಗ್ರೆಸ್ಸಿಗೆ ಅವಮಾನಕರವಾಗಿದೆ" ಯೆಂದೂ ಆ ಬಗ್ಗೆ ಅವರ ಮೇಲೆ ಘಟನಾ ಸಮಿತಿ ಕ್ರಮ ತೆಗೆದುಕೊಳ್ಳಬೇಕೆಂದೂ ಅದರ ಸದಸ್ಯರಾದ ಶ್ರೀ ಎಚ್. ಎಂ. ಚನ್ನಬಸಪ್ಪನವರು ಅಧ್ಯಕ್ಷರಿಗೆ ಪತ್ರ ಬರೆದಿದ್ದಾರಂತೆ. ಆದರೆ ಕಾಂಗ್ರೆಸ್ ಅಧ್ಯಕ್ಷರಾದ ಡಾ। ಪಟ್ಟಾಭಿ ಸೀತಾರಾಮಯ್ಯನವರು ಮೈಸೂರು ಸ್ವತಂತ್ರವಾಗಿ ಆರ್ಥಿಕ ದೃಷ್ಟಿಯಲ್ಲಿ ತನ್ನ ಕಾಲ ಮೇಲೆ ತಾನು ನಿಲ್ಲ

—೧೪ನೆಯ ಪುಟಕ್ಕೆ



ಅ. ಭಾ. ಸಂಪಾದಕ ಪರಿಷತ್ತಿನಲ್ಲಿ ಅಧ್ಯಕ್ಷ ಶ್ರೀ. ಸಿ. ಆರ್. ಶ್ರೀನಿವಾಸನ್ನರು ಭಾಷಣ ಮಾಡುತಿರುವದು. ಗವರ್ನರ ಜನರಲ್ ರಾಜಾಜಿಯವರನ್ನೂ ಶ್ರೀ. ಡಿ. ವಿ. ಗುಂಡಪ್ಪನವರನ್ನೂ ಅವರ ಎಡಕ್ಕೆ ಕಾಣಬಹುದು.

ಶ್ವೇತಜನಾಂಗದ ಕೃಷ್ಣ ಕಾರಭಾರ

(೨ ನೇ ಪುಟದಿಂದ)

ಮೈಕೆಲ್ ಸ್ಕಾಟನ ನೆರವು

ಆದರೆ ಅವರ ನಿರಾಕರಣೆಯನ್ನು ಕೇಳುವವರು ಯಾರು? ದ. ಅಫ್ರಿಕದ ಸರಕಾರವು "ನೈ. ಅಫ್ರಿಕದ ಮೂಲ ನಿವಾಸಿಗಳೆಲ್ಲ ಸಂತೋಷದಿಂದ ದ. ಅಫ್ರಿಕದ ಶಾಸನವನ್ನು ಕೈನೀಡಿ ಕಾಯುತ್ತಿದ್ದಾರೆಂದು" ಪ್ರಪಂಚದಲ್ಲೆಲ್ಲ ಡಂಗುರ ಸಾರುತ್ತಿದೆ. ಆದರೆ ರೆವರೆಂಡ್ ಮೈಕೇಲ್ ಸ್ಕಾಟ್ ಎಂಬ ಧಾರ್ಮಿಕನೊಬ್ಬ ಹೆರೆರೋಗಳ ಕರುಣಾಜನಕ ಸ್ಥಿತಿಯನ್ನು ಕಂಡು ಅವರ ಬಂಧುವಾಗಿದ್ದಾನೆ. ಈತನು ಸ್ವತಃ ಬಿಳಿಯನೂ, ಪೂಜಾರಿಯೂ ಆಗಿದ್ದರೂ ಹೆರೆರೋ ಮತ್ತು ಇತರ ಮೂಲನಿವಾಸಿಗಳಲ್ಲಿ ಸಹಾನುಭೂತಿ ಹುಟ್ಟಿ, ತನ್ನ ಜಾತಿಯವರ ಅತ್ಯಾಚಾರವನ್ನು ಕಂಡು ಹೇಸಿ, ನಿಗ್ರೋಗಳ ಉದ್ಧಾರಕ್ಕಾಗಿ ಬಹಳವಾಗಿ ಹೆಣಗಿದ್ದಾನೆ. ಮಹಾತ್ಮಾ ಗಾಂಧಿಯವರು ಭಾರತದಲ್ಲಿ ಭಂಗೀ ನಿವಾಸಗಳಲ್ಲಿ, ಹರಿಜನರ ಬೀಡುಗಳಲ್ಲಿ ವಾಸಿಸಿ, ಅವರ ಕಷ್ಟ ಪರಂಪರೆಗಳೆಡೆಗೆ ಇಡೀ ದೇಶದ ಗಮನವನ್ನೆಳೆದಂತೆ ದೀನಬಂಧು ಮೈಕೇಲ್ ಸ್ಕಾಟನೂ ಜೋಹಾನ್ಸ್‌ಬರ್ಗ್ ನಗರದಲ್ಲಿ ನಿಗ್ರೋಗಳಿಗೆಂದು ಕಾದಿಟ್ಟ ನರಕದಂತಹ ಹೊಲೆಗೇರಿಯಲ್ಲಿ ವಾಸಮಾಡಿಕೊಂಡಿದ್ದನು. ಇದರಿಂದ ಜೋಹಾನ್ಸ್‌ಬರ್ಗಿನ ಬಿಳಿಯ ಪ್ರತಿಷ್ಠಿತರ ಸರಕಾರವೂ ರೊಚ್ಚಿಗೆದ್ದು ಆತನನ್ನು ಅಲ್ಲಿಂದ ಬಾಧೆ, ಕಿರುಕುಳ ಕೊಟ್ಟು ಓಡಿಸಿರು.

ನೈಋತ್ಯ ಅಫ್ರಿಕವನ್ನು ಸ್ವಾಹಾಕರಿಸುವ ನಿರ್ಣಯವಾದೊಡನೆಯೇ, ಮೈಕೇಲ್ ಸ್ಕಾಟನು ಮೂಲನಿವಾಸಿಗಳನ್ನು--ಹೆರೆರೋ, ಬರ್ಗ್‌ಡಮಾರ್, ಅಷಾಂಬೋ, ನಾಮಾ ಜಾತಿಯ ಜನರನ್ನು ವಿಚಾರಿಸಿ ಕೇಳಿದಾಗ, ಅವರ ಭಯ ಮತ್ತು ವಿರೋಧ ಸ್ಪಷ್ಟವಾಗಿ ತಿಳಿಯಿತು. ಅನೇಕ ಬಗೆಯಲ್ಲಿ ಪ್ರಾರ್ಥನಾಪತ್ರಗಳನ್ನು ಅಧಿಕಾರಿಗಳಿಗೂ ಸಂ. ರಾ. ಸಂಘಕ್ಕೂ ಕಳಿಸಿ ಸಭೆ ಕೂಡಿಸಿ, ಮುಖಂಡರನ್ನು ವಿನಂತಿಸಿ, ಹೆರೆರೋಗಳ ಶಿಷ್ಟಮಂಡಲಗಳನ್ನು ಸಂಘಟಿಸಿ, ಈ ಸ್ವಾಹಾ ಯೋಜನೆಯನ್ನು ರದ್ದು ಮಾಡಿಸಲು ಪ್ರಯತ್ನಿಸಿದನು. ಸಂ. ರಾ. ಸಂಘಕ್ಕೆ ಬಿನ್ನಹ-ದೂರುಗಳನ್ನು ಮೂಲನಿವಾಸಿಗಳ ಪರವಾಗಿ ಕಳಿಸಿದನು. ಕೊನೆಗೆ ಸಂಘಕ್ಕೆ ಸ್ವತಃ ಈ ದುಃಖಿ, ಪೀಡಿತ ಜನರ ದೂರನ್ನು ಒಯ್ಯಬೇಕೆಂದು ಅನುಮತಿಪತ್ರ ಬೇಡಿದಾಗ ದ. ಆಫ್ರಿಕನ್ ಸರಕಾರವು ಆಕ್ಷೇಪಿಸಿತು. ಅಮೇರಿಕಾದಲ್ಲಿ ಲೇಕಸಕ್ಸೆಸ್ಸಿಗೆ ಹೋಗಲೆಳೆಸಿದಾಗ ಅಮೇರಿಕ ಸರಕಾರವೂ ಈ ನಿಗ್ರೋ ಬಾಂಧವನಿಗೆ ಅನುಮತಿಪತ್ರವನ್ನು ನಿರಾಕರಿಸಿತು. ಅಮೇರಿಕನ್ನರ ಜೆಮ್ಮೆಯ ಸ್ವಾತಂತ್ರ್ಯಪ್ರೇಮದ ನಿದರ್ಶನವಿದು! ಕೊನೆಗೆ ಬಹಳ ಉಪಾಯದಿಂದ ಈಗ ಇಂಗ್ಲಂಡಿಗೆ ಬಂದು ನಿಗ್ರೋ ಜನಾಂಗಗಳ ಮತ್ತು ಪ್ರಧಾನತಃ ಹೆರೆರೋ ಜನರ ಪರವಾಗಿ ಪ್ರಚಾರ ನಡೆಯಿಸುತ್ತಿದ್ದಾನೆ. ಈತನ ಯತ್ನ ನೀರ ಮೇಲಿನ ಹೋಮವಾಗುವುದೋ ಏನೋ ಎಂದು ಭಯವಾಗುತ್ತಿದೆ!

ಬೆಚುವನಾಲ್ಯಾಂಡಿನ ದುರ್ಗತಿ

ಬೆಚುವನಾಲ್ಯಾಂಡ್ ಎಂಬ ರಾಷ್ಟ್ರ ಹೆರೆರೋಗಗಳ ಪಕ್ಕದಲ್ಲೇ ಇದೆ. ಇದು ಬ್ರಿಟಿಷರಿಂದ ಪಾಲಿತವಾದ ರಾಜ್ಯ. ಇಲ್ಲಿಯ ರೀಜಂಟ ಆದ (TSHEKEDI) ಸೆಕೆಡಿ ಗೂ ದ. ಅಫ್ರಿಕದ ಸಾಮ್ರಾಜ್ಯಲಾಲಸೆಯಿಂದ ಭಯನಾಟದೆ. ನೈಋತ್ಯ ಅಫ್ರಿಕವು ದ. ಅಫ್ರಿಕದ ತುತ್ತಾದರೆ, ಬೆಚುವನಾಲ್ಯಾಂಡು ಬಿಳಿಯರ ಸಾಮ್ರಾಜ್ಯದ ನಡುವಿನೊಂದು ದ್ವೀಪವಾಗಿ, ಕೊನೆಗೆ ಅದಕ್ಕೂ ಬಿಳಿಯರ ದಾಸ್ಯವೇ ಗತಿಯಾಗುವುದೋ ಎಂಬ ಭೀತಿ ಬಾಧಿಸುತ್ತಿದೆ. ರೀಜಂಟ್ ಸೆಕೆಡೆಯೂ ರುವಾಂಡಾ-ಉರುಂಡಿ ರಾಜ್ಯದ "ಕಚಾಕಾ"ನ ಪ್ರಧಾನಮಂತ್ರಿಯೂ ಬ್ರಿಟನ್ನಿಗೆ ಹೋಗಿ ಸರಕಾರಕ್ಕೆ ನೈ. ಅಫ್ರಿಕದ ಸ್ವಾಹಾಕಾರದಿಂದ ನಿಗ್ರೋ ಜನಾಂಗಗಳ ಸರ್ವನಾಶವಾಗುವುದೆಂದು ವಿಜ್ಞಾಪಿಸುವ ಇಚ್ಛೆಯಿಂದ ಹೊರಟರು. ಆದರೆ ಅಲೆಕ್ಸಾಂಡ್ರಿಯದಲ್ಲೇ ಬ್ರಿಟಿಷರ ಆಜ್ಞೆಯ ಪ್ರಕಾರ ಅವರ ವಿಮಾನವನ್ನು ಅಧಿಕಾರಿಗಳು ಹಿಂತಿರುಗಿಸಿದರು. ಅಂತೂ, ಈ ಹತಭಾಗ್ಯ ನಿಗ್ರೋ ಜನಾಂಗಳಿಗೂ, ನೈ. ಅಫ್ರಿಕದಲ್ಲಿ ನೆಲಸಿರುವ ಹಿಂದೀಯ ವ್ಯಾಪಾರಿಗಳಿಗೂ ದೇವರೇ ಗತಿ! ಅತ್ತ ಕಡೆ ಇಟಲಿಯ ಹಿಂದಿನ ಆಫ್ರಿಕನ್ ಉಪನಿವೇಶಗಳನ್ನು ಇಟಲಿಗೆ ಮರಳಿ ಕೊಡಿಸಿ ಇಟಲಿ ಅಲ್ಲಿ ಹಿಂದಕ್ಕೆ ಮಾಡಿದ ಕೊಲೆ, ಧ್ವಂಸ ಸುಲಿಗೆಗಳನ್ನು ಗಣಿಸದೆ ಕಟುಕನ ಕೈಯಲ್ಲಿ ಕುರಿಮರಿಯನ್ನು ಕೊಡುವ ಹಂಚಿಕೆಯನ್ನು ಸಂ. ರಾ. ಸಂಘದಲ್ಲಿ ಅಮೇರಿಕ ಬ್ರಿಟನ್ನುಗಳು ಮಾಡಿವೆ. ಸಾಮ್ರಾಜ್ಯಶಾಹಿಯು ಅಳಿಗಾಲ ಬಂತೆನ್ನುವ ಮಾತು ಸತ್ಯವೆ?

ವಿಜ್ಞಾನದ ಸೋಜಿಗಗಳು

ಹಳೆಯ ಚಂದ್ರನು ಭೂಮಿಗೆ ಅಪ್ಪಳಿಸಿದಾಗ ....

ಆರಿ ಹೋಗಿರುವ ಎರಡು ತಾರೆಗಳು

ಸುಮಾರು ಹನ್ನೆರಡು ಕೋಟಿ ವರ್ಷ ಹಿಂದಿನ ಕಥೆ. ಹದಿನಾಲ್ಕು ಮನುಗಳಲ್ಲಿ ಏಳನೆಯವನಾದ ವೈವಸ್ವತ ಮನು ಒಂದಾನೊಂದು ದಿನ ಸಮುದ್ರ ತೀರದಲ್ಲಿ ಸಂಧ್ಯಾವಂದನೆ ಮಾಡುತಿದ್ದನು. ಸೂರ್ಯಾರ್ಘ್ಯಕ್ಕಾಗಿ ಬೊಗಸೆಯಲ್ಲಿ ನೀರು ಎತ್ತಿದಾಗ ಅದರಲ್ಲೊಂದು ತಿಮಿಂಗಿಲದ ಮರಿಯನ್ನು ಕಂಡು ವೈವಸ್ವತನು ಚಕಿತನಾದನು. ಹೇಳಿತು ಮೀನು: "ಎಲೈ ಮನುವೇ, ನನ್ನನ್ನು ಒಯ್ದು ಕಾಪಾಡುವವನಾಗು. ನಮ್ಮ ಜಾತಿಯಲ್ಲಿ ಸಣ್ಣವರನ್ನು ದೊಡ್ಡವರು ನುಂಗಿ ಬದುಕುವ ರೂಢಿಯಿರುವದರಿಂದ ಈ ಸಾಗರದಲ್ಲಿ ನನಗೆ ಸುರಕ್ಷಿತತೆಯಿಲ್ಲ. ನೀನು ನನ್ನನ್ನು ಸಾಕಿದರೆ ಮುಂದೆ ನಿನಗೆ ನಾನು ಉಪಕಾರ ಮಾಡುವಂಥವನಾಗುವೆನು." ವೈವಸ್ವತನು ಹಾಗೆಯೇ ಆಗಲೆಂದು ಹೇಳಿ ಒಂದು ಚಿಕ್ಕ ಬಾವಿಯಲ್ಲಿ ಅದನ್ನು ಒಯ್ದುಬಿಟ್ಟು ಸಲಹಿದನು. ಕೆಲ ದಿನಗಳಲ್ಲಿ ಅದು ಬೆಳೆದು ಆ ಬಾವಿಯಲ್ಲಿ ಸ್ಥಳ ಸಾಲದೆ ವೈವಸ್ವತನಿಗೆ ತಿಳಿಸಲಾಗಿ ಆತನು ಒಂದು ಕೆರೆಗೆ ಅದನ್ನು ಸಾಗಿಸಿದನು. ಅಲ್ಲಿ ಬೆಳೆದು ಕೊನೆಗೆ ಸರೋವರಕ್ಕೂ ಅಲ್ಲಿಂದ ನದಿಗೂ ಒಯ್ಯಲ್ಪಟ್ಟ ಮೀನು ಬೃಹದಾಕಾರವಾಗಿ ಬೆಳೆದು "ಎಲೈ ಮನುವೇ, ಇನ್ನು ನಾನು ನಿರ್ಭಯನಾದೆನು- ಈ ನದಿ ನನಗೆ ಸಾಲದು. ನನ್ನನ್ನು ಸಾಗರಕ್ಕೇ ಒಯ್ದುಬಿಡುವಂಥವನಾಗು. ನೀನು ನನಗೆ ಬಹಳ ಉಪಕಾರ ಮಾಡಿರುವೆ. ಭವಿಷ್ಯತ್ತಿನಲ್ಲಿ ಪ್ರಳಯ ಬರುವದು. ಆ ಸಮಯದಲ್ಲಿ ನಿನ್ನನ್ನು ನಾನು ಉಳಿಸಿ ಜಗತ್ತಿನ ಒಡೆಯನನ್ನಾಗಿ ಮಾಡುವೆನು" ಎಂದು ಹೇಳಿ ಸಮುದ್ರದಲ್ಲಿ ಅದೃಶ್ಯವಾಯಿತು. ಮುಂದೊಂದು ದಿನ ಅದು ಮನುವಿಗೆ ಕಾಣಿಸಿಕೊಂಡು, "ಎಲೈ ಮನುವೇ ಪ್ರಳಯ ಕಾಲ ಸಮೀಪಿಸಿತು. ನೀನು ಒಂದು ಹಡಗು ಕಟ್ಟಿ ಅದರಲ್ಲಿ ಕುಳಿತು ಪ್ರಳಯಾರಂಭದಲ್ಲಿ ಮೇರುಪರ್ವತಕ್ಕೆ ಹೋಗಲಣಿಯಾಗು" ಎಂದುಪದೇಶಿಸಲು ಅವನು ಹಾಗೇ ಆಗಲೆಂದು ಹೇಳಿ ಒಂದು ದೊಡ್ಡ ಹಡಗನ್ನು ಕಟ್ಟಿ ಅದರಲ್ಲಿ ಸಮಸ್ತ ಧಾನ್ಯ ಸಸ್ಯಗಳ ಬೀಜಗಳನ್ನು ಇರಿಸಿಕೊಂಡನು. ಆಗ ಕಾಲಮೇಘಗಳು ಆಕಾಶವನ್ನು ಮುತ್ತಿದವು. ಭೂಕಂಪದಿಂದ ಭೂಮಿ ನಡುಗಿತು. ಬಡಬಾನಲ ಭುಗ್ಗೆಂದುರಿದು ಸಮುದ್ರವನ್ನು ಕಲಕಿತು. ಪರ್ವತಗಳು ಕುಸಿದವು. ಸೂರ್ಯನು ಕಾಣದಾದನು. ಜ್ವಲಿಸುವ ಉಲ್ಕೆಗಳು ಸುರಿದವು. ಭಯಂಕರ ಸುಂಟರಗಾಳಿಯೆದ್ದಿತು. ಹಗಲೂ ರಾತ್ರಿ ಮಳೆ ಸುರಿಯಿತು. ನೀರೇರಿ ಪರ್ವತಗಳು ಕೂಡ ಮುಳುಗಿಹೋದವು. ಸಮಸ್ತ ಜೀವರಾಶಿಗಳೂ ಈ ಉತ್ಪಾತದಲ್ಲಿ ಲಯವಾಗುತ್ತಿರುವ ಸಮಯದಲ್ಲಿ ತಿಮಿಂಗಿಲದಿಂದ ಎಳೆಯಲ್ಪಟ್ಟ ಹಡಗಿನಲ್ಲಿ ವೈವಸ್ವತನು ತನ್ನ ಸಂಗ್ರಹದೊಡನೆ ಮೇರು ಶಿಖರದಲ್ಲಿ ಬಂದಿಳಿದು ಪ್ರಳಯದಿಂದ ಪಾರಾಗಿ ಪ್ರಳಯವು ಇಳಿದು ಹೋದ ಮೇಲೆ ತಿರುಗಿ ಮೂಲ ಸ್ಥಾನಕ್ಕೆ ಮರಳಿ ಸಮಸ್ತ ಸಸ್ಯರಾಶಿಗಳ ಪುನರುತ್ಪತ್ತಿಯನ್ನು ಸಾಧಿಸಿದನು ಮತ್ತು ಗಂಗಾ ತೀರದಲ್ಲಿ ಸ್ವತಪೋಬಲದಿಂದ ಸೃಜಿಸಿದ ಒಬ್ಬಳು ನಾರಿಯನ್ನು ವರಿಸಿ ಮನುಷ್ಯ ಸಂತಾನ ಬೆಳೆಯಲು ಕಾರಣನಾದನು.

ಕಾಲಿಲ್ಲದ ಕತೆಯಲ್ಲ

ಇದು ಮತ್ಸ್ಯ ಪುರಾಣದ ಕಥೆ. ಈ ಪ್ರಳಯದ ಕತೆ ಭಾರತೀಯ ಪುರಾಣಗಳಲ್ಲಿ ಮಾತ್ರ ಕಾಣಿಸದೆ ಬೈಬಲ್ ಮೊದಲಾದ ಇತರ ಧರ್ಮ ಗ್ರಂಥಗಳಲ್ಲೂ ವಿವರಿಸಲ್ಪಟ್ಟಿದೆ. ಭೂಮಧ್ಯ ಸಮುದ್ರದಲ್ಲಿ ಇಂಥ ಪ್ರಳಯವಾದುದಕ್ಕೆ ಎಷ್ಟೋ ನಿದರ್ಶನಗಳು ಕಾಣುತ್ತಿವೆ. ಆದರೆ ಇಡಿ ಭೂಮಿಯೆಲ್ಲವನ್ನೂ ಈ ಪ್ರಳಯ ಪ್ರಕೋಪ ಎಷ್ಟೋ ಸಾವಿರ ವರ್ಷಗಳ ಕೆಳಗೆ ಬಾಧಿಸಿತ್ತೆಂದು ಈಚೆಗೆ ಕಂಡು ಹಿಡಿಯಲ್ಪಟ್ಟ ಕುರುಹುಗಳಿಂದ ಸ್ಥಿರವಾಗುತ್ತಿದೆಯೆಂದು ಇತಿಹಾಸಜ್ಞರೂ ಭೂಗರ್ಭ ಸಂಶೋಧಕರೂ ಪ್ರಾಣಿಶಾಸ್ತ್ರಿಗಳೂ ಒಪ್ಪತೊಡಗಿದ್ದಾರೆ.

ಈ ಪ್ರಳಯದಲ್ಲಿ ಸಮುದ್ರದಿಂದ ಅನೇಕ ಸಾವಿರ ಅಡಿ ಎತ್ತರದ ವರೆಗೆ ನೀರೇರಿತ್ತೆಂದು ತೋರುತ್ತದೆ. ಎತ್ತರವಾದ ಸ್ಥಳಗಳಲ್ಲಿ ನೆರೆ ನಿಂತಾಗ ಕೆಳಗೆ ನಿಲ್ಲುವ ನಯವಾದ ಕೆಸರಿನ ರಾಶಿಗಳು ಕೆಲವೆಡೆ ದೊರಕುತ್ತವೆ. ಪೇರು ಮತ್ತು ಬೊಲೀವಿಯಾ (ದ. ಅಮೇರಿಕ)ಗಳಲ್ಲಿ ೧೩೦೦೦ ಅಡಿ ಎತ್ತರದ ಕೆಸರು ಮಣ್ಣಿನ ವಲಯದಲ್ಲಿ ತಿಯಾಹ್ವಾಂಕವೆಂಬ ಪ್ರಾಚೀನ ನಗರವಿತ್ತು. ಆ ಸ್ಥಳದಲ್ಲಿ ಹಾಗೆ ಕೆಸರು ಕೂಡಲು ಬೇರೆ ಕಾರಣವೇನೂ ಕಾಣುವದಿಲ್ಲ.

ಎಚ್. ಎಸ್. ಬೆಲ್ಲಮಿಯವರು (ಬ್ರಿಟನ್) ಬೇರೆ ಬೇರೆ ದೇಶಗಳಲ್ಲಿ ಪ್ರಚುರವಾಗಿರುವ ೫೦೦ ಪ್ರಳಯದ ಐತಿಹ್ಯಗಳನ್ನು ಸಂಗ್ರಹಿಸಿ ಹೋಲಿಸಿ ನೋಡಿದಾಗ ಅವರಿಗೆ ಎಲ್ಲದರಲ್ಲಿಯೂ ಸಾಮಾನ್ಯವಾಗಿದ್ದ ಕೆಲ ಲಕ್ಷಣಗಳು ಕಂಡು ಬಂದವು: ಆ ಅನರ್ಥದ ಅನಿರೀಕ್ಷಿತತೆ, ಅದರ ಅವಧಿ, ಭೂಕಂಪ, ಉಲ್ಕಾವರ್ಷಣ, ಪ್ರಚಂಡ ಅತಿವೃಷ್ಟಿ, ಜಲಪ್ರವಾಹದ ಬಿಸುಪು ಇವಿಷ್ಟು ಎಲ್ಲ ಕಥೆಗಳಲ್ಲಿಯೂ ಕಾಣುತ್ತವೆ.

ವಿಜ್ಞಾನಿಯ ಊಹೆ

ಇದನ್ನೆಲ್ಲ ನೋಡುವಾಗ ವಿಶ್ವವ್ಯಾಪಿಯಾದ ಮಹಾ ಜಲಪ್ರಳಯವೊಂದು ಕೆಲ ಸಾವಿರ ವರ್ಷಗಳ ಕೆಳಗೆ ಆದುದೇ ನಿಜವೆಂದು ತೋರುತ್ತದೆ. ಹ್ಯಾನ್ಸ್ ಹೋರ್ಬಿಗರನೆಂಬ ಆಸ್ಟ್ರಿಯದ ಜ್ಯೋತಿರ್ವಿದನು ಈ ಪ್ರಳಯದ ಹಿಂದುಮುಂದನ್ನು ಈ ಪ್ರಕಾರವಾಗಿ ಊಹಿಸಿದ್ದು ತುಂಬ ಮನೋರಂಜಕವಾಗಿದೆ:

ಗ್ರಹಗ್ರಹಗಳ ನಡುವೆ ವೈಶ್ವಲವಗಳು (Cosmic particles) ಹಬ್ಬಿದ್ದವು. ಸೂರ್ಯನಿಂದ ಘೂತ್ಕರಿಸಲ್ಪಟ್ಟ ಪ್ರಸರಣ (Radiation) ದಿಂದ ಚಕ್ರಾಕಾರವಾಗಿ ಓಡಾಡಿಸಲ್ಪಡುತಿದ್ದ ಈ ವೈಶ್ವಲವಗಳ ಪರಿಣಾಮವು ಗ್ರಹಗಳನ್ನು ಅಂತರ್ಮುಖವಾದ ಪ್ರದಕ್ಷಿಣ ಪಥಗಳಲ್ಲಿ (Elliptical spirals) ತಿರುಗುವಂತೆ ಮಾಡುತಿತ್ತು. ಅರ್ಥಾತ್ ಅವುಗಳ ಗತಿಚಕ್ರದ ವಿಸ್ತಾರ ಕಡಿಮೆಯಾಗುತ್ತ ಬರುತಿತ್ತು.

ನಮ್ಮೀ ಚಂದ್ರನು ಹಿಂದೆ ಸ್ವತಂತ್ರ ಗ್ರಹವಾಗಿತ್ತು. ಅದು ಸೂರ್ಯನ ಸುತ್ತ ಪ್ರದಕ್ಷಿಣೆ ಹಾಕುತಿತ್ತು. ಆದರೆ ವೈಶ್ವಲವಗಳ ಒತ್ತಡದಿಂದ ಅದರ ಪ್ರದಕ್ಷಿಣ ಪಥ ಚಿಕ್ಕದಾಗುತ್ತ ಬಂದು ಕೊನೆಗೆ ಅದು ಭೂಮಿಯ ಆಕರ್ಷಣ ವಲಯದೊಳಗೆ ಬಂದುಬಿಟ್ಟದ್ದರಿಂದ ಭೂಮಿಯ ಸುತ್ತ ತಿರುಗತೊಡಗಿತು. ಈಗಿನ ಚಂದ್ರನಿಗಿಂತ ಹಿಂದೆ ಭೂಮಿಗೆ ಬೇರೊಂದು ಚಂದ್ರನಿತ್ತು. ಅದು ವೈಶ್ವಲವಗಳ ಒತ್ತಡದಿಂದ ಪ್ರದಕ್ಷಿಣ ಪಥವನ್ನು ಕಡಿಮೆಮಾಡುತ್ತ ಭೂಮಿಯನ್ನು ಮೆಲ್ಲಮೆಲ್ಲಗೆ ಸಮೀಪಿಸಿತು. ಒಂದು ಗೂಟಕ್ಕೆ ಉದ್ದವಾದ ಹಗ್ಗದಿಂದ ಕಟ್ಟಲ್ಪಟ್ಟ ದನವನ್ನು ಮನಸಿನಲ್ಲಿ ಕಲ್ಪಿಸಿಕೊಂಡರೆ ಇದರ ಸರಿಯಾದ ಅಭಿಪ್ರಾಯವಾಗಬಹುದು. ದನ ಹಗ್ಗವನ್ನು ಸಾಧ್ಯವಿದ್ದಷ್ಟು ಎಳೆದುಕೊಂಡು ಮೇಯುತ್ತ ಹೊರಟಿದೆಯೆಂದು ತಿಳಿಯಿರಿ. ಅದು ಅನಿವಾರ್ಯವಾಗಿ ಗೂಟಕ್ಕೆ ದೂರದಿಂದ ಪ್ರದಕ್ಷಿಣೆ ಬರಬೇಕಾಗುವದು. ಆದರೆ ಹೀಗೆ ಬರಬರುತ್ತ ಹಗ್ಗ ಗೂಟಕ್ಕೆ ಸುತ್ತುಬೀಳುವದರಿಂದ ದನ ಬಂದೊಂದು ಸುತ್ತಿಗೂ ಗೂಟಕ್ಕೆ ಸ್ವಲ್ಪ ಸ್ವಲ್ಪ ಹತ್ತಿರವಾಗುತ್ತ ಹೋಗುವದೆಂದು ಸ್ಪಷ್ಟವಾಗಿಯೆ ತಿಳಿಯುವದು. ಪೂರ್ವದ ಚಂದ್ರನಿಗೂ ಹಾಗೆಯೆ ಆಯಿತು. ಅದು ಕೊನೆಗೊಂದು ಕಾಲದಲ್ಲಿ ಭೂಮಿಗೆ ಎಷ್ಟು ಸಮೀಪವಾಯಿತೆಂದರೆ ಮತ್ತು ಭೂಮಿಗೆ ಅದು ಎಷ್ಟು ಬೇಗ ಪ್ರದಕ್ಷಿಣೆ ಹಾಕಲು ತೊಡಗಿತೆಂದರೆ, ಆ ಕಾಲದ ಚಾಂದ್ರಮಾಸ ಕೇವಲ ೬ ತಾಸುಗಳಷ್ಟು ದೀರ್ಘವಾಗಿತ್ತು!

ಆಗ ಬಂತು ಮಹಾಪ್ರಳಯ- ಭೂಮಿಯ ಆಕರ್ಷಣೆಯ ವೇಗದಿಂದ ಆ ಪೂರ್ವ ಚಂದ್ರ ಒಡೆದು ಚೂರು ಚೂರಾಯಿತು. ಆಗ ಘಟಿಸಿದ ಉತ್ಪಾತ ವರ್ಣನಾತೀತವಾಗಿದೆ. ಗುರುತ್ವಾಕರ್ಷಣದಿಂದ ಸಮುದ್ರದ ನೀರು ಅಭೂತಪೂರ್ವ ಉನ್ಮಾದದಿಂದ ಉಕ್ಕಿ ಭೂಮಧ್ಯರೇಖೆಯುತ್ತ ಪ್ರವಹಿಸತೊಡಗಿತು.

ಎಲ್ಲೆಲ್ಲಿಯೂ ಜಲಪ್ರವಾಹ. ಚಂದ್ರನ ನುಚ್ಚುನೂರಾದ ದೂಳು ಆಕಾಶದಲ್ಲೆಲ್ಲ ಹಸರಿಸಿ ಸೂರ್ಯನನ್ನು ಮುಚ್ಚಿ ಅಂಧಕಾರವನ್ನುಂಟು ಮಾಡಿದವು. ದಿವಾರಾತ್ರಿ ಉಲ್ಕೆಗಳು ಮಳೆಗರೆದವು. ಭೂಕಂಪಗಳಿಂದ ಭೂಮಿಯ ಹೊರಪದರು ತತ್ತರಿಸಿತು. ಈ ನಡುವೆ ಭೂಮಿಯ ಸುತ್ತಣ ವಾತಾವರಣದಲ್ಲಿ ತುಮುಲವೆದ್ದಿತು. ಸುಂಟರಗಾಳಿ ಬೀಸಿತು. ಪ್ರಚಂಡವಾದ ಮಳೆಬಿತ್ತು. . . .

ಇನ್ನೊಂದು ಪ್ರಳಯ

ಒಂದು ದಿನ ನಮ್ಮ ಈಗಿನ ಚಂದ್ರನಿಗೂ ಇದೇ ಗತಿಯಾಗಲಿದೆ. ಆಗ ಭೂಮಿಯಲ್ಲಿ ಅದೇ ಬಗೆಯ ಪ್ರಳಯವಾದೀತು. ಜೀವಕೋಟಿಗೆ ಇನ್ನೊಂದು ಮಹಾಭಯವೊದಗೀತು.

ಆದರೆ ಅದು ಇಂದು ನಾಳೆಯ ಭಯವಲ್ಲ. ವಿಶ್ವಪುರುಷನ ಚಕ್ರತಿರುಗುವುದು ಮೆಲ್ಲಗೆ. ಕೆಲಲಕ್ಷ ವರ್ಷಗಳ ವರೆಗೆ ಈ ಗಂಡಾಂತರ ಬಾರದು. ಆ ವರೆಗೆ ಮಾನವಕುಲವನ್ನು ವಿಜ್ಞಾನಿಗಳು ನಾಶಮಾಡಿರದಿದ್ದರೆ, ಭಾವೀ ಗಂಡಾಂತರದಿಂದ ಪಾರಾಗುವ ಹಂಚಿಕೆ ಮಾಡಲು ಅವರಿಗೆ ಬೇಕಾದಷ್ಟು ಸಮಯವಿದೆ.

ಹೊಸ ತಾರೆ

ಸಾವಿರಾರು ವರ್ಷಗಳಿಂದ ಮನುಷ್ಯನು ನಕ್ಷತ್ರಗಳನ್ನು ಪರೀಕ್ಷಿಸುತಿದ್ದರೂ ನಮ್ಮ ಸೂರ್ಯಕುಲಕ್ಕೆ ತೀರ ಸಮೀಪವಾಗಿರುವ ಒಂದು ಜೋಡು ನಕ್ಷತ್ರವನ್ನು ಜ್ಯೌತಿಷ್ಯ ನೋಡಲೇ ಇಲ್ಲ. ಕಳೆದ ವಾರ ಅಮೇರಿಕೆಯ ಮಿನಿಸೋಟಾ ವಿಶ್ವವಿದ್ಯಾಲಯದ ಡಾ. ವಿಲೆಮ್ ಜಾಕೋಬ ಲ್ಯೂಟೆನ್ನರು ಸೂರ್ಯನಿಂದ ಕೇವಲ ಆರೇ ಪ್ರಕಾಶವರ್ಷಗಳಷ್ಟು ದೂರವಾದ (ಅಂದರೆ ೩೬ ಲಕ್ಷ ಕೋಟಿ ಮೈಲು) ಈ ಜೋಡು ನಕ್ಷತ್ರಗಳನ್ನು ಕಂಡು ಹಿಡಿದಿರುವುದಾಗಿ ಸಾರಿದ್ದಾರೆ. ಈ ವರೆಗೆ ತಿಳಿದ ಮಟ್ಟಿಗೆ ನಮಗೆ ಅತಿ ಹತ್ತಿರ ಇರುವ ಅಲ್ಫಾಸೆಂಟಾರಿ ಮತ್ತು ಪ್ರಾಕ್ಸಿಮಾ ಸೆಂಟಾರಿ ನಕ್ಷತ್ರಗಳು ಇಲ್ಲಿಂದ ಕೇವಲ ೪.೩ ಪ್ರಕಾಶ ವರ್ಷಗಳಷ್ಟು ದೂರವಾಗಿವೆ. ಆದರೆ ಅವು ದಕ್ಷಿಣಾರ್ಧಗೋಲಕ್ಕೆ ಮಾತ್ರ ಸಾಮಾನ್ಯವಾಗಿ ಗೋಚರವಾಗುತ್ತಿವೆ. ಆದರೆ ಈ ಹೊಸ ಲ್ಯೂಟೆನ್ ನಕ್ಷತ್ರಗಳು ಉತ್ತರಾರ್ಧ ಗೋಲದಲ್ಲಿ ಕ್ರಮವಾಗಿ ಗೋಚರವಾಗುತ್ತಿವೆಯಂತೆ. ಮಾತ್ರ ಅವು ಬರಿಗಣ್ಣಿಗೆ ಕಾಣಿಸುವದಿಲ್ಲ. ಹಾಗೆ ಕಾಣಿಸಬೇಕಾದರೆ ಅವು ಈಗಿರುವದಕ್ಕಿಂತ ೪೦-೬೦ ಸಾವಿರ ಪಾಲು ಹೆಚ್ಚು ಪ್ರಕಾಶಮಾನವಾಗಿರಬೇಕಾಗಿತ್ತೆಂದು ಗಣಿಸಲಾಗಿದೆ. ಇವು ಬಹಳ ಪ್ರಾಚೀನ ನಕ್ಷತ್ರಗಳಂತೆ. ಆದುದರಿಂದಲೇ ಅವು ಇಷ್ಟು ಮಂದ ಪ್ರಕಾಶವಾಗಿರಬೇಕು. ಇವು ಸೂರ್ಯನಿಗಿಂತ ತಂಪಾಗಿರುವವು. ಆದರೆ ಈಚೆಗೆ ಒಂದು ದಿನ ಅವುಗಳಲ್ಲೊಂದು ತನ್ನ ಸಾಮಾನ್ಯ ಪ್ರಕಾಶಕ್ಕಿಂತ ೧೫ ಪಾಲು ಜಾಜ್ವಲ್ಯಮಾನವಾಗಿ ಬೆಳಗಿತು. ಇಂಥ ದೀಪ್ತಿ ಅದಕ್ಕೆ ೨೦ ನಿಮಿಷಗಳ ವರೆಗೆ ಇತ್ತು. ನಮ್ಮ ಸೂರ್ಯನೇನಾದರೂ ಹೀಗೆ ಉರಿದೆದ್ದರೆ, ಭೂಮಿವಾಸಿಗಳಾದ ನಾವು ಸೆಕೆಯಿಂದ ಬೆಂದು ಹೋಗಬಹುದಾಗಿತ್ತಂತೆ!

ಇದು ದೂರದ ಗೆಳೆಯರ ಸಂಗತಿಯಾಯಿತು. ನಮ್ಮ ನೆರೆಮನೆಯಾದ ಮಂಗಳಗ್ರಹದಲ್ಲಿ ನೀರಿನ ಕೊರತೆ ವಿಪರೀತವಾಗಿದೆಯೆಂದು ಸೇಮುರ್ ಹೆಶ್ ಎಂಬ ಇನ್ನೊಬ್ಬ ಜೌತಿಷ್ಯನು ಹೇಳುತ್ತಾನೆ. ಅಲ್ಲಿಯ ವಾತಾವರಣದಲ್ಲಿ ನೀರಿನ ಬಾಷ್ಪಾಂಶ ತೀರ ಕಡಿಮೆ. ಅದೆಲ್ಲ ಮಳೆಗರೆದರೆ ಆ ಗ್ರಹದ ಮೇಲೆ ೦.೦೧ ಇಂಚು ಕೂಡ ನೀರು ನಿಲ್ಲದು. ಭೂಮಿಯ ವಾತಾವರಣದ ಬಾಷ್ಪವೆಲ್ಲ ನೀರಾಗಿ ಸುರಿದರೆ ಭೂಮಿಯ ಸುತ್ತ ೧ ಇಂಚು ನೀರು ನಿಲ್ಲುವದಂತೆ. ಮಂಗಳ ನಿವಾಸಿಗಳು (ಅಂಥವರಿದ್ದರೆ) ನಮ್ಮ ವಾತಾವರಣದ ೧/೧೫ ರಷ್ಟು ದಟ್ಟವಾದ ವಾತಾವರಣದಲ್ಲಿ ವಾಸಿಸಬೇಕಾಗಿದೆಯಂತೆ.

ಕಿವುಡರಿಗೆ ಬೆರಳುಗಳಿಂದ "ಕೇಳಲು" ಬರುವಂತೆ ಒಂದು ವೈದ್ಯುತ ಸಾಧನವನ್ನು ಅಮೇರಿಕೆಯ ಮಸಾಚುಸೆಟ್ಸ ಸಂಸ್ಥೆಯ ಶಾಸ್ತ್ರಜ್ಞರು ರೂಪಿಸುತಿದ್ದಾರೆ.

ಇಪ್ಪತ್ತು ಲಕ್ಷ ವರುಷ ಹಿಂದಿನ ಮನುಷ್ಯ

ಡಾರ್ವಿನ್ನನ ವಿಕಾಸವಾದದ ಪ್ರಕಾರ ಮನುಷ್ಯನಿಗೆ ಮಂಗನೇ ಅಜ್ಜನೆಂದು ಎಲ್ಲರಿಗೂ ಗೊತ್ತಿದ್ದೀತು. ಆದರೆ ಮನುಷ್ಯನ ಅಪ್ಪನಾರು? ಎಂದು ವಿಕಾಸವಾದಿಗಳು ತಲೆ ಕೆರೆದುಕೊಳ್ಳುತಿದ್ದರು. ಮಂಗನಿಗೂ ಮನುಷ್ಯನಿಗೂ ನಡುವೆ ಮಂಗನಿಗಿಂತ ಹೆಚ್ಚು ಮನುಷ್ಯನಿಗಿಂತ ಕಡಿಮೆ ಸುಧಾರಿಸಿದ ರೂಪವುಳ್ಳ ಮಂಗ-ಮನುಷ್ಯ ಇಲ್ಲವೆ ಮಂಗ ಮನುಷ್ಯರ ನಡುವಣ "ಕಳೆದು ಹೋದ ಗೊಣಸು" (Missing Link) ಒಂದು ಇದ್ದಿರಬೇಕೆಂದು ಪ್ರಾಣಿಶಾಸ್ತ್ರಜ್ಞರು ಊಹಿಸಿದ್ದರು. ಆದರೆ ಅಂಥದೊಂದು ಪ್ರಾಣಿ ಈಗಿನ ಜೀವಿಪ್ರಪಂಚದಲ್ಲಂತೂ ಬದುಕಿಲ್ಲ, ಮಾತ್ರವಲ್ಲ ಎಂದಾದರೂ ಇದ್ದಿತ್ತೆಂಬ ಬಗ್ಗೆ ಯಾವ ನಿಶ್ಚಿತವಾದ ಪ್ರಮಾಣವೂ ಸಿಕ್ಕಿದ್ದಿಲ್ಲ.

ಆದರೀಗ ಪ್ರಿಟೋರಿಯದ (ದ. ಅಫ್ರಿಕೆ) ಟ್ರಾನ್ಸವಾಲ ಪ್ರದರ್ಶನಾಲಯದ ಕ್ಯುರೇಟರರಾದ ಡಾ. ರಾಬರ್ಟ ಬ್ರೂಮರು ತಮಗೆ ಈ ನರವಾನರನ ಅಸ್ತಿತ್ವದ ನಿಶ್ಚಿತ ಪ್ರಮಾಣಗಳು ದೊರಕಿವೆಯೆಂದು "ನ್ಯೂಯಾರ್ಕ ಟೈಮ್ಸ" ಪತ್ರಿಕೆಯಲ್ಲಿ ಲೇಖ ಬರೆದಿದ್ದಾರೆ. ಅವರಿಗೆ ಒಂದಲ್ಲ ಐದುಬಗೆಯ ನರವಾನರರ ಅವಶೇಷಗಳು ದೊರೆತಿವೆಯಂತೆ. ಈ ಅವಶೇಷಗಳು ಸಿಕ್ಕಿದ ಸ್ಥಳದ ಮೇಲಿಂದ "ಸ್ವತಕ್ರಂಸ"ವಾನರ ಮನುಷ್ಯನೆಂದು ಹೆಸರಿಸಲ್ಪಟ್ಟಿರುವ ಈ ಪ್ರಾಣಿಜಾತಿ ಹತ್ತರಿಂದ ಇಪ್ಪತ್ತು ಲಕ್ಷ ವರ್ಷಗಳ ಹಿಂದೆ ಬದುಕಿರಬೇಕು. ಅದರ ಇಡಿ ತಲೆಬುರುಡೆಯೊಂದು ಅವರ ಕೈಗೆ ಬಿದ್ದಿದ್ದು, ಅದರ ದವಡೆಯ ಎಲುಬು ಅತಿ ವಿಶಾಲವಾಗಿದೆಯಲ್ಲದೆ ನೇರವೂ ಆಗಿದೆ. ಮಂಗನಿಗೆ ಇಲ್ಲದಿರುವ ಆದರೆ ಮನುಷ್ಯನಿಗಿರುವ ಗದ್ದದ ಪ್ರಾರಂಭಾವಸ್ಥೆಯನ್ನೂ ಈ ಕಪಾಲದಲ್ಲಿ ಕಾಣಬಹುದು. ಗದ್ದಕ್ಕೂ ಮಾತಿಗೂ ನಿಕಟ ಸಂಬಂಧವಿರುವ ಕಾರಣ ಈ ನರವಾನರನು ಮಾತಾಡಲು ಆದೇ ಪ್ರಾರಂಭಿಸಿರಬಹುದೆಂದು ತರ್ಕಿಸಲಾಗಿದೆ. ಅದರ ಮೆದುಳೂ ಅತ್ಯಂತ ಬುದ್ಧಿಶಾಲಿಗಳಾದ ಮನುಷ್ಯರದರಷ್ಟೆ ದೊಡ್ಡದಿತ್ತು. ಇತರ ಅವಶೇಷಗಳಿಂದ ಈ ಪ್ರಾಣಿ ನೆಟ್ಟಗೆ ಎರಡು ಕಾಲಲ್ಲಿ ನಡೆಯುತಿತ್ತೆಂದೂ ಡಾ. ಬ್ರೂಮರಿಗೆ ಮನವರಿಕೆಯಾಗಿದೆ.

ಮನುಷ್ಯತ್ವದ ಹೊಸ್ತಿಲಲ್ಲಿದ್ದ ಈ ಪ್ರಾಣಿಯ ಅವಶೇಷಗಳು ದಕ್ಷಿಣ ಆಫ್ರಿಕೆಯಲ್ಲಿ ದೊರೆತುದರಿಂದ ಮಾನವ ಕುಲದ ಉದಯ ದಕ್ಷಿಣ ಆಫ್ರಿಕೆಯಲ್ಲೇ ಆಯಿತೆಂದು ಡಾ. ಬ್ರೂಮರು ಸಾಧಿಸುತ್ತಾರೆ. ಕಂಡುಹಿಡಿಯಬೇಕಾದುದು ಇನ್ನೂ ಎಷ್ಟೋ ಇದೆಯೆಂದು ಅವರು ಒಪ್ಪುತ್ತಾರಾದರೂ ಈಗ ಎಲ್ಲಿ ಹುಡುಕಬೇಕು ಏನು ಸಿಗಬಹುದು ಎಂದು ನಮಗೆ ತಿಳಿದಂತಾಗಿದೆಯೆಂದು ಅವರಿಗೆ ಸಮಾಧಾನವಾಗಿದೆ. ಡಾ. ಬ್ರೂಮರು ಜಗತ್ತಿನ ಪ್ರಮುಖ ಪ್ರಾಚ್ಯಶಾಸ್ತ್ರಜ್ಞರೆಂದು ಪರಿಗಣಿಸಲ್ಪಟ್ಟಿರುವ ಕಾರಣ ಅವರ ಅಭಿಪ್ರಾಯಗಳಿಗೆ ಸಾಮಾನ್ಯ ಮನ್ನಣೆ ದೊರೆಯುವದೆಂದು ನಂಬಬಹುದು.

ವಿಚಾರದ್ವಂದ್ವ

ಈ ಕಲಕಪ್ಟಿನ ಕೆಳಗೆ ಜನಾಭಿಪ್ರಾಯವನ್ನು ಪ್ರಾಮಾಣಿಕವಾಗಿ ಪ್ರಕಟಿಸಬೇಕೆಂದಿದ್ದೇವೆ. ಕೇವಲ ವ್ಯಕ್ತಿಕ ದೂರುಗಳನ್ನು ಬೆಳಕಿಗೆ ತರುವದು ಇದರ ಉದ್ದೇಶವಾಗಿರದೆ ಮಹತ್ವದ ವಿಷಯಗಳ ಮೇಲೆ ಆರೋಗ್ಯಕರ ಜನಾಭಿಪ್ರಾಯವನ್ನು ರೂಪಿಸುವದೇ ಗುರಿಯಾಗಿರುವದರಿಂದ ಇಲ್ಲಿ ಬಂದ ವಿಷಯಗಳ ಬಗ್ಗೆ ಅನುಕೂಲ ಮತ್ತು ಪ್ರತಿಕೂಲಾಭಿಪ್ರಾಯಗಳನ್ನು ಓದುಗರು ಬರೆದು ಕಳಿಸಿದರೆ ಸ್ವಾಗತಿಸಲಾಗುವದು. —ಸಂ.

*

ಮಠಗಳ ಮೇಲೆ ಸರಕಾರಿ ನಿಯಂತ್ರಣ

ಮದ್ರಾಸ್ ಸರಕಾರವು ಪ್ರಾಂತದ ಮಠ ಸಂಸ್ಥಾನಗಳ ಮೇಲೆ ತನ್ನ ನಿಯಂತ್ರಣವನ್ನು ಹೇರುವ ಕಾನೂನು ಮಾಡುತ್ತಿರುವ ಸಂಗತಿ ಈಗ ಪ್ರಾಂತದ ಹೊರಗೂ ತುಂಬ ಪ್ರಸಿದ್ಧವಾಗಿದೆ. ಮಠಾಧಿಪತಿಗಳು ತಮ್ಮ ವಶದಲ್ಲಿರುವ ಧಾರ್ಮಿಕ ನಿಧಿಯನ್ನು ದುರುಪಯೋಗ ಪಡಿಸುತ್ತಿದ್ದಾರೆಂಬುದು ಈ ಕ್ರಮಕ್ಕೆ ಸರಕಾರವು ಕೊಡುವ ತುದಿನಾಲಗೆಯ ಉತ್ತರವಾಗಿದೆ. ಮಠಗಳ ಪರವಾಗಿ ಈ ಕ್ರಮವು ಪ್ರತಿಭಟಿಸಲ್ಪಟ್ಟು ಶಾಸನಸಭೆಯಲ್ಲಿಯೂ ಕೆಲ ಪತ್ರಿಕೆಗಳಲ್ಲಿಯೂ ಅದರ ವಿರುದ್ಧ ಚರ್ಚೆಗಳು ಎದ್ದಾಗ ಸರಕಾರದವರು ತತ್ಕಣ ಹಣವನ್ನು ದುರುಪಯೋಗ ಪಡಿಸಿದ ಮಠಗಳ ಹೆಸರುಗಳ ಪಟ್ಟಿಯೊಂದನ್ನು ಪ್ರಸಿದ್ಧಿಸಿದರು. ಆದರೆ ಮಠಗಳ ವ್ಯವಸ್ಥೆಯಲ್ಲಿ ಇಂಥ ದುರ್ವ್ಯವಹಾರಗಳಾಗುತ್ತಿರುವವೆಂದು ಸರಕಾರದವರು ಅವುಗಳ ಆಡಳಿತೆಯನ್ನು ವಶಪಡಿಸಿಕೊಳ್ಳುವದು ಸಮಂಜಸವಾದೀತೆ?

ಮದ್ರಾಸ್ ಸರಕಾರದ ಈ ನೀತಿಯು ವಿಶಾಲತರವಾದ ತತ್ವಗಳ ಒರೆಗಲ್ಲಿಗೆ ಹಚ್ಚಲ್ಪಡಬೇಕಾಗಿದೆ. ನಮ್ಮ ರಾಷ್ಟ್ರದ ಸರಕಾರವು ಲೌಕಿಕವೆನ್ನಿಸಿಕೊಳ್ಳುತ್ತದೆ. ಅದು ಧರ್ಮಸಂಸ್ಥೆಗಳ ವ್ಯವಸ್ಥೆಯಲ್ಲಿ ಕೈಹಾಕುವದು ಎಂದೂ ಸಮಂಜಸವಾಗಲಾರದು. ಅಂದಾಕ್ಷಣ ಧರ್ಮನಿಧಿಗಳ ಸದುಪಯೋಗ ದುರುಪಯೋಗಗಳ ಬಗ್ಗೆ ಸರಕಾರವು ಉದಾಸೀನವಾಗಿರಬೇಕೆಂದರ್ಥವಲ್ಲ. ಆದರೆ ಹಿಂದೂ ಸಮಾಜವೊಂದನ್ನೇ ಲಕ್ಷಿಸಿ ಕಾನೂನು ಮಾಡಬೇಕೆ? ಕ್ರಿಶ್ಚನ್ ಮತ್ತು ಮುಸ್ಲಿಮ್ ಅಥವಾ ಬೇರಾವ ಜಾತಿಯ ಧರ್ಮಸಂಸ್ಥೆಗಳು ಈ ನಿಯಮಗಳಿಂದ ಏಕೆ ಮುಕ್ತವಾಗಬೇಕು? ಹಿಂದೂ ಜಾತಿಯ ಉದ್ಧಾರವೊಂದೆ ಸರಕಾರದ ಕರ್ತವ್ಯವೆ? ಇತರ ಜಾತಿಗಳ ಧರ್ಮನಿಧಿಗಳು ದುರುಪಯೋಗಿಸಲ್ಪಡುವ ಸಂಭವವೇ ಇಲ್ಲವೆ? ಅಥವಾ ಅಂಥ ದುರುಪಯೋಗವನ್ನು ತಡೆಯುವ ಹೊಣೆ ಸರಕಾರಕ್ಕಿಲ್ಲವೆ? ಲೌಕಿಕ ಸರಕಾರವು ಸಮಸ್ತ ಧರ್ಮನಿಧಿಗಳಿಗೂ ಅನ್ವಯಿಸುವಂತೆ ಕಾನೂನು ಮಾಡಬೇಕಾಗಿದ್ದಿಲ್ಲವೆ?

ಮೇಲಿನದು ತಾತ್ವಿಕ ವಿರೋಧವಾಯಿತು. ಆದರೆ ವ್ಯವಹಾರ ರೀತಿಯಲ್ಲಾದರೂ ಸರಕಾರದ ನಡೆವಳಿ ನ್ಯಾಯ್ಯವೆಂದು ತೋರುವದಿಲ್ಲ. ಸರಕಾರದ ಆಡಳಿತೆ ಸಂಪೂರ್ಣ ನಿರ್ದೋಷವಾಗಿದೆಯೆಂದು ಹೇಳುವ ಧೈರ್ಯ ಯಾರಿಗಿದೆ? ಪರೀಕ್ಷೆಯ ಪ್ರಶ್ನಪತ್ರಿಕೆಗಳಂಥ ಚಿಲ್ಲರೆ ವಿಷಯಗಳಲ್ಲಿ ಕೂಡ ತಮ್ಮ ಶಾಖೆಗಳಿಂದ ಕರ್ತವ್ಯ ಪಾಲನೆ ಮಾಡಿಸಲಾರದೆ ಹೋದ ಸರಕಾರಗಳು ಘನತರವಾದ ಕರ್ತವ್ಯಗಳಲ್ಲಿ ಎಷ್ಟು ದಕ್ಷತೆಯನ್ನು ತೋರಿಸಬಹುದು? ಲಂಚಗುಳಿತನವು ಎಲ್ಲ ಶಾಖೆಗಳಲ್ಲಿ ತಾನಾಗಿ ಮೆರೆಯುತಿರುವಾಗ ಮತ್ತು ಕೆಲ ಮಂತ್ರಿಗಳ ಮೇಲೆ ಕೂಡ ಅಯೋಗ್ಯ ವರ್ತನೆಯ ಆರೋಪಗಳಿರುವಾಗ ಸರಕಾರವು ಹೆಚ್ಚು ಹೆಚ್ಚು ಹೊಣೆಯನ್ನು ಏಕೆ ತಲೆಯ ಮೇಲೆ ತೆಗೆದುಕೊಳ್ಳುವದು?

ಧನದ ದುರುಪಯೋಗವನ್ನು ಸರಕಾರಿ ಮೇಲ್ವಿಚಾರಣೆಯು ಸಫಲವಾಗಿ ದೂರೀಕರಿಸಬಲ್ಲದೆ? ಮಠದ ದಾರುಪತ್ಯಗಾರರೊಬ್ಬರು ನನಗೆ ಹೇಳಿದಂತೆ, ರಶೀದಿಯಿಲ್ಲದೆ ಸುಳ್ಳು ಖರ್ಚು ಹಾಕುವ ಬದಲು ಸುಳ್ಳು ರಶೀದಿಯನ್ನು ಹುಟ್ಟಿಸಿ ಖರ್ಚು ಬರೆಯುವುದಷ್ಟೆ ಬದಲು. ಅಷ್ಟೇ ಸರಕಾರದ ಇಲಾಖೆಗಳಲ್ಲಿ ಪ್ರಜಾಪಾಲನ ಭಕ್ತಿಯ ಸುಳ್ಳು ಲೆಕ್ಕಗಳು ರಾಜಾರೋಷವಾಗಿ ನಡೆಯುತ್ತಿಲ್ಲವೆ? ಇಂಥ ದುರುಪಯೋಗದ ಬಗ್ಗೆ ಇರುವ ಕ್ರಿಮಿನಲ್ ಕಾನೂನುಗಳನ್ನೇಕೆ ಉಪಯೋಗಿಸಿ ಅಧಿಕಾರಿ ವರ್ಗದ ಮೇಲೆ ಉಪಯೋಗಿಸಬಾರದು? ದುರುಪಯೋಗವಾಗುತ್ತದೆಯೆಂದು ಸಂಸ್ಥೆಗಳ ಮೇಲೆ ಸರಕಾರವು ನಿಯಂತ್ರಣವಿಡುವುದಾದರೆ ಸರಕಾರದಲ್ಲಿ ಲಂಚಗುಳಿತನವಿದೆಯೆಂದು ಅದರ ಮೇಲೆ ಯಾರು ನಿಯಂತ್ರಣವಿಡಬೇಕು? ನಿಜವಾಗಿ ಈಗಾಗಲೆ ಈ ಜಿಲ್ಲೆಯ ಒಂದು ಮಠದ ಅಧಿಕಾರಿಗಳ ಮೇಲೆ ಕ್ರಿಮಿನಲ್ ಕಾಯದೆಗಳ ಪ್ರಯೋಗವಾಗಿದೆ. ಇದನ್ನೆ ವಿಸ್ತಾರವಾಗಿ ಪ್ರಯೋಗಿಸಿದರೆ ತಾನಾಗಿಯೆ ಪರಿಸ್ಥಿತಿ ಸುಧಾರಿಸದೆ?

ಹೊಸ ಮಸೂದೆಯಿಂದ ಸರಕಾರ ಹೊಸ ದೊಡ್ಡ ಅಧಿಕಾರಗಳನ್ನೇನೂ ತೆಗೆದುಕೊಂಡಿಲ್ಲವೆಂದು ನಟಿಸಲು ಮದ್ರಾಸ ಸರಕಾರದ ಪ್ರಚಾರ ಶಾಖೆಯ ಕರಪತ್ರವು ಪ್ರಯತ್ನ ಮಾಡುತ್ತಿದೆ. ಹಿಂದಿನ ಕಾನೂನುಗಳಿಂದ 'ತಾವಾಗಿ ಹರಿದು ಬರುವ' ಸೂಚಿತವಾದ, (Implied) ಅಧಿಕಾರಗಳನ್ನಷ್ಟೆ ಸ್ಪಷ್ಟವಾಗಿ ತೆಗೆದುಕೊಳ್ಳಲಾಗುತ್ತಿದೆಯಂತೆ. ಅಂದಿನ ಕಾನೂನುಗಳಿಂದ ಧ್ವನಿತವಾದ ಕೆಲ ಅಧಿಕಾರಗಳನ್ನು ಇಂದು ಸ್ಪಷ್ಟವಾಗಿ ತೆಗೆದುಕೊಳ್ಳುವದು, ಇಂದಿನದರಿಂದ ಧ್ವನಿತವಾದುವುಗಳನ್ನು ನಾಳೆ ತೆಗೆದುಕೊಳ್ಳುವದು, ಇದಕ್ಕೆ ಕೊನೆಯೇ ಇಲ್ಲ. ಮಠ ಸಂಸ್ಥಾನಗಳನ್ನು ಪೂರ್ತಿ ಕಬಳಿಸಿದಾಗಲೇ ಈ ನೀತಿಗೆ ಕೊನೆ. ಕೊನೆಗೆ ಮಠಾಧಿಪತಿಗಳು ತಮ್ಮ ಸ್ಥಾನವನ್ನುಳಿಸಿಕೊಳ್ಳಬೇಕಾದರೆ ಅಧಿಕಾರಿಗಳು ಹೇಳಿದಂತೆ ಕುಣಿಯಬೇಕು, ಅವರ ರಾಜಕೀಯ ಧಾರ್ಮಿಕ ವಿಚಾರಗಳಿಗೆ ಮನಸಿಲ್ಲದಿದ್ದರೂ ಸೈಗುಟ್ಟಬೇಕು, ತನ್ನ ಶಿಷ್ಯರ ಮತಗಳನ್ನು ಕೂಡ ವಿಶಿಷ್ಟ ರಾಜಕೀಯ ಪಕ್ಷಕ್ಕೆ ಕೊಡಿಸಬೇಕು, ಎಂಬ ಸ್ಥಿತಿ ಒದಗುವದು. ಮಠಗಳಿಗೆ ಸಾಲ ಕೊಟ್ಟ ಕೆಲ ಬ್ಯಾಂಕುಗಳು ಕೂಡ ಚುನಾವಣೆಗಳಲ್ಲಿ ಮಠಾಧಿಪತಿಗಳಿಗೆ ಬೆದರಿಕೆ ಹಾಕಿ ಅವರ ಆಶ್ರಿತರ ಮತಗಳನ್ನು ತಮಗೆ ಬೇಕಾದವರಿಗೆ ಕೊಡಿಸಲು ಪ್ರಯತ್ನಿಸಿದ್ದು ನನಗೆ ಗೊತ್ತಿದೆ. ಇನ್ನು ಅಧಿಕಾರ ಸಂಪನ್ನ ರಾಜಕೀಯ ಪಕ್ಷಗಳ ಮಾತೇನು!

ನಿಜವಾಗಿ ಮಠಗಳ ಆಡಳಿತೆಯನ್ನು ಸುಧಾರಿಸುವ ಇಚ್ಛೆ ಸರಕಾರಕ್ಕಿದ್ದರೆ ಅದು ಆಯಾ ಮಠಗಳ ಶಿಷ್ಯರ ಸಮಿತಿಗಳ ಮೂಲಕ ಆ ಕೆಲಸವನ್ನು ಮಾಡಬೇಕು. ಮಠಗಳ ಒಳಿತು ಕೆಡಕುಗಳಿಗೆ ಶಿಷ್ಯರೇ ಬಾಧ್ಯರು. ಶಿಷ್ಯರನ್ನು ಕಡೆಗಣಿಸಿ ಕಾನೂನು ಮಾಡಹೋಗುವುದೆಂದರೆ ಹಿಂದೂ ಸಮಾಜದ ಪಂಗಡಗಳ ಅಸಂಘಟಿತ ಸ್ಥಿತಿಯ ಪ್ರಯೋಜನ ಪಡೆದು ಸರಕಾರದ ಸರ್ವಾಧಿಕಾರವನ್ನು ಸಮಾಜದ ಧರ್ಮಸಂಸ್ಥೆಗಳ ಮೇಲೆ ಹೊರಿಸುವುದೇ ಸರಿ. ಮೇಲಾಗಿ ಮಠ ಸಂಸ್ಥಾನಗಳ ಕಾಯದೆಗಳನ್ನು ಮಾಡಬೇಕಾದ್ದು ಕೇಂದ್ರ ಸರಕಾರದ ಅಧಿಕಾರಕ್ಕೆ ಸೇರಬೇಕು. ಮಠಗಳು ಏಕಪ್ರಾಂತಿಕವಲ್ಲ. ಉದಾಹರಣೆಗಾಗಿ ಉಡುಪಿಯ ಮಾಧ್ವ ಮಠಗಳ ಶಿಷ್ಯರು ಮತ್ತು ಮಠಗಳಿಗೆ ಆಸ್ತಿಯನ್ನು ಉಂಬಳಿ ಬಿಟ್ಟವರು ಬರಿ ಮದ್ರಾಸ ಪ್ರಾಂತದಲ್ಲಿರದೆ ಮೈಸೂರು, ಮುಂಬಯಿ, ಹೈದರಾಬಾದ ಭಾಗಗಳಲ್ಲಿಯೂ ಇದ್ದಾರೆ. ಬಹು ಪ್ರಾಂತಗಳಲ್ಲಿ ಶಾಖೆಗಳಿರುವ ಬ್ಯಾಂಕ್, ವಿಮಾ ಕಂಪನಿಗಳ ವೌಕರರ ತಂಟೆಗಳನ್ನು ತೀರ್ಮಾನಿಸುವ ಹಕ್ಕನ್ನು ಕೇಂದ್ರವೇ ವಹಿಸಿರುವಂತೆ ಇದನ್ನೂ ಕೇಂದ್ರವೇ ವಹಿಸಲಿ.

ಇನ್ನು ಮಠಾಧಿಪತಿಗಳಾದರೂ ಕಾಲ ಗುಣವನ್ನರಿತು ಮುಂದೆ ಸಾಗಬೇಕು. ವ್ಯರ್ಥವಾಗಿ ವಕೀಲರನ್ನು ರಾಜಧಾನಿಗೆ ಓಡಾಡಿಸುವುದು ಬಿಟ್ಟು ತಂತಮ್ಮ ಶಿಷ್ಯರನ್ನು ಸಂಘಟಿಸಿ ಅವರನ್ನು ವಿಶ್ವಾಸದಲ್ಲಿ ತೆಗೆದುಕೊಂಡರೆ ಸರಕಾರಕ್ಕೆ ಮತ್ತೆ ಮಠಗಳ ಮೇಲೆ ಕೈಯೆತ್ತುವದು ಸರಳವಾಗಿ ತೋರಲಿಕ್ಕಿಲ್ಲ. ಇದರಿಂದ ಮಠಾಧೀಶರಿಗೆ ಯಾವ ಅಗೌರವವೂ ಇಲ್ಲ. ಗೌರವವೇ ಬೆಳೆಯುವದು.

ಉಡುಪಿ — ಕೆ. ವೆಂಕಟಕೃಷ್ಣಾಚಾರ್ಯ
೧೦ ೫-೪೯

ನಿಸರ್ಗದ ನಡುವೆ

ಸುತ್ತು ಹೇಟೆಯ ಹಿಂದು
ನಡುವಿನುದು ಹುಂಚ
ಹೇಸಿ ಹೇಟೆಗಳೆಲ್ಲ
ಹುಂಚಕ್ಕೆ ಚಂದ.
ಈ ನಿಸರ್ಗದ ಚೆಲುವು
ನನಗೆಲ್ಲ ಚೆಂದ
ಸುತ್ತಲೂ ಹೇಟೆಗಳು
ನಡುವೆ ನಾ ಹುಂಚ!

— ವಿ. ಜಿ. ಭಟ್ಟ

'ಜ್ಞಾನವಿಲ್ಲ' ಅರ್ಥಾತ್ ವಿಜ್ಞಾನ

ಅತ್ತೆ ಸೊಸೆಯರು ಕೂಡಿ ಟಾಂಗಾ ಸವಾರಿಯಿಂದ ಸೊಸೆಯ ಮನೆಗೆ ಪಯಣ ಬೆಳೆಸಿದಾಗ "ಎಲ್ಲೇ ನಿನ್ನ ಮನೆ?" ಎಂದು ಅತ್ತೆ ಕೇಳಿದ್ದಕ್ಕೆ ಆ "ಅಪ್ಟುಡೇಟ್" ಸೊಸೆ ತನ್ನ ಮನೆಯ ಕಡೆ ಕೈತೋರಿಸಿ "ಜ್ಞಾನವಿಲ್ಲ" (Jnan Villa ಜ್ಞಾನ ಕುಟೀರ) ಎಂದು ಪಾಟಿ ತಗಲ್ಸಿರೋದು ಕಾಣುವುದಿಲ್ಲವೇ?" ಎಂದಳಂತೆ! ಇದು ಕೈಲಾಸಂ ಕಂಡ ಕಾಣ್ಕೆ. ಇಂದಿನ ವಿಜ್ಞಾನರೂಢ ನಾಗರಿಕತೆಯ ಸುಪ್ರಶೀಳಳಾದ ಸೊಸೆ ಅನಿರೀಕ್ಷಿತವಾಗಿ ತನ್ನ ವರ್ಗದ ಮಾನವರ ಹಣೆಯ ಬರೆಹವನ್ನು ತೂಕಮಾಡಿ ಹೇಳಿಬಿಟ್ಟಳು.

"ವಿಜ್ಞಾನ" ಎಂದರೆ ವಿಕೃತಜ್ಞಾನ ಅಥವಾ ವಿಶಿಷ್ಟ ಅಂದರೆ ಸಮಗ್ರವಲ್ಲದ ಜ್ಞಾನ ಎಂಬ ಶಬ್ದಾರ್ಥ ಸ್ವತಃ ಸಿದ್ಧವಿದೆ. ಈ ಮೂಲಾರ್ಥ ನುಡಿದ ಭವಿಷ್ಯ ಇಂದು ನಿಜವಾದದ್ದು ಸರ್ವವೇದ್ಯವಾಗಿದೆ. ಶ್ರೀ ಕೆ. ವಿ. ಪುಟ್ಟಪ್ಪನವರೊಮ್ಮೆ ತಮ್ಮ ಭಾಷಣದಲ್ಲಿ ಅಜ್ಞಾನಿ, ಕುಜ್ಞಾನಿ ಮತ್ತು ಸುಜ್ಞಾನಿ ಎಂದು ಮೂರು ವಿಧದ ಜನರಿದ್ದಾರೆಂದು ಹೇಳಿದ ನೆನಪು. ಈ ವಿಜ್ಞಾನಿಗಳು ಮೇಲಿನ ಮಧ್ಯಮ ವರ್ಗದವರು. ಇವರಿಗೆ ಕುತೂಹಲ ಬುದ್ಧಿಯನ್ನು ದುಡಿಸಿ ಭೀಕರವಾದ ಅಸ್ತ್ರಶಸ್ತ್ರಗಳನ್ನು ನಿರ್ಮಿಸಿ ರಾಜಕಾರಣಿಗಳ ಕೈಯಲ್ಲಿ ಕೊಡಲು ಬರುತ್ತದೆ; ಆದರೆ ಅವರು ಇವರಿಗೆ ಯಾವ ಪುರಸ್ಕಾರವನ್ನೂ ಕೊಡದೆ ತನ್ಮೂಲಕ ಜಗತ್ತಿನ ಒಡೆಯತನವನ್ನು ಸಂಪಾದಿಸಿ ಅಧಿಕಾರನಶೆಸಿ ಹಿಂಸಾಭೈರವಿಯನ್ನು ಹಾಡಿದರೆ ಇವರಿಗೆ ಎದೆ ತಲ್ಲಣಿಸುತ್ತದೆ! ಈ ಬಾಲಿಶ ಬುದ್ಧಿಗೇನೆನ್ನಬೇಕು? ವಿಜ್ಞಾನಿಗಳೆನಿಸಿಕೊಂಬ ಇಂದಿನ ಈ ಪಾಶ್ಚಾತ್ಯ ಶೂರರು ಜಗತ್ತಿಗೆ ಧರ್ಮ ಬೇಡ, ದೇವರು ಬೇಡ, ನೀತಿ ಬೇಡ, ಸದಾಚಾರ ಬೇಡ ಎಂಬ ಬುದ್ಧಿಗೇಡಿತನವನ್ನು ಮಹಾವಿಜ್ಞಾನ, ಸರ್ವಸತ್ಯಸಾರ ಎಂದು ಸಾರಿ ಜನಗಳ ತಲೆಕೆಡಿಸಿ ಸಮಾಜದ ರಚನೆಗೆ ಸಿಡಿಲುಬಡಿಯುವ ಕೆಲಸವನ್ನು ಬೇರೆ ಅಜಸ್ರವಾಗಿ ಸಾಗಿಸಿದ್ದಾರೆ. ಜನತೆ ಪರೋಪಕಾರ ಬುದ್ಧಿಯನ್ನು ಕೊಲ್ಲುವ ಇವರಿಗೆ ಸ್ವೋಪಕಾರಕ್ಕೆ ಅದು ಅತ್ಯಂತಿಕವಾದ ಲಾಭಸಾಧನ ಎಂಬುದು ಹೇಗೆ ತಿಳಿಯಬೇಕು?

ತಮ್ಮ "ಥಿಯರಿ"ಗಳು ವರುಷವರುಷ ತಮ್ಮವರಿಂದಲೇ ತಳಕಿತ್ತು ಹಾರಿಹೋಗುತ್ತಿದ್ದರೂ ಹೊಸ ಹೊಸ "ಥಿಯರಿ" ಎಂಬ ಜ್ಞಾನಾಭಾಸಗಳನ್ನು ಈ ಮೊಂಡರು ತಮ್ಮ ಅಲ್ಪಾನುಭವ, ಅಲ್ಪ ಪ್ರಯೋಗಗಳಿಂದ ಹೊಸೆದು ಅದೇ ಅಜರಾಮರ ಸತ್ಯವೆಂದು ಸಾರುತ್ತಾರೆ. ಒಂದಕ್ಕಿಂತ ಹೆಚ್ಚು ಪೂರ್ಣ ಸತ್ಯವಿರಲಾರದೆಂಬ ಜ್ಞಾನ ಇವರಿಗಿಲ್ಲ.

"ತನ್ನೊಡಲಿನ ಮೇಲೇ ತನ-
ಗೆಲ್ಲದೆಯಧಿಕಾರ?
ಬರಿಯ ಅಹಂಕಾರ;
ತನ್ನಾತ್ಮದ ತಾನಳಿಯಲು
ಬಾರದ ಕುಂಬಾರ—
ಅವನಿಗೆ ಧಿಕ್ಕಾರ!"

ಎಂಬ ಜಾತಿಗೆ ಸೇರಿದ ಈ ವಿಜ್ಞಾನಿಗಳಿಗೆ ತಮ್ಮ ಇರವಿನ ತಳಬುಡದ ಅರಿವೇ ಇಲ್ಲ. ಇಂಥವರು ಜಗದ್ಗುರು ಪಟ್ಟವಹಿಸಿ ಅದು ಸಾರ್ವಕಾಲಿಕ, ಇದು ಸಾರ್ವದೇಶಿಕ ಎಂದು ಬಾಯಿಗೆ ಬಂದುದನ್ನಾಡಿದರೆ ಭಾರತೀಯರು ನಂಬುತ್ತ ಹೋಗುವದು ಅವರ ಅಧ್ಯಾತ್ಮಿಕ ಪೌರುಷಕ್ಕೆ ಕಲಂಕಪ್ರಾಯವಲ್ಲವೆ?

ಅಧಿಕೋತ್ಪಾದನೆಯನ್ನು ಸಾಧಿಸಲು ತಮ್ಮ ಯಂತ್ರೋಪಕರಣಗಳು ನೆರವಾಗಿವೆ ಎಂದು ಜಂಭ ಕೊಚ್ಚಿಕೊಳ್ಳುವ ಇವರಿಗೆ ಆ ಅಧಿಕೋತ್ಪಾದನದ ಸಾಧನಗಳನ್ನು ಅಲ್ಪಸಂಖ್ಯ ಬಂಡವಾಳಿಗರ ಕೈವಶ ಮಾಡಿ ತನ್ಮೂಲಕ ದೇಶವಿದೇಶಗಳ ಬಹುಸಂಖ್ಯ ಜನರಲ್ಲಿ ನಿರುದ್ಯೋಗ ಮತ್ತು ದಾರಿದ್ರ್ಯಗಳು ಬೆಳೆಯುವಂಥ ಆರ್ಥಿಕ ನೀತಿ ಪ್ರಚಲಿಸಲು ಕಾರಣವಾದುದು ತಿಳಿಯದಂತಾಗಿದೆ. ಅಮೇರಿಕದಲ್ಲಿ ಮಾರಲು ಮಾರ್ಕೆಟ್ಟು ಸಿಗದೆ, ದರ ಇಳಿಸಲು ಅಹಂಕಾರ ಬಿಡದೆ ಎಷ್ಟೋ ಸಾಮಗ್ರಿಗಳನ್ನು ಸುಡುತ್ತಾರಂತೆ. ಆ ಸಾಮಾನುಗಳ ಜೊತೆಗೆ ಈ ವಿಜ್ಞಾನಿಗಳನ್ನೂ ಇವರ ನೆರವಿಗರಾದ ಎಂಜಿನಿಯರರನ್ನೂ ಅಲ್ಲದಿದ್ದರೂ ಅವರ ಸಾಧನೋಪಕರಣಗಳನ್ನೂ ಸಮುದ್ರಕ್ಕೇಕೆ ಎಸೆದು ಬಿಡಬಾರದು? ಅಲ್ಲಿಯ ಹಂದಿಗಳಿಗಾದರೂ ತಿನ್ನಿಸಿಯಾರಲ್ಲದೆ ಹೆಚ್ಚಿನ ಗೋದಿಯನ್ನು ಭಾರತದಂಥ ಬಡನಾಡಿಗೆ ಕಳಿಸಲು ಆ ವ್ಯಾಪಾರಿ ಬುದ್ಧಿಯ ಧಣಿಯರಿಗೆ ಮನಸ್ಸು ಬಾರದು. ಇದು ಶುದ್ಧ ವಿಜ್ಞಾನ ಕಲಿಸಿದ ಬುದ್ಧಿವಂತಿಕೆ, ನಾಗರಿಕ ನೀತಿ!

"ಧರ್ಮವಿಲ್ಲದ ವಿಜ್ಞಾನ ಕುಂಟು" ಎಂದು ವಿಜ್ಞಾನದ ಜಗದ್ಗುರು ಐನ್‌ಸ್ಟೀನರೇ ತಲೆಯ ಮೇಲೆ ಕೈಯಿಟ್ಟು ಹೇಳತೊಡಗಿದರೂ ಮಿಕ್ಕ ಅನಂತಸಂಖ್ಯ ಶಾಸ್ತ್ರಜ್ಞರ ಬುರುಡೆಗೆ ಆ ಮಾತಿನ ಅರ್ಥವಾಗಿಲ್ಲ. ಈ ಪ್ರಾಕೃತ ಮನುಷ್ಯರು ದೇವರನ್ನೂ ತಾವೇ ಸೃಷ್ಟಿಸುವೆವೆಂಬ ವರೆಗೆ ಗರ್ವಿತರಾಗಿ ಜೀವನದ ಶಾಂತಿ ಸುಖಗಳನ್ನು ಹೆಚ್ಚಿಸುವ ಹೆಸರಿನಲ್ಲಿ ಮಾನವರನ್ನು ಯಾಂತ್ರಿಕರನ್ನಾಗಿಯೂ, ಯಂತ್ರದಾಸರನ್ನಾಗಿಯೂ, ವಿವೇಕ ಶೂನ್ಯರನ್ನಾಗಿಯೂ ಮಾಡುವ ಪ್ರಯತ್ನದಲ್ಲಿ ಬಿದ್ದಿದ್ದಾರೆ. ಇದರಲ್ಲಿ ಅತಿಶಯೋಕ್ತಿ ಇದೆ ಎಂಬವರು ಕಣ್ಣಿದ್ದೂ ಕುರುಡರು, ಕಾಲಿದ್ದೂ ಕುಂಟರು, ಕಿವಿಯಿದ್ದೂ ಕಿವುಡರು ಎಂದು ಬಣ್ಣಿಸಬೇಕಾದೀತು. ಇಂದಿನವರೆಗೆ ನಡೆದು ಬಂದ ವಿಜ್ಞಾನಿಗಳ ಆಚಾರ ವಿಚಾರ ಪ್ರಚಾರಗಳನ್ನು ಅವಲೋಕಿಸಿದರೆ ಮೇಲಿನ ಆರೋಪಗಳನ್ನು ಎದುರಿಸಲು ಯಾವ ವಿಜ್ಞಾನಿಗೂ ಶಕ್ತಿಯಿಲ್ಲವೆಂದು ಈ ಮೂಲಕ ಸಾರಿ ಹೇಳುತ್ತೇನೆ.

— ಸಮಾಜ ವಿಜ್ಞಾನಿ

ಲೇಖಕರು ಮತ್ತು
ಚಿತ್ರ ಗ್ರಾಹಕರು
ಶ್ರೀ ಶಾ. ರಾ. ನಾಗರಾಜ

...ರದ ಅದ್ಭುತ 'ಮನಮಂದಿರ'

...ಮತ್ತು ಕಲಾದೃಷ್ಟಿಯಿಂದ ಮೇಲ್ಮೈನೆತ್ತ ಅವಶೇಷಗಳು

...ಕ್ಕೆ ಇದ್ದಂತೆ. ಇಲ್ಲಿನ
... ಫಲಾಹಾರವೆಂದರೆ,
... ಮೊಸರಿನ ಜೊತೆ
... ಕುಡಿಯುವುದು.
...ಕ್ಷಿಣ ಭಾರತದ ಹಾಗೆ
...ಇಲ್ಲ. ಎಲ್ಲಾ ತಿಂಡಿ
...ನಲ್ಲೇ ನಮಗೆ ಬೇಕಾ
...ತ್ತಾರೆ.
... ಆಕರ್ಷಿಸಿರುವ
...ದರೆ, ಮಣ್ಣು ಮತ್ತು
...ರುವ, ಒಡೆಯುದಂತಿ
... ಈ ಬೊಂಬೆಗಳು
...ರಾಗುತ್ತಿದ್ದು ಬಹಳ
...
...ರವು ಎರಡು ಭಾಗ
...ಿ, ಹಳೆಯಪಟ್ಟಣ
...ಟ್ಟಣ ಎಂದು. ಹೊಸ
... ಎನ್ನುತ್ತಾರೆ. ಹಿಂದೆ
... ಎಂಬುವನು ಗ್ವಾಲಿ
... ಅವನ



...ಂದ ಲಷ್ಕರ್
... ಅಂತೂ
...ಕೇರಿಗಳೆಲ್ಲ ಲಷ್ಕರ್
... ಬೀದಿಗಳು ಮತ್ತು
...ಗವೆ. ಜಯವಿಲಾಸ
... ಎಂಬ ಅರಮನೆ
... ಪುರಾತನ ವಸ್ತು
...ದೆ.
...ದ ಹಳೆಯ ಭಾಗವು
...ಯ ಮತ್ತೊಂದು
...ಟ್ಟಣದಲ್ಲೇ, ಜಿ. ಐ.
...ಣ. ಗ್ವಾಲಿಯರ್‌ನ
...ದರೆ ಅಲ್ಲಿನ ಕೋಟೆ.

...ಟೆ

... ಒಂದು ಬೆಟ್ಟದಲ್ಲಿ
...ಯ ಗೋಡೆಗಳು
...ಲಪಿದ್ದು ೨೦—೩೦
...ಟೆಯನ್ನು ಕಟ್ಟ
...ಯೂ, ಆಕ
... ಕೋಟೆ
...ಬಾಗಿಲುಗಳಿವೆ.
...ಂದ ಕೋಟೆಗೆ
...ರಿಯಿದೆ. ಹಳೆಯ
... ಹೊಸ ಭಾಗದಿಂದ
... ಹೋಗಿ ಬರು
...ರುತ್ತಾರೆ.

ಹಳೆಯ ಭಾಗದ ದಾರಿಯಿಂದ ಕೋಟೆಗೆ ಹೋಗುವ ದಾರಿಯಲ್ಲಿ, ಕೋಟೆಯ ಮಹಾದ್ವಾರಕ್ಕೆ ಹತ್ತಿರ ಜಮ್ಮಾ ಮಸೀದಿಯೂ ಮಹಮದ್‌ಗೌಸ್ ಎಂಬವನ ಪುರಾತನ ಗೋರಿಯೂ ಇದಕ್ಕೂ ಹತ್ತಿರ ಅಕ್ಬರನ ಆಸ್ಥಾನದ ಸಂಗೀತ ವಿದ್ವಾನ್ 'ತಾನಸೇನ'ನ ಗೋರಿಯೂ ಇವೆ.


ಕೋಟೆಯ ಪ್ರವೇಶಮಾಡಲು ತಲೆಗೆ ಎರಡಾಣೆ ಕೊಟ್ಟು ಅಪ್ಪಣೆ ಚೀಟಿ ಪಡೆಯಬೇಕು. ಅದಕ್ಕಾಗಿ ಮಹಾದ್ವಾರದ ಬಳಿ ಸಿಬ್ಬಂದಿಯಿದೆ. ಬೆಟ್ಟದ ಮಧ್ಯಕ್ಕೆ ಅರ್ಥಾತ್ ಕೋಟೆಯೊಳಗೆ ಪ್ರವೇಶಮಾಡಬೇಕಾದರೆ ಒಂದೊಂದಾಗಿ ಸುಮಾರು ೭ ಮಹಾದ್ವಾರಗಳನ್ನು ದಾಟಬೇಕು. ಒಂದು ಎರಡು ಮತ್ತು ಮೂರನೆಯವು ಹತ್ತಿರವೇ ತ್ರಿಕೋನಾಕಾರದಲ್ಲಿವೆ. ಮೂರನೆ ದ್ವಾರವು ಮಾನಸಿಂಗನ ರಾಣಿ ಕಟ್ಟಿಸಿದ ಅರಮನೆಗೆ ಪ್ರವೇಶಮಾಡುವಲ್ಲಿದೆ. ಮಾನಸಿಂಗನ ರಾಣಿಯು ಕಟ್ಟಿಸಿದ ಅರಮನೆಯಲ್ಲಿ ಈಗ ಪುರಾತನ ವಸ್ತುಸಂಗ್ರಹಾಲಯ (Archaeological museum) ಇದೆ. ಗ್ವಾಲಿಯರ್ ಸಂಸ್ಥಾನದಲ್ಲಿ ನಾನಾ ಕಡೆಗಳಲ್ಲಿ ಹಿಂದಿನ ಕಾಲದ ಮಣ್ಣಲ್ಲಿ ಹೂತುಹೋಗಿರುವ, ಅನೇಕರ ದಾಳಿಗೆ ಒಳಗಾಗಿ ಭಿನ್ನ ಭಿನ್ನವಾಗಿರುವ ಶಿಲ್ಪಗಳೂ ಶಿಲಾಶಾಸನಗಳೂ ದೊರೆತಿವೆ. ಸುಮಾರು ೩—೪ ಸಾವಿರ ವರ್ಷಗಳ ಹಿಂದಿನವುಗಳೆಂದು ಶೋಧಿಸಲ್ಪಟ್ಟಿರುವ ವಸ್ತುಗಳು ಅನೇಕವಿವೆ. ಇದು ಪ್ರತಿಯೊಬ್ಬ ಭಾರತೀಯನೂ ಸಂದರ್ಶಿಸಬೇಕಾದ ಸ್ಥಳ.

ಈ ಸಂಗ್ರಹಾಲಯದ ಸಂದರ್ಶನದಿಂದ ಪ್ರತಿ ಭಾರತೀಯನೂ ಬಹಳ ಹೆಮ್ಮೆ ಪಡುತ್ತಾನೆ. ಭಾರತೀಯ ಪ್ರಾಚೀನ ಶಿಲ್ಪಕಲೆಯು ಎಷ್ಟರಮಟ್ಟಿಗೆ ಉಚ್ಛ್ರಾಯ ಸ್ಥಿತಿಯಲ್ಲಿದ್ದು, ಜಗತ್ತಿಗೇ ಪ್ರಸಿದ್ಧವಾಗಿದ್ದು, ನಾನಾದೇಶದ ಜನರ ನೆನಪಿನಲ್ಲಿತ್ತೆಂಬುದು ವ್ಯಕ್ತವಾಗುತ್ತದೆ. ಅಲ್ಲಿರುವ ಭಿನ್ನ ಭಿನ್ನವಾದ ವಿಗ್ರಹಗಳು ಇನ್ನೂ ಪ್ರೇಕ್ಷಕರ ಮನಸ್ಸನ್ನು ಆಕರ್ಷಿಸುವವು. ಈ ಸಂಗ್ರಹಾಲಯವನ್ನು ಸಂದರ್ಶಿಸಿದ ಯಾವನೂ ತಲೆದೂಗದಿರಲಾರನು. ಇಂತಹ ಸಂಗ್ರಹಾಲಯ ಮೈಸೂರು ಸಂಸ್ಥಾನದ ಬೆಂಗಳೂರು ...ದಲ್ಲೊಂದು ಇದೆ.

"ಮನಮಂದಿರ"

ಗ್ವಾಲಿಯರ್ ಕೋಟೆಯಲ್ಲಿ ೧೫ ಅಡಿ ಎತ್ತರದ ವರಾಹಮೂರ್ತಿಯ ವಿಗ್ರಹವಿದೆ. ಕೋಟೆಯ ಮೇಲ್ಭಾಗಕ್ಕೆ ಮುಂದುವರಿದರೆ ಮಾನಸಿಂಹನು ಕಟ್ಟಿಸಿದ ಅರಮನೆ. ಅದನ್ನು "ಮನಮಂದಿರ ಪ್ಯಾಲೇಸ್" ಎನ್ನುತ್ತಾರೆ. "ಚಿತ್ರ ಮಂದಿರ" ಎಂದೂ ಕರೆಯುವದುಂಟು. ಈ ಚಿತ್ರ ಮಂದಿರದ ೪ ಅಂತಸ್ತುಗಳಲ್ಲಿ ಎರಡು ಅಂತಸ್ತು ನೆಲದಮಟ್ಟದ ಮೇಲು ಭಾಗದಲ್ಲಿ ಇನ್ನೆರಡು ಅಂತಸ್ತು ಕೆಳಭಾಗಕ್ಕಿದೆ. ಗೋಡೆಯ ಹೊರಭಾಗದಲ್ಲಿ ಬಣ್ಣದ ಹಂಚುಗಳನ್ನು ಹಾಕಿ ಮನೋಹರವಾಗಿ ಕಾಣುವಂತೆ ಮಾಡಿದ್ದಾರೆ. ಈ ಅರಮನೆಯು ಸುಮಾರು ೫೦೦ ವರ್ಷಗಳ ಹಿಂದೆ ಕಟ್ಟಲ್ಪಟ್ಟಿದ್ದು, ಅನೇಕ ದಾಳಿಗಳಿಂದ ಪಾರಾಗಿದೆ. ಅಂದಿನ ಬಣ್ಣದ ಹಂಚುಗಳು ಹಲಕೆಲವು ಬಿದ್ದುಹೋಗಿದ್ದರೂ ಮಂದಿರದ ಸೌಂದರ್ಯ ಕುಂದಿಲ್ಲ. ಇದರ ಸೌಂದರ್ಯಕ್ಕೆ ಬಾಬರನೂ ತಲೆತೂಗಿದ್ದನಂತೆ.

ಮಂದಿರವು ಒಳಗಡೆ ಬಹಳ ವಿಚಿತ್ರವಾಗಿ ಮತ್ತು ಚಮತ್ಕಾರಕ ರೀತಿಯಿಂದ ಕಟ್ಟಲ್ಪಟ್ಟಿದೆ. ಯಾವ ಕಡೆಯಿಂದ ಬಂದೆವು, ಯಾವ ಕಡೆ ಹೋಗುತ್ತೇವೆ, ಎಲ್ಲಿಗೆ ಹೋಗುತ್ತೇವೆ ಎಂಬುದೇ ತಿಳಿಯದು.



'ಮನಮಂದಿರ'

ಅನೇಕಾನೇಕ ಕೊಠಡಿಗಳಿದ್ದು, ಒಂದೇ ಆಕಾರ, ಒಂದೇ ರೀತಿಯಲ್ಲಿ ರಚಿಸಲ್ಪಟ್ಟು, ಗಾಳಿ ಬೆಳಕು ಧಾರಾಳವಾಗಿ ಬರುವಂತಿದೆ. ಮಧ್ಯ ಅಂಗಳದಂತಿದ್ದು ಹಸಿರು ಹುಲ್ಲೂ ಹೂವಿನ ಕುಂಡಗಳೂ ಇವೆ. ಅಮೃತ ಶಿಲೆಯಿಂದ ಸುಂದರ ಶಿಲ್ಪ ಕೆಲಸ ಮಾಡಿದ್ದಾರೆ. ಒಳಗಡೆ ಹೋದರಂತೂ ಹೃದಯ ತುಂಬಿ ಹೋಗುವದು.

ಕಣ್ಣುಮುಚ್ಚಾಲೆ

ನೆನಪಿನಲ್ಲಿಡಬೇಕಾದ ಮತ್ತೊಂದು ಅಂಶವೆಂದರೆ, ಒಳಗಡೆ ಹೋದವರು ಹೊರಕ್ಕೆ ಬರಲು ದಾರಿ ತಿಳಿಯದೆ, ತಬ್ಬಿಬ್ಬಾಗುತ್ತಾರೆ. ಗಂಟೆಗಟ್ಟಲೆ ಸುತ್ತುತ್ತಲೇ ಇದ್ದು ಗಾಬರಿಬಿದ್ದು ಮತ್ತೊಬ್ಬರ ಸಹಾಯದಿಂದ ಹೊರಗೆ ಬರಬೇಕಾಗುತ್ತದೆ. ಅಕ್ಕಪಕ್ಕದ ಕೊಠಡಿಗಳಲ್ಲಿದ್ದರೂ ದಾರಿ ತಿಳಿಯದು. ಈ ಮಂದಿರದಲ್ಲಿ ದಾರಿ ತಪ್ಪಿ ಗಂಟೆಗಟ್ಟಲೆ ಕಂಗೆಡುವುದು ಒಂದು ತರಹದ ತಮಾಷೆ, ಕಣ್ಣುಮುಚ್ಚಾಟದಂತೆನ್ನಬಹುದು. ಸಿನಿಮಾಗಳಲ್ಲಿ "ಸ್ಟಂಟ" ನಾಯಕರು ತಲೆತಪ್ಪಿಸಿಕೊಂಡಂತೆ ಇಲ್ಲಿಯೂ ತಪ್ಪಿಸಿಕೊಳ್ಳಬಹುದು.

ಮನಮಂದಿರ ಅರಮನೆಯಿಂದ ನೆಟ್ಟಗೆ ಬೆಟ್ಟದ ಮೈದಾನದಲ್ಲಿ ಹೋಗಿ ಎಡ ಪಕ್ಕದ ರಸ್ತೆಯಲ್ಲಿ ತಿರುಗಿ ಮುಂದುವರಿದರೆ, ಎರಡು ದೇವಾಲಯಗಳನ್ನು ಕಾಣಬಹುದು. ದೂರದಿಂದಲೇ ಇವು ಪ್ರವಾಸಿಕರನ್ನು ಆಕರ್ಷಿಸುತ್ತವೆ: ಇದರಲ್ಲಿ ಒಂದು ದೊಡ್ಡದು, ಒಂದು ಚಿಕ್ಕದು. ದೇವಾಲಯವೆಂದು ಹೋಗಿ ನೋಡಿದರೆ, ಅಲ್ಲಿ "ದೇವರು" ಲಯವಾಗಿದಾನೆ. ಇವು "ಸಾಸಬಾಹು" ದೇವಾಲಯಗಳೆಂದು ಖ್ಯಾತಿಗೊಂಡಿವೆ. ಸುಮಾರು ೯೦೦ ವರ್ಷಗಳ ಹಿಂದೆ ಕಟ್ಟಲ್ಪಟ್ಟವುಗಳಂತೆ. ದೇವಾಲಯದ ಶಿಲ್ಪ ಬಹಳ ಸುಂದರವಾಗಿದ್ದು ಮಹಮ್ಮದೀಯರ ದಾಳಿಗೆ ಸಿಕ್ಕಿ ಭಿನ್ನಭಿನ್ನವಾಗಿದೆ. ಸುಂದರವಾಗಿ ಉಳಿದಿರುವ ಒಂದಂಗುಲವೂ ಇಲ್ಲ. ಈ ದೇವಾಲಯಗಳನ್ನು ಐತಿಹಾಸಿಕ ಹಾಗೂ ಪ್ರಾಚೀನ ಶಿಲ್ಪಕಲೆಯ ದೃಷ್ಟಿಯಿಂದ ನೋಡಿದರೆ ಮಾತ್ರ ಅದರ ಪ್ರಾಮುಖ್ಯ ತಿಳಿದೀತು. ಬೇರಾವ ದೃಷ್ಟಿಯಿಂದಲೂ ಸಾಂಪ್ರದಾಯಿಕ ಜನರಿಗೆ, ಯಾತ್ರಾರ್ಥಿಗಳಿಗೆ ಇವು ರುಚಿಸವು. ನಮ್ಮ ಸಂಗಡಿಗರಲ್ಲಿ ಕೆಲವರು, ಬೆಟ್ಟದ ಮೇಲೂ ಕೋಟೆಯಲ್ಲೂ ಏನೂ ಇಲ್ಲ ಎಂದು ಡಂಗುರ ಹಾಕಿದರು. ಅವರ ಮಾತವೇ ಹೆಚ್ಚಾದ್ದರಿಂದ, ಅವರ ಜ್ಞಾನದ ಮಟ್ಟ, ಮಟ್ಟವಾಗಿದೆಯೆಂದು ಸುಮ್ಮನಾದೆ. ಇಂತಹವುಗಳ ಮಹತ್ವವನ್ನು ತಿಳಿಯುವವರು ಅತಿ ವಿರಳ.

ಸಾಸಬಾಹು ಮಂದಿರಗಳಿಂದ ಪಶ್ಚಿಮಕ್ಕೆ ಹೋದರೆ ಸೂರಜಕೊಂಡವೆಂಬ ಸರೋವರವಿದೆ. ಇದು ಸುಮಾರು ೩೫೨೦೦ ಅಡಿ ಉದ್ದಗಲವಾಗಿದೆ. ಈ ಕುಂಡದ ರಸ್ತೆಯಲ್ಲಿ ನೇರವಾಗಿ ಮುಂದುವರಿದರೆ ಸುಮಾರು ೮೦

—೧೫ನೆಯ ಪುಟಕ್ಕೆ

ಮೂಲೆ ಮೂಲೆಗಳಿಂದ

ಅಮೇರಿಕದ ವಿದೇಶ ಶಾಖೆಯು ಜಾಗತಿಕ ಯುದ್ಧದ ಭಯ ಸಂಪೂರ್ಣವಾಗಿ ಅಳಿಯುವವರೆಗೆ ಅಮೇರಿಕ ಪಶ್ಚಿಮ ಯುರೋಪಿಗೆ ಈಗಿನಂತೆ ಸೈನಿಕ ಸಹಾಯವನ್ನು ಸಲ್ಲಿಸುತ್ತಿರಬೇಕೆಂದು ಸಾರಿದೆ. ಈ ಬಗ್ಗೆ ೧೯೫೦ ರ ಆರ್ಥಿಕ ವರ್ಷದಲ್ಲಿ ಒಪ್ಪಂದದ ರಾಜ್ಯಗಳಿಗೆ ನೆರವಾಗಲು ೧೧೩ ಕೋಟಿ ಡಾಲರುಗಳನ್ನೂ ಗ್ರೀಸ್ ಮತ್ತು ಟರ್ಕಿಗಳಿಗೆ ಸಹಾಯ ಮಾಡಲು ೩೨ ಕೋಟಿ ಡಾಲರುಗಳನ್ನೂ ವೆಚ್ಚ ಮಾಡಲಾದೀತೆಂದು ಲೆಕ್ಕ ಹಾಕಿದೆ.

ಬ್ರಿಟಿಶ್ ಉಪನಿವೇಶಮಂತ್ರಿ ಶ್ರೀ ಆರ್ಥರ್ ಕ್ರೀಚ್ ಜೋನ್ಸರು ಕಳೆದ ವರ್ಷ ಮಲಯಕ್ಕೆ ಯುದ್ಧ ಪರಿಹಾರವೆಂದು ಒಂದು ಕೋಟಿ ಪೌಂಡುಗಳನ್ನು ಕೊಟ್ಟಿದ್ದಾರೆ. ಈ ವರ್ಷ ೨ ಕೋಟಿಯನ್ನು ಕೊಡುವುದಾಗಿ ಹೇಳಿದರು. ಹೀಗೆ ಮಾಡಲು ೧೯೪೮ ರ ನಂತರ ಮಲಯ ಮೊದಲಿಗಿಂತ ಹೆಚ್ಚು ಹೊಣೆ ಹೊರಬೇಕಾಗಿ ಬಂದುದೇ ಕಾರಣವೆಂದು ಅವರು ನುಡಿದರು. ಇದರ ಮೇಲೆ ೨೦ ವರ್ಷಗಳಲ್ಲಿ ಹಿಂತಿರುಗಿ ಕೊಡುವಂತೆ ಬಡ್ಡಿಯಿಲ್ಲದೆ ೧,೮೫,೦೦,೦೦೦ ಪೌಂಡುಗಳನ್ನು ಸಾಲವಾಗಿ ಕೊಡುವ ಯೋಜನೆ ಕೂಡ ಸಿದ್ಧವಾಗಿದೆ.

ನಗರ ಸಭೆಯ ಬಸ್ಸುಗಳ ಚಲನ ನಿಂತಾಗ ಆಫ್ರಿಕನ್ನರು ದರ್ಬಾನಿನ ಹೊರವಲಯದಲ್ಲಿ ಹಿಂದೀ ಬಸ್ಸುಗಳತ್ತ ಕಲ್ಲೆಸೆದರು. ಕೂಡಲೆ ಪೋಲೀಸರು ಅಲ್ಲಿಗೆ ಹೋಗಿ ಪರಿಸ್ಥಿತಿಯನ್ನು ಹಿಡಿತದಲ್ಲಿ ತಂದರು.

ಅಧ್ಯಕ್ಷ ಟ್ರೂಮನ್ನರ ನಿಮಂತ್ರಣವನ್ನು ಮಾನ್ಯ ಮಾಡಿ ಪಂಡಿತ ಜವಾಹರಲಾಲರು ಅಮೇರಿಕಕ್ಕೆ ಭೇಟಿ ಕೊಡಲಿರುವ ಸುದ್ದಿ ವಾಶಿಂಗ್‌ಟನ್ನಿನ ಶ್ವೇತಭವನದಲ್ಲಿ ಸ್ಥಿರಪಟ್ಟ ಮೇಲೆ ಅಲ್ಲಿ ಭಾರತದ ರಾಯಭಾರಿಯಾಗಿ ಹೋಗಿರುವ ಶ್ರೀಮತಿ ವಿಜಯಲಕ್ಷ್ಮಿ ಪಂಡಿತರು ಅದರಿಂದ ಭಾರತದ ಬಗ್ಗೆ ನಿಕಟ ಪರಿಚಯ ಉಂಟಾಗಲಿದೆ ಎಂದು ಹೇಳಿದರು.

ಚೀನೀ ರಾಷ್ಟ್ರೀಯ ಪಕ್ಷವು ಕ್ಯಾಂಟನ್ನಿಗೆ ಬಂದು ನೇತೃತ್ವವನ್ನು ವಹಿಸಿಕೊಳ್ಳಬೇಕೆಂದು ಚಿಯಾಂಗ್ ಕೈಶೇಕರನ್ನು ಕೇಳಿಕೊಳ್ಳಲಿರುವುದಾಗಿ ಸುದ್ದಿ.

ಶಾಂಘಾಯಿಯಲ್ಲಿ ಘನಘೋರ ಸಂಗ್ರಾಮ ನಡೆದಿದೆ. ಕಮ್ಯುನಿಸ್ಟ ದಲಗಳು ಲ್ಯಾಹೋವನ್ನು ವಶಪಡಿಸಿಕೊಂಡು ವೂಸುಂಗಿನತ್ತ ಧಾವಿಸುತ್ತಲಿವೆ. ಶಾಂಘಾಯಿಯಲ್ಲಿಯ ನೌಕೆಗಳಿಗೆ ದಿಗ್ಬಂಧ ಹಾಕುವುದೇ ಈ ಓಟದ ಗುರಿ. ಲೋಟೇನಿನಲ್ಲಿ ರಾಷ್ಟ್ರೀಯ ಸೈನಿಕರು ತಾವು ಗೆದ್ದುದಾಗಿ ವರದಿ ಮಾಡಿದ್ದಾರೆ.

ಹಾಂಕಾಂಗನ್ನು ರಕ್ಷಿಸಲು ಸೈನ್ಯ ಕಳಿಸಲು ಬ್ರಿಟನ್ನು ಕೇಳಿಕೊಂಡಿಲ್ಲವಾಗಿ ತಾವು ಹಾಗೆ ಸೈನಿಕರನ್ನು ಕಳಿಸಲು ಸಿದ್ಧರಾಗಿಲ್ಲ... ಆಸ್ಟ್ರೇಲಿಯದ ಮುಖ್ಯಮಂತ್ರಿ ಶ್ರೀ ... ಚಿಪ್ಲಿ ಹೇಳಿದರು.

ಇಂಡೋನೇಶ್ಯ... ಇನ್ ಸೀ ನನ್ನು ... ಕೊಳ್ಳಲು ಬ್ರಿಟಿಷ ಸರಕಾರದ ... ಬಹಳ ಪ್ರಯತ್ನ ನಡೆಸುತ್ತಿದ್ದಾರೆ. ... ಸೈನಿಕರ ದಾಳಿಯಿಂದ ನಗರದಲ್ಲಿ ಅಲ್ಲಲ್ಲಿ ... ಯದ್ದಿದೆಯೆಂದೂ ಬಹಳ ಸಾವು ... ಉಂಟಾಗಿದೆಯೆಂದೂ ತಿಳಿಯುತ್ತದೆ. ... ಗಾಡಿನ ನಿವಾಸಿಗಳಾದ ಕಾರೆನ್ನರು ... ಬೆಂಬಲಕ್ಕೆ ಬಂದರೆಂದೂ ಲೋಯ್ಕ್ಯಾ ... ಪಟ್ಟಣವನ್ನು ಅವರು ಹಿಡಿದರೆಂದೂ ... ಗಿದೆ. ಗುಡ್ಡಗಾಡಿನ ಕಾರೆನ್ ಬಂ... ಸಂಸ್ಥಾನಗಳು ೪೦೦೦ ಚದುರಮೈಲಿ... ಗುವುದೆಂದೂ ಅವರ ಸಂಖ್ಯೆ ೮೦೦೦ ... ಯೆಂದೂ ತಿಳಿಯುತ್ತದೆ.

ಜಪಾನಿನಿಂದ ಯುದ್ಧ ಪರಿಹಾರವಾಗಿ ಔದ್ಯಮಿಕ ಉಪಕರಣಗಳನ್ನು ... ಕೊಂಡು ಹೋಗುವುದನ್ನು ನಿಲ್ಲಿಸಲು ... ರಿಕವೀಗ ಅಪ್ಪಣೆಕೊಟ್ಟಿದೆ. ಆಗಲೇ ... ಪರಿಹಾರೋಪಕರಣಗಳನ್ನು ಚೀನ, ಫಿಲಿಪೈನ್ಸ್, ಡಚ್ ಈಸ್ಟ ಇಂಡೀಸ್, ... ದೇಶ, ಮಲಯ ಮುಂತಾದೆಡೆ ಕಳಿ... ಲಾಗಿದೆ. ಇನ್ನೂ ಯಂತ್ರೋಪಕರಣ... ಸಾಗಿಸಿದರೆ ಜಪಾನಿನ ಉದ್ಯಮಗಳು ... ಗತವಾದಾವೆಂದು ಹೀಗೆ ಸಾಗಿಸುವ... ನಿಲ್ಲಿಸಲಾಗಿದೆಯೆಂದು ಅಮೇರಿಕದ ... ಮೇಜರ್ ಜನರಲ್ ಮೆಕ್‌ಕಾಯ್ ... ದನು.

ಅಮೇರಿಕ ನಿಯಮಿಸಿದ ಜರ್ಮನಿ... ಮಿಲಿಟರಿ ಗವರ್ನರನಾದ ಜನರಲ್ ... ಯಸ್‌ಕ್ಲೇ ನಿವೃತ್ತನಾಗಿ ಹೋಗುವ ... ಬೀಳ್ಕೊಡಲು ಕೂಡಿದ ಬರ್ಲಿನ್ನಿನ ... ಪರಿಷತ್ತಿನಲ್ಲಿ ರಶಿಯನ್ನರು ಏಕೀಕೃತ ... ನಿಯಲ್ಲಿ ವಿಶ್ವಾಸವುಳ್ಳವರೆಂದೂ ... ನ್ನು ಇಬ್ಬಣದವರೂ ತೆಗೆದುಹಾಕಿದ್ದಾ... ಚಲಾವಣೆ ಎರಡಾಗಿರುವ ಪ್ರಯುಕ್ತ ... ತೊಂದರೆಯನ್ನು ಬಗೆಹರಿಸಲಾದೀ... ಹೇಳಿದನು.

ಕಳೆದ ೧೩ ರಲ್ಲಿ ಬರ್ಲಿನ್ ದಿಗ್ಬಂಧ... ಸಂಬಂಧವಾಗಿ ಚತುರಾಷ್ಟ್ರ ಸಮ... ಬರ್ಲಿನ್ನಿನಲ್ಲಿ ನಡೆಯಿತು. ಅದರಲ್ಲಿ ... ಮಾತುಕತೆಯ ವಿವರಗಳಿನ್ನೂ ಗೊತ್ತ... ಸಮ್ಮೇಳನ ಮತ್ತೂ ಸಾಗಲಿದೆ.

ಲಿಬಿಯದ ಬಗ್ಗೆ ಸಂ. ರಾ. ... ಸ್ವೀಕರಿಸಿದ ಬ್ರಿಟಿಶ್ ಯೋಜನೆಯನ್ನು ... ಭಟಿಸಲು ಕ್ರುದ್ಧರಾದ ಅರಬರು ತ್ರಿ... ಯಲ್ಲಿ ಮತ ಪ್ರದರ್ಶನ ಮಾಡಿದರು. ತ್ರಿ... ಪೋನಿಯವನ್ನು ಇಟಾಲಿಯನ್ನರ ವಿಶ್... ಒಪ್ಪಿಸುವುದು ಅವರಿಗೆ ಸರಿ ಬಂದಿಲ್ಲ.

ಚಂದ್ರನಗರದ ನಗರ ಸಭೆಯ ... ಶ್ರೀ ದೋಜೆನ್‌ದಾಸರು ಸಭೆಯನ್ನು ... ಮಾತಾಡುವಾಗ ಸ್ವತಂತ್ರವಾದ ತಮ... ರದ ಆಡಳಿತೆಯಲ್ಲಿ ಫ್ರೆಂಚರು ಸಂ... ವಿಧಿಬಾಹಿರ ಕುತಂತ್ರವನ್ನು ನಡೆಸಿದ್ದಾ... ಆರೋಪಿಸಿದರು. ಅಲ್ಲಿಯ ಅಡ... ರಾಗಿದ್ದ ಎಂ. ಬೇಜಿನ್ನರು ರೂಢಿಗೆ ... ಪದ್ಧತಿಯನ್ನು ಬದಿಗಿಟ್ಟು ಸರ್ವಾಧಿ... ದಿಂದ ಅವರ ನಂತರ ಬಂದ ಸದ್ಯದ ... ಗಾರರು ನಡೆದುಕೊಳ್ಳುತ್ತಿದ್ದಾರೆಂದು ... ಯುತ್ತದೆ.

ಇಂಗ್ಲೆಂಡಿನ ನಿರ್ವಾಸಿತರಿಗೆ ೧೯... ಮಾಡಿದ ಲೆಕ್ಕದ ಪ್ರಕಾರ ೭॥ ಲಕ್ಷ ಮ... ಬೇಕಾಗಿದ್ದವು. ೧೯೪೮ ರ ಕೊನೆಯಲ್ಲಿ ... ೫,೮೨,೮೫೧ ಮನೆಗಳನ್ನು ಕಟ್ಟ... ಲಾಯಿತು. ೩೨॥ ಲಕ್ಷ ಜನರಿಗೆ ಆ... ವಸತಿಗಳನ್ನು ಕಟ್ಟಿಸಿ ಕೊಡಲಾ... ಇನ್ನೂ ಹೊಸ ಮನೆ ಕಟ್ಟುವ, ... ಮರಮತ್ತು ಮಾಡುವ ಕಾರ್ಯ ಅವಿ... ಸಾಗಿದೆ.

ಇಸ್ರೇಲನ್ನು ಸಂ. ರಾ. ಸಂಘಕ್ಕೆ ... ರಾಷ್ಟ್ರವನ್ನಾಗಿ ತೆಗೆದುಕೊಳ್ಳಬೇ... ಫ್ಲಶಿಂಗ್ ಮೆಡೋಸಿನಲ್ಲಿ ಸೇರಿದ ಸ... ಸಭೆ ಬಹುಮತದಿಂದ ನಿರ್ಣಯಿಸಿತು.


ಐರಿಶ್ ಪ್ರಜಾರಾಜ್ಯವು ಕಾಮನ್... ನಿಂದ ಸಿಡಿದು ಹೋದುದನ್ನು ... ಬೇಕೆಂಬ ಇಸ್ರೇಲಿನ ಗೊತ್ತುವಳಿ... ಇಂಗ್ಲೆಂಡಿನ ಪಾರ್ಲಿಮೆಂಟು ಒಪ್ಪಿ... ಮನ್ನಣೆ ಯಿತ್ತಿತು.

ನೂಪುರರಂಗ

ಪುರುಷರ ಸ್ತ್ರೀವೇಷ

[illegible] ಬೆಲ್ಬ ಟೆನು [illegible] ಅಮೇರಿ [illegible] ಸೊಬಗು [illegible] ತಪ್ಪಿಸಿಕೊಂಡು ಇಂಗ್ಲಂಡಿಗೆ [illegible]ದನು. ಅಲ್ಲಿ ಅವನು ಹೆಣ್ಣುರೂಪತಾಳಿ [illegible]ಗಳ ಹವಳ ಸಂಗೀತ ಮತ್ತು ನರ್ತನ [illegible] ಎನಿಸಿ ಆಗಿಗೆಕೊಂಡಿದ್ದು ಈಗ ಸಿಕ್ಕಿ[illegible].

[illegible] ಬೆಲ್ಬಟೆನ ಮೇಲೆ ಸಂಶಯಬಂದಾಗ [illegible] ಅವನನ್ನ ಭೋಜನಶಾಲೆಯಲ್ಲಿ ಹಿಡಿ[illegible] ಹೋದ ಪೋಲೀಸ್ ಅಧಿಕಾರಿಗಳಿಗೆ [illegible] ಎಷ್ಟುಸಲ ನೋಡಿದರೂ ಅವನು [illegible]ವುದನ್ನು ನಂಬಲಾಗಲಿಲ್ಲ. ಕಡೆಗೆ [illegible] ಅವನನ್ನೇ ಕೇಳಿದಾಗ ಅವನು [illegible] ಒಪ್ಪಿಕೊಂಡನು. ಆದರೆ ಅವನು [illegible] ತಪ್ಪನ್ನು ಮಾಡದುದರಿಂದ ಅವನಿಗೆ [illegible] ಶಿಕ್ಷೆಯನ್ನೂ ಕೊಡಲಾಗಲಿಲ್ಲ. ಕಡೆಗೆ [illegible] ಅಮೇರಿಕಕ್ಕೆ ಸೈನಿಕ ಅಂಗ[illegible] ತೆರಳಿದನು.



[illegible] ಅಯಾರೇ" ಎಂಬ ಚಿತ್ರದಲ್ಲಿ [illegible] ರಮೋಲರು 'ಸಾಯಂಕಾಲೇ [illegible].... ಸೈಕತೇ ಚಂದ್ರಿಕಾಯಾಂ' [illegible] ಸನ್ನಿವೇಶದಲ್ಲಿದ್ದಾರೆ.

[illegible] ಮಿಡಲ್ಸ್‌ಬ್ರೋ ರಂಗದಲ್ಲಿ [illegible] ಎರಡನೆಯ ನರ್ತಕಿಯಾಗಿದ್ದಳು. [illegible] ಫ್ರಾನ್ಸ್ಸ್ಪೀಡನು ಜೊತೆಯ ನರ್ತಕ[illegible]. ಅವನು ಗಂಡಸೆಂಬುದನ್ನು ತಿಳಿಸಿ[illegible] ಮನೆಯ ಒಡತಿ ಎಷ್ಟಕ್ಕೂ ನಂಬ[illegible] ಆಗಲೂ ಅವಳು ಅವನನ್ನು "ಅವಳು" [illegible] ಕರೆಯುತ್ತಿದ್ದಳು. ರಂಗಾಧಿಕಾರಿ [illegible] ವಾರಕ್ಕೆ ಅವನಿಗೆ (ನರ್ತಕಿಗೆ) ೨೦ [illegible] ಪೌಂಡುಗಳ ವರೆಗೆ ಸಂಬಳ ಕೊಡು[illegible]. ಆತನ ಪ್ರಕಾರ ಅವನ ನರ್ತನಾಧಿ[illegible]. ಬಹಳ ಜನಪ್ರಿಯವಾಗಿದ್ದವಂತೆ. [illegible] ಅವನು ಹೆಣ್ಣು ಎಂದರೆ ನಂಬ[illegible]. ಅವನಿಗೆ ಅಭಿನಯಾದಿಗಳಲ್ಲಿ ನೆರ[illegible] ರೆಡಿವಿಕ್ ಎಂಬ ೨೮ ವರ್ಷ ವಯ[illegible] ಒಬ್ಬಳು ಯುವತಿಯಿದ್ದಳು. ಅವಳು [illegible] ಸ್ಥಿತಿಯನ್ನು ಕೇಳಿದಾಗ "ನಾನೆಂದೂ [illegible] ನಂಬಲಾರೆ. ದೋಸ್ತಾಕೊಡನೆ ನಾನು [illegible] ಕೆಲಸ ಮಾಡಿದ್ದೇನೆ. ಅವಳು [illegible] ತನ್ನಷ್ಟಕ್ಕೆ ತಾನಿರುತ್ತಿದ್ದಳು. [illegible] ಅವಳು ಬುಗುಡಿಗುಪ್ಪಸ ತೊಡು[illegible]. [illegible] ಹಾಕಿಕೊಳ್ಳು[illegible]. ಅಂಥವಳನ್ನು ಗಂಡೆಂದರೆ ಯಾರು [illegible]?" ಎಂದಳು.

ಹಿಂದಿನ ಕೌಶಲ

[illegible] ಹಿಂದೆ ಪುರುಷರೇ ಸ್ತ್ರೀವೇಷ [illegible] ಧರಿಸುತ್ತಿದ್ದರು. ಏಕೆಂದರೆ, ನಾಟಕ, [illegible] ಮುಂತಾದವುಗಳಲ್ಲಿ ನಾನಾ ನೈತಿಕ [illegible] ಪುರುಷರಿರುವುದರಿಂದ ಶೀಲಪತಿ[illegible] ವಹಿಸಲು ಹೋದರೆ ತನ್ನ ಅಥವಾ [illegible] ಮನೋದೌರ್ಬಲ್ಯಕ್ಕೊಳಗಾಗಿ ಭ್ರಷ್ಟ [illegible]ರೆಂದು ಸಾಮಾಜಿಕರು ಮೇಳ[illegible] ಸ್ತ್ರೀ ಸೇರುವುದನ್ನು ಬಹಿಷ್ಕರಿಸಿದ್ದರು[illegible] ವೇಷ ಸೇರುವುದಾದರೆ [illegible] [illegible]. ಹಾಗೆ ಮೇಳಕ್ಕೆ ಇರುವ [illegible] ಪುರುಷರು ಸೇರುತ್ತಿದ್ದಿಲ್ಲ. [illegible] ಆಸೆಕೊಡುವ ನಾಯಕನ ಪಾತ್ರ[illegible] ರಂಗಕ್ಕೆ ಬರುತ್ತಿದ್ದಿಲ್ಲ. ಇದು [illegible] ಸೇರಿಯ [illegible] [illegible] ರಂಗಕ್ಕೆ ತಂದು [illegible] ರಸಿಕರಿಗಾಗಿದೆ. ಸ್ತ್ರೀ [illegible] ರಂಗಕ್ಕೆ ಬರುವುದನ್ನು ನಾಟ್ಯಾಚಾರ್ಯ[illegible]. ಆದರೆ ಸಂಸ್ಕೃತಿಯ [illegible] ಪುರುಷರಿಗಿಂತ ಸ್ತ್ರೀಯು ಶೀಲ [illegible]ಶಾಸ್ತ್ರಶರೀರಶಾಸ್ತ್ರ [illegible] [illegible] ಅವಳ ಬುದ್ಧಿಗೆ

ಮನಶ್ಶಕ್ತಿಯು-ಅಲ್ಲದೆ, ಸ್ತ್ರೀಯು ತನ್ನ ಸಾರ್ವ ಜನಿಕ ಜೀವನದಲ್ಲಿ ಪುರುಷರಂತೆ ತನ್ನ ವಿದ್ಯೆ, ಶೀಲ, ಗುಣ, ಪ್ರತಿಭೆ ಮುಂತಾದವುಗಳಿಗಿಂತ ಹೆಚ್ಚಾಗಿ ಅಂಗಪ್ರದರ್ಶನವನ್ನೇ ಬಂಡವಾಳವನ್ನಾಗಿ ಮಾಡಿಕೊಳ್ಳುವ ಪ್ರವೃತ್ತಿಯುಳ್ಳವಳಾಗಿರುವುದು (ಇಡೀ ಜಗತ್ತಿನಲ್ಲಿ ಇಂದಿಗೂ) ವ್ಯವಹಾರದಲ್ಲಿ ಕಂಡು ಬರುವುದರಿಂದ ಅಂಥವಳ ಶೀಲಶುದ್ಧಿಯ ಬಗ್ಗೆ ಸ್ವಾಭಾವಿಕವಾಗಿ ಕುಲೀನರು ಸಂಶಯಪಡುವುದು ಅಂದಿನಿಂದ ಇಂದಿಗೂ ಬಂದ ರೂಢಿಯಾಗಿದೆ. ಶುದ್ಧ ಕಲಾರಾಧನೆಯ ಹೆಸರಿನಲ್ಲಿ ಅನೇಕ ಕಲೋಪಾಸಕರೆಂದುಕೊಳ್ಳುವವರೂ ಸ್ತ್ರೀವಾದಿಗಳೂ ಈ ದೃಷ್ಟಿಯನ್ನು ಗೇಲಿ ಮಾಡಿ ಖಂಡಿಸುವುದು ಇಂದು ಕಂಡು ಬರುತ್ತದೆ; ಆದರೆ ಅಂಥವರಿಗೆ ಮನಃಶಾಸ್ತ್ರ, ಶರೀರಶಾಸ್ತ್ರ ವ್ಯವಹಾರ ಮತ್ತು ರಸದೃಷ್ಟಿ ಇವುಗಳ ಜ್ಞಾನ ಸಂಪೂರ್ಣವಾಗಿ ಇಲ್ಲವೆಂದೇ ಹೇಳಬೇಕು. ನಿಜವಾದ ಕಲ್ಪನಾಶಕ್ತಿಯುಳ್ಳ ರಸದೃಷ್ಟಿಯುಳ್ಳ ರಸಿಕರು ರಂಗದ ಮೇಲೆ ಬರುವ ಪಾತ್ರದ ಅಭಿನಯ ಪುರುಷಸಹಜ ಅಥವಾ ಸ್ತ್ರೀಸಹಜ, ರಾಜಸಹಜ, ರಾಜ್ಞೀಸಹಜ, ಋಷಿಸಹಜ, ಋಷಿಪತ್ನೀಸಹಜ, ಇರುವುದೋ ಇಲ್ಲವೋ ಎಂಬುದನ್ನು ನೋಡುವರಲ್ಲದೆ ಆಯಾ ಪಾತ್ರಧಾರಿಗಳು ನಿಜವಾಗಿ ಗಂಡಸರೋ ಅಥವಾ ನಿಜವಾಗಿ ಹೆಂಗಸರೋ ಎಂದು ತಿಳಿದು ಅದರ ಮೇಲಿಂದ ಅಭಿನಯ ಚೆನ್ನಾಗಿದೆ ಅಥವಾ ಇಲ್ಲ ಎಂದು ನಿರ್ಣಯಿಸುವ ಬುದ್ಧಿಯುಳ್ಳವರಲ್ಲ.

ಸ್ತ್ರೀ ಭ್ರಮೆ

ಮನಃಶಾಸ್ತ್ರಬಲ್ಲವರಿಗೆ; ರೂಢಿಯಲ್ಲಿಯ ಆದರ್ಶ- ರಸದೃಷ್ಟಿಯ ಸ್ತ್ರೀಕಲ್ಪನೆಯನುಗುಣವಾಗಿ ನಡೆದುಕೊಳ್ಳುವ ಸ್ತ್ರೀಯರು ದುರ್ಲಭ ಎಂಬುದು ಗೊತ್ತಿದ್ದ ಮಾತು. ಎಷ್ಟೋ ಹುಡುಗಿಯರ ನಡೆನುಡಿ ನೋಡಿರಿ: ಅವರ ಆಚಾರ, ವಿಚಾರಗಳಲ್ಲಿ ಹುಡುಗರೂ ಅಲ್ಲ ಹುಡುಗಿಯರೂ ಅಲ್ಲ ಎಂಬಂತಿರುತ್ತಾರೆ; ಇದಕ್ಕೆ ವ್ಯತಿರಿಕ್ತವೂ ನಿಜವಿದೆ ಮತ್ತು ಕಡೆಯದಾಗಿ ಸ್ತ್ರೀ ಪುರುಷರ ನಡೆನುಡಿಗಳಾದರೂ ಅವರವರ ರೂಢಿ ಸಂಸ್ಕಾರಗಳನ್ನವಲಂಬಿಸಿದ್ದಲ್ಲದೆ, ಸ್ವಭಾವಿಕವಾಗಿ ಬಹಳ ಭಿನ್ನವಿರುವುದಿಲ್ಲ ಎಂಬುದನ್ನು ಉಭಯ ಸ್ವಭಾವ ಪರಿಚಯ ಅತಿ ನಿಕಟವಾಗಿ ಉಳ್ಳ ಅಲ್ಪಸಂಖ್ಯರಿಗೆ ಗೊತ್ತಿದ್ದ ಸಂಗತಿ. ಇಂದು "ಸ್ತ್ರೀತಿನಾಮಾಪಿ ಮಧುರಂ" ಎಂಬುದೇ ಕಲೆಯ ಮಾನದಂಡವಾಗುತ್ತ ಬಂದು ಸಾಮಾಜಿಕ ಜೀವನದಲ್ಲಿ ಸ್ತ್ರೀ ಪುರುಷರಲ್ಲಿ ಪರಸ್ಪರ ವಿವಿಧವಾದ ಅನಾರೋಗ್ಯಕರ ಭ್ರಮೆ (Complex) ಉಂಟಾಗುವ ಪರಿಸ್ಥಿತಿಯೊದಗಿದೆ. ಈ ಭ್ರಮೆಯ ವಿವಿಧ ರೂಪಗಳು ಪ್ರತಿಯೊಂದು ವ್ಯಕ್ತಿಗೂ ತನ್ನನ್ನು ತಾನು ಕಾಣಹೋದರೆ ತತ್ಕ್ಷಣ ತಿಳಿದು ಬರುತ್ತವೆ. ನಟನಾಚಾತುರ್ಯಕ್ಕೆ ಪುರುಷನು ಸ್ತ್ರೀಯಂತೆಯೂ ಸ್ತ್ರೀ ಪುರುಷನಂತೆಯೂ ನಟಿಸುವುದೇ ನಿಕಷ. ಅಂಥವರಿಗೆ ಪರಸ್ಪರರ ನಡೆನುಡಿಗಳ ಅರ್ಥಜ್ಞಾನ ಸಂಪೂರ್ಣವಾಗಿದೆ, ಅವರು ರಸಿಕನಟರು, ಯಾಂತ್ರಿಕ ನಟರಲ್ಲ, ಎಂದು ಹೇಳಬಹುದು. ಅವರು ರಸಾಸ್ವಾದನಶಕ್ತಿಯುಳ್ಳವರು, [illegible] ಭಾವಗತಿಯ ಸೂಕ್ಷ್ಮ ಪರಿಚಯ ಉಳ್ಳವರು. ಹೀಗಿರುವಾಗ ಸ್ತ್ರೀ ಎಂದು ಭ್ರಮೆ ಹುಟ್ಟಿಸುವಷ್ಟು ರೂಪಸ್ವರಾದಿಗಳುಳ್ಳ ನಾಟ್ಯಕೋವಿದರಾದ ಪುರುಷರು ಸ್ತ್ರೀಪಾತ್ರ ವಹಿಸಿದರೆ ಪ್ರಸಿದ್ಧ ತೆಲಗುನಟ ಸ್ಥಾನಂ ನರಸಿಂಹಾಚಾರ್ಯರ ಸತ್ಯಭಾಮೆಯ ಪಾತ್ರದ ಅಭಿನಯದಂತೆ ಅವರ ಅಭಿನಯವೂ ಕತೆಗೆ ಬೇಕಾದಂತೆ (Real ನೈಜ ಅಲ್ಲ) Realistic ಸತ್ಯಾಭಾಸವೆನಿಸಿ ರಸಿಕ ಹೃದಯವನ್ನು ತಣಿಸಬಲ್ಲುದು. ನಟಿಯರು ತಮ್ಮ ಬೆಲೆಯನ್ನು ಬಹಳ ಏರಿಸಿದರೆ ಇಂದಿನ ಬುದ್ಧಿವಂತರಾದ ಸಿನೆಮ ನಿರ್ಮಾಪಕರು ಯುವಕರನ್ನು ಸ್ತ್ರೀಪಾತ್ರಕ್ಕೆ ಯುಕ್ತರೀತಿಯಿಂದ ಬಳಸಿಕೊಂಡರೆ ಅದರಿಂದ ಅರ್ಥಲಾಭವಲ್ಲದೆ ಶೀಲಲಾಭವೂ ಸಾಮಾಜಿಕರ ನಿಜವಾದ ರಸಾಸ್ವಾದದ ಅಗ್ನಿಪರೀಕ್ಷೆಯೂ ಆದಂತಾಗುತ್ತದೆ.

—ರಸಗಂಗಾಧರ

ಫ್ರಾನ್ಸಿನ ಸ್ತ್ರೀಯರು

ಫ್ಯಾರಿಸ್ಸಿನ ಸಾಂಸ್ಕೃತಿಕ ಕನ್ಯೆಯರೀಗ ಜೀವಾಭರಣವಾಗಿ ದುಡಿಯಲು ಹೊರಬಂದ ಸಂಗತಿ ಇತ್ತೀಚಿಗೆ ಹೊಸದು. ಹಳೆಯಕಾಲದ ಹಾಲಿವುಡ್ಡಾದ ಫ್ಯಾರಿಸ್ಸಿಂದು ಯುದ್ಧೋತ್ತರ ಪರಿಸ್ಥಿತಿಯಿಂದ 'ಕುರುಕ್ಷೇತ್ರ' ಸದೃಶವಾಗಿದೆ. ಧಾರಣೆವಾಸಿಗಳು ಹೆಚ್ಚಿರುವುದರಿಂದ ಮಧ್ಯವರ್ಗದ ಬಿಳಿಯಂಗಿಯ ಕೆಲಸಗಾರರಿಗೀಗ ಬರುವ ಸಂಬಳ ಅವರ ಕುಟುಂಬಭರಣಕ್ಕೆ ಸಾಲದಾಗಿದೆ. Beauty Saloons ಸೌಂದರ್ಯ ಮಂದಿರಗಳಿಗೆ ಆ ಕಲಾವತಿಯರೀಗ ಹೋಗಲಾರದಾಗಿದ್ದಾರೆ; 'ಚಿಟ್ಟೆಯ ಮರಿಗಳಂತೆ (ಪಾತರಗಿತ್ತಿಯರಂತೆ) ಗರಿಗೆದರಿ ಹಾರಾಡಲು ತಕ್ಕ ಉಡುಪನ್ನು ಅವರಿಗೀಗ ಅವರ ಪ್ರಿಯತಮರು ತಂದುಕೊಡಲು ಶಕ್ತರಾಗುತ್ತಿಲ್ಲ!

ಉದರಭರಣಕ್ಕಾಗಿ ಹೊರಗೆಲಸ ಮಾಡುವುದು ಅಪ್ಪ, ಗಂಡ, ಮಗ ಮುಂತಾದ ಅವಕಾರದಲ್ಲಿರುವ ಗಂಡಸಿನ ಕೆಲಸವೆಂದು ಫ್ರಾನ್ಸಿನ ವಿಲಾಸಿನಿಯರೂ ಸುವಾಸಿನಿಯರೂ ಸುಮ್ಮನೆ ಕುಳಿತುಕೊಳ್ಳಲಾರದ ಪರಿಸ್ಥಿತಿ ಬಂದುದರಿಂದ ಅವರೀಗ ಅಲ್ಲಿ ಇಲ್ಲಿ ನೌಕರಿ ಮಾಡಲು ಮನೆಯಿಂದ ಹೊರಬೀಳುತ್ತಿದ್ದಾರೆ. ಸೌಂದರ್ಯದ ಬಂಡ ಸಾಕಾಗದ ಈ ಕಾಲದಲ್ಲಿ ಶ್ರಮವನ್ನೇ ಅವರೀಗ ಬಳಸಬೇಕಾಗಿ ಬಂದಿದೆ. ಆ ಶ್ರಮದಿಂದ ದುಡಿದ ಹಣದಿಂದ ಕೊಂಡ ಕೇವಲ ಕಪ್ಪು ಲಂಗ (Gown) ಧರಿಸುವುದರಿಂದಲೇ ಅವರು ತೃಪ್ತರಾಗಬೇಕಾಗಿವೆ. ಕುಟುಂಬದ ಖರ್ಚಿಗಾಗಿ ಅವರು ತಮ್ಮ ಗಳಿಕೆಯನ್ನು ಕೊಡಬೇಕಾಗಿ ಬಂದಿದೆ.

ನೌಕರಿಗಳಲ್ಲಿ ಆ ವರವರ್ಣಿನಿಯರಿಗೆ ಹೊಸದೆನಿಸುವುದು Air Hostess ವಿಮಾನ ಪರಿಚಾರಿಕೆಯ ಕೆಲಸ. ಅದಕ್ಕೆ ಇಂಗ್ಲೀಷ್‌ಮತ್ತು ಫ್ರೆಂಚ್ ಭಾಷೆಗಳ ಜ್ಞಾನ, ಶುಶ್ರೂಷಾಜ್ಞಾನ ಮುಂತಾದವುಗಳಲ್ಲಿ ಉತ್ತೀರ್ಣರಾಗಬೇಕು. ಆ ಪರೀಕ್ಷೆಗಳಲ್ಲಿ ಜಯಶೀಲರಾಗಿ ಹುಡುಗಿಯರು ಕೆಲಸಕ್ಕಾಗಿ ಮುಂದೆ ಬಂದಿದ್ದಾರೆ. ಸಂಬಳ ಕೈತುಂಬುತ್ತದೆ. ಇದರಿಂದ ಮಧ್ಯವರ್ಗದ ಕುಟುಂಬಗಳಿಗೆ ಒಂದು ಸ್ವಲ್ಪ ಚೇತರಿಸಿಕೊಳ್ಳಲು ಅವಕಾಶಉಂಟಾಗಿದೆ.

ಮೇಲಿನ ಉದಾಹರಣೆ Necessity is the mother of invention— ಅವಶ್ಯಕತೆಯೆ ನವನಿರ್ಮಿತಿಯ ತಾಯಿ ಎಂಬ [illegible]ಗಾದೆಯನ್ನು ಸಾರ್ಥಕಪಡಿಸುತ್ತದೆ; ಮೊದಲಿನಿಂದಲೂ ಜಗತ್ತಿನ ಮಧ್ಯವರ್ಗದ ಮತ್ತು ಅವರಿಗಿಂತ ಹೆಚ್ಚಾಗಿ ಮೇಲಿನ ವರ್ಗದ ಅನೇಕ ಸ್ತ್ರೀಯರು [illegible]ಗಳೂ ನಿರ್ಬುದ್ಧಿಕರೂ ಆಗಿ ಕಳೆದ ದಿನದ ತಾಸುಗಳು ಹೆಚ್ಚು. ಅದರಲ್ಲೂ ಸ್ವಾತಂತ್ರ್ಯವಿದ್ದರೂ ಹೊಣೆ ಹೊರದೆ ಟೊಪ್ಪಿ ಹಾಕಿ ವಿಲಾಸಜೀವನ ನಡೆಸುವುದರಲ್ಲಿ ಫ್ಯಾರಿಸ್ಸಿನ ಮಿಣುಕುಮಣಿಗಳು ಮತ್ತಷ್ಟು ಹೆಸರಾದವರು. ಅವರಿಗೆ ಇಂದು ಸ್ವತಂತ್ರ ವೃತ್ತಿ ಹಿಡಿದು ದುಡಿದು ಹಾಕುವ ಪ್ರಸಂಗ ಬಂದುದು ಹೊಸ ಅನುಭವ ಎಂದು ಹೇಳಲಾಗಿದೆ.

ಹಿಂದು ಕಾಯದೆ ಸುಧಾರಣೆಯಂತೆ ಅರ್ಧ ಆಸ್ತಿಗೆ ಹಕ್ಕುದಾರರಾಗಲಿರುವ ನವ ಯುವತಿಯರು ಮೇಲಿನ ಅಂಶವನ್ನು ಗಮನಕ್ಕೆ ತಂದುಕೊಳ್ಳುವುದು ಅವಶ್ಯಕ. ಮೊದಲಿನ ಎಲ್ಲ ಹಕ್ಕುಗಳೂ ಹಾಗೇ ಇದ್ದು ಹೊಸದಾದ ಈ ಹಕ್ಕು ಬರಿದೆ ಬಂದು ಬಿಡುತ್ತದೆ ಎಂಬ ಮುಗ್ಧ ವಿಚಾರವನ್ನು ಅವರು ಬಿಟ್ಟು ಕೊಡಬೇಕು. ಹಕ್ಕಿನ ಜೊತೆಗೆ ಅದೇ ತೂಕದ ಕರ್ತವ್ಯ ಬೆನ್ನಟ್ಟಿ ಬರುತ್ತದೆ ಎಂಬ ಅಂಶವನ್ನು ಅವರು ಮರೆತರೆ ಮುಂದೆ ಪಶ್ಚಾತ್ತಾಪಪಡುವಂತಾದೀತು. ಪುರುಷ ಸಾಮ್ಯ ಕೇವಲ ಹಕ್ಕಿನಲ್ಲಿ ಸಿಗದು; ಪುರುಷರ ಕರ್ತವ್ಯಗಳಿಗೂ ಹೆಗಲು ಕೊಡಬೇಕಾಗುವುದು. —ಸಂಭದ್ರೆ

❋ ಅಮೇರಿಕೆಯ ಕೆಂಟಕ್ಕಿಯಲ್ಲಿ ಕ್ಲೆನ್ನೀ ಹೊಲ್ಲನ್ನನೆಂಬ ಹುರಿಯಾಳು ತನ್ನ ಚುನಾವಣೆ ಘೋಷಣೆಯಲ್ಲಿ, ತನ್ನನ್ನಾರಿಸಿದರೆ ಮತದಾರರಿಗೆ ತಾನು ಮಾಡಲಿರುವ ಉಪಕಾರಗಳಲ್ಲಿ ಈ ಕೆಳಗಿನದೂ ಒಂದೆಂದು ಕಾಣಿಸಿದ್ದಾನೆ: ಹೆತ್ತವರನ್ನು ಸಾಲೆಗೆ ಕಳಿಸಲು ಮಕ್ಕಳಿಗೆ ಅಧಿಕಾರ ಕೊಡುವದು!

ಸಂ. ರಾ. ಸಂಘದ ರಾಜಕೀಯ ಸಮಿತಿಯು ಇಟಲಿಯ ಹಿಂದಿನ ಉಪನಿವೇಶಗಳ ಬಗ್ಗೆ ಬ್ರಿಟಿಶ್— ಇಟಾಲಿಯನ್ ಒಪ್ಪಂದವನ್ನೇ ಸ್ವೀಕರಿಸಿತು. ಮತದಾನದಲ್ಲಿ ಭಾರತ, ಬ್ರಹ್ಮದೇಶ, ಪಾಕಿಸ್ತಾನ, ರಶಿಯ ಮುಂತಾದ ೧೩ ರಾಷ್ಟ್ರಗಳು ವಿರುದ್ಧವಾಗಿಯೂ ಮಿಕ್ಕ ೩೪ ರಾಷ್ಟ್ರಗಳು ಅನುಕೂಲವಾಗಿಯೂ ಮತ ಕೊಟ್ಟವು.


ವಿಶೇಷ ಲೇಖ

ಗ್ವಾಲಿಯರ ನಗ

ಮುಂಬಯಿ ನಗರದಿಂದ ಸುಮಾರು ೫೦೦ ಮೈಲಿ ಜಿ. ಐ. ಪಿ. ರೇಲ್ವೆಯಲ್ಲಿ ಹೋದರೆ ಇತಿಹಾಸದಲ್ಲಿ ಖ್ಯಾತಿಹೊಂದಿ, ಬ್ರಿಟಿಷರು ಭಾರತದಲ್ಲಿ ನೆಲೆಸಲು ಸಹಾಯಕನಾಗಿದ್ದ ನವಾಬನೊಬ್ಬನ ರಾಜಧಾನಿಯಾದ ಭೋಪಾಲ ನಗರವು ಸಿಗುತ್ತದೆ. ಈಗಲೂ ಈ ನಗರದಲ್ಲಿ ನವಾಬರ ವಂಶದವರೇ ಭೋಪಾಲ್ ಸಂಸ್ಥಾನವನ್ನು ಆಳುತ್ತಿದ್ದಾರೆ. ಈ ಭೋಪಾಲ ನಗರದಲ್ಲಿ ಬೇಸರ ಹೊಂದದವನೇ ಇಲ್ಲವೆನ್ನಬಹುದು. ಅಷ್ಟು ಅಸಹ್ಯ ಮತ್ತು ಹೊಲಸುಗಳಿಂದ ತುಂಬಿದೆ ಭೋಪಾಲನಗರ.

ಭೋಪಾಲಿನಿಂದ ಹೊರಟು ಸುಮಾರು ೧೭ ಗಂಟೆಗಳ ಕಾಲ ಪ್ರಯಾಣ ಮಾಡಿದರೆ ಅಂದರೆ ಸುಮಾರು ೨೫೦ ಮೈಲು ದೂರಕ್ಕೆ ಗ್ವಾಲಿಯರ ಸಿಗುತ್ತದೆ. ದೆಹಲಿಯಿಂದ ಮದರಾಸಿಗೆ ಹೋಗುವ ಬಂಡಿಗಳು ಗ್ವಾಲಿಯರ್ ಮಾರ್ಗವಾಗಿಯೇ ಹೋಗುತ್ತವೆ.

ಗ್ವಾಲಿಯರ್ ಶಹರು ಗ್ವಾಲಿಯರ್ ಸಂಸ್ಥಾನದ ಮುಖ್ಯನಗರ. ಈ ಸಂಸ್ಥಾನದ ವಿಸ್ತಾರ ಸುಮಾರು ೨೬೫೦೦ ಚದರ ಮೈಲಿಗಳಷ್ಟಿದ್ದು ಉತ್ಪನ್ನ ೪ ಕೋಟಿ ಇದೆಯೆಂದು ತಿಳಿದು



ಗ್ವಾಲಿಯರ ಕೋಟೆಯಿಂದ ಹಳೆಪಟ್ಟಣದ ದ

ಬರುತ್ತದೆ. ಈಚಿಗೆ ಮಧ್ಯ ಭಾರತ ಜಕ್ಕೂಟದಲ್ಲಿ ಸಮಾವೇಶವಾದ ಈ ಸಂಸ್ಥಾನವು ಸಿಂಧ್ಯೆ ಅರಸು ಮನೆತನದವರಿಂದ ಆಳಲ್ಪಡುತ್ತಿತ್ತು. ರಾಣೋಜಿ ಸಿಂಧೆ ಎಂಬವನು ಈ ರಾಜ್ಯದ ಸ್ಥಾಪಕನು. ಈತ ರಜಪೂತ ವಂಶದವನು. ಈತನ ನಂತರ ಆಳಿದವರು ಧರ್ಮಾಭಿಮಾನಿಗಳೂ ಪ್ರಜಾಪಾಲಕರೂ ಕ್ಷಾತ್ರವೀರರೂ ದಾನಶೂರರೂ ದೇಶಾಭಿಮಾನಿಗಳೂ ಆತ್ಮಾಭಿಮಾನಿಗಳೂ ಎಂಬುದನ್ನು ಇತಿಹಾಸದಿಂದ ತಿಳಿಯಬಹುದು.

ಗ್ವಾಲಿಯರ್ ಸಂಸ್ಥಾನದಲ್ಲಿ ಹಿಂದೆ ಸಂಸ್ಥಾನಕ್ಕೆ ಸೇರಿದ ಟಂಕಸಾಲೆಯಿತ್ತು. ಆ ಗುರುತಾಗಿ ಆಗಿನ ನಾಣ್ಯಗಳನ್ನು ಈಗಲೂ ಗ್ವಾಲಿಯರ್‌ನಲ್ಲಿ ಕಾಣಬಹುದು. ಗ್ವಾಲಿಯರ್ ಸಂಸ್ಥಾನದ ನಾಣ್ಯಗಳು ಈಗಲೂ ಅಲ್ಲಿ ಚಲಾವಣೆಯಲ್ಲಿವೆ.

ಇಲ್ಲಿನ ಭಾಷೆ ಮರಾಠಿಯನ್ನು ಹೋಲುತ್ತದೆ. ಆದರೆ ಹಿಂದಿಯಿಂದ ಮಾತಾಡಿದರೆ ನಮಗೆ ತೊಂದರೆ ಮತ್ತು ಭಾಷೆಯ ತೊಡಕು ಇರದು.

ಹಾಲು ಮೊಸರಿನ ರಾಜ್ಯ

ಇಲ್ಲಿ ಹಾಲು ಮತ್ತು ಮೊಸರು ಸಮೃದ್ಧಿಯಾಗಿ ಸಿಕ್ಕುತ್ತದೆ. ನಮ್ಮಲ್ಲಿನ ಹಾಗೆ ನೀರು ಹಾಲು, ನೀರು ಮೊಸರಲ್ಲ. ಗಟ್ಟಿ ಹಾಲು ಮತ್ತು ಗಟ್ಟಿಮೊಸರು. ಇಲ್ಲಿನ ತಿಂಡಿಗಳಲ್ಲಿ ಸಿಹಿ ಪದಾರ್ಥಗಳು ಹೆಚ್ಚು. ಜಿಲೇಬಿಯೆಂಬ ಸಾಮಾನ್ಯರ ತಿಂಡಿಯಾ

ಐತಿಹಾ

ಗಿದೆ; ನಮ್ಮಲ್ಲಿ
ಜನರ ಬ
ಜಿಲೇಬಿಯನ್ನು
ಯಲ್ಲಿ ತಿಂದು
ಮೈಸೂರು ಮ
ಕಾಫಿಯ ಸೋ
ಗಳನ್ನೂ ನಮ್ಮ
ದಷ್ಟು ಮಾಡಿಕೊ

ಇಡೀ ಭಾರತ
ಇಲ್ಲಿನ ಕೈಗಾರಿಕೆ
ಕಾಗದದಿಂದ ಮ
ರುವ ಬೊಂಬೆಗಳ
ಹೇರಳವಾಗಿ
ಹಣವನ್ನು ಗಳಿ

ಗ್ವಾಲಿಯರ
ಗಳಾಗಿ ವಿಭಾಗ
ಮತ್ತು ಹೊಸ
ಪಟ್ಟಣಕ್ಕೆ ಲಷ್ಕ
ದಾಲತ್‌ರ
ಯರನ್ನು

ಸೈನ್ಯ ಇಲ್ಲಿ ಬಿ
ಎಂದು ಹ
ನಗರದ ಪ್ರಮು
ನಲ್ಲಿಯೇ ಇವೆ.
ಕಟ್ಟಡಗಳು ಸು
ಮತ್ತು ಮೋತಿ
ಗಳಿವೆ. ಒಂ
ಸಂಗ್ರಹಾಲಯ

ಗ್ವಾಲಿಯರ್
ಗ್ವಾಲಿಯರ್
ಭಾಗಕ್ಕಿದೆ. ಹಳೆ
ಪಿ. ಯ ರೇಲ್ವೆ
ಮುಖ್ಯ ಆಕರ್ಷ

ಈ ಕೋಟೆ
ಕಟ್ಟಿರುತ್ತಾರೆ.
ಸುಮಾರು ೪
ಅಡಿ ಎತ್ತರ
ರುವ ರೀತಿ
ರ್ಷಕವಾ
ಯನ್ನು
ಪಟ್ಟಣದ
ಹೋಗಿಬರಲು
ಭಾಗದಿಂದಲೂ
ಟಾಂಗಾ ಮತ್ತು
ವಂತೆ ರಸ್ತೆಯನ

ಹೊಸ ಪುಸ್ತಕಗಳು

ಮತ್ತೊಂದು "ಪ್ರೇಮತ್ರಿಕೋನ"ದ ಕಾದಂಬರಿ

"ಪರಿವರ್ತನೆ ಅಥವಾ ಪ್ರವಾಹ"

ಲೇಖಕರು: ಶ್ರೀ "ನಿಶಾಕಾಂತ" ಪ್ರಕಾಶಕರು: ಲಲಿತ ಸಾಹಿತ್ಯಮಾಲೆ, ಧಾರವಾಡ ೨೦೦ ಪುಟ ರೂ. ೨-೮-೦

ಇದು ಒಂದು ಸ್ವತಂತ್ರ ಸಾಮಾಜಿಕ ಕಾದಂಬರಿ. ಈಗಿನ ಎಲ್ಲ ಕಾದಂಬರಿಗಳಲ್ಲಿ ಒಂದೇ ತೆರನಾದ ಕಥೆಯ ಓಟ. ಸದ್ಯದ ಸಾಮಾಜಿಕ ಜೀವನದ ಯಾವ ಮಹತ್ವದ ಸಮಸ್ಯೆಯನ್ನೂ ಬಿಡಿಸದೆ, ಪ್ರೇಮದ ಯಾವ ಪಾದರೊಂದು ತ್ರಿಕೋನದಲ್ಲಿ ಹೊಯ್ದಾಡಿಸಿ ಕೊನೆಗೆ ದುಃಖದಲ್ಲಿಯೋ ಸುಖದಲ್ಲಿಯೋ ಅವು ಅಂತ್ಯವಾಗುವವು. ಇದರಲ್ಲಿಯೂ ಒಂದು ಪ್ರೇಮದ "ತ್ರಿಕೋನ"ವಿದೆ. ರಾಜ, ರತ್ನ, ರೋಹಿಣಿ ಮೂರು ಕೋನಗಳು.

ಈ ಕಾದಂಬರಿಯು ಒಟ್ಟು ಕಥೆಯಲ್ಲಿ ಮೂರು ಭಾಗಗಳನ್ನು ಮಾಡಬಹುದು. ಮೊದಲನೆಯದರಲ್ಲಿ ರಾಜ ರೋಹಿಣಿಯರ ಪ್ರೇಮ. ರಾಜ ಬಡವನಾಗಿದ್ದು ಜಂಭದ ಕನ್ಯೆಯೆಂದು ರೋಹಿಣಿಯನ್ನು ವರಿಸಲೊಪ್ಪಲಿಲ್ಲ. ರೋಹಿಣಿಯು ತನಗೆ ಬೇಡವಾದರೂ ಮಲತಾಯಿಯ ಜುಲುಮೆಗೆ ಆಕೆಯ ತಮ್ಮನಾದ ವಿಶ್ವನಾಥನನ್ನು ಮದುವೆಯಾಗುವಳು. ಎರಡನೇ ಭಾಗದಲ್ಲಿ ರಾಜ-ರತ್ನರ ಮದುವೆ, ರತ್ನಳಿಗೆ ವಸಂತನೆಂಬ ಮಗುವಿನ ಜನನ. ರಾಜ-ರತ್ನರ ಸಂಸಾರ ರಥವು ಸುರಕ್ಷಿತವಾಗಿ ಸಾಗಿರುತ್ತದೆ. ಇನ್ನು ಮೂರನೇಭಾಗದಲ್ಲಿ ರತ್ನಳಿಗೆ ಆಕಸ್ಮಾತ್ತಾಗಿ ಬಂದ ಮೈಲಿ ಬೇನೆ ಮುಖದ ಕಲೆಗಳನ್ನು ಬಿಟ್ಟು ಒಂದು ಕಣ್ಣನ್ನು ತೆಗೆದುಕೊಂಡು ಹೋಗುವದು. ವಿದ್ರೂಪಿಯಾದ ಹೆಂಡತಿಯನ್ನು ನೋಡಿ ರಾಜನಿಗೆ ಅಸಹ್ಯವೆನಿಸುವದು. ಯಾಕಂದರೆ ರಾಜ ತನ್ನ ಮನದಲ್ಲಿ ರತ್ನ-ರೋಹಿಣಿಯರನ್ನು ಹೋಲಿಸುತ್ತಿರುವನು. ರೋಹಿಣಿಯ ಗಂಡ ವಿಶ್ವನಾಥನು ... ನಡೆಸದೆ ಕೆಟ್ಟ ಚಟಗಳಿಗೆ ಸಿಕ್ಕು ಮಿಲಿಟರಿ ಸೇರುವನು. ವಿಶ್ವನಾಥ ಡಾಕ್ಟರನಾದುದರಿಂದ ರೆಡ್‌ಕ್ರಾಸ್ ಸೆಕ್ಶನ್ನಿಗೆ ಹೋಗುವನು. ರಾಜ ದಿಹಲಿಗೆ ನೌಕರಿಗೆಂದು ಹೋದಾಗ, ಮಿಲಿಟರಿ ಆಫೀಸಿಗೆ ಗಂಡನ ವಿಚಾರ ಕೇಳಲು ಬಂದ ರೋಹಿಣಿಯ ಭೆಟ್ಟಿಯಾಗುವದು. ರೋಹಿಣಿ ರಾಜನಲ್ಲಿ ಪ್ರೇಮಯಾಚನೆ ಮಾಡುವಳು. ರಾಜ ರೋಹಿಣಿಯರು ತಿರುಗಿ ಮೈಸೂರಿಗೆ ಬಂದು ಮದುವೆ ಮಾಡಿಕೊಳ್ಳಲು ನಿಶ್ಚಯಿಸುವರು. ಇದನ್ನು ತಿಳಿದ ರತ್ನಳಿಗೆ ಏನು ಮಾಡಬೇಕೋ ತೋಚದೆ ಕೈಕಟ್ಟಿದಂತಾಗುವಳು. ರಾಜನ ಅಕ್ಕ ಗೌರಿ ಉಪಾಯಾಂತರದಿಂದ ರೋಹಿಣಿಗೆ ಬುದ್ಧಿ ಹೇಳುವಳು. ಅಷ್ಟರಲ್ಲಿ ತಿರುಗಿ ಬಂದ ಅಂಗಹೀನ ಪತಿ ವಿಶ್ವನಾಥನನ್ನು ರೋಹಿಣಿ ಹೊಂದುವಳು. ಇದರಿಂದ ರಾಜನು ಬುದ್ಧಿ ಕಲಿತು ಕುರುಡಿಯಾದರೂ ಕರುಣಾಮಯಿಯಾದ ರತ್ನಳನ್ನು ಸೇರುವನು. ಇದುವೇ ರಾಜ ರೋಹಿಣಿಯರಲ್ಲಿ ಆದ ಪರಿವರ್ತನೆ.

ನಿಶಾಕಾಂತರು ತಮ್ಮ ಪ್ರಥಮ ಪ್ರಯತ್ನದಲ್ಲಿ ಮನೋರಂಜನೆಯ ದೃಷ್ಟಿಯಿಂದ ತಕ್ಕಷ್ಟು ಯಶಸ್ಸನ್ನು ಹೊಂದಿದ್ದಾರೆಂದು ಹೇಳಲು ಅಡ್ಡಿಯಿಲ್ಲ. ಅವರ ಶೈಲಿ ಕುಂದುಕೊರತೆಯಿಲ್ಲದೆ ಸಾಗುವದು. ಅದಕ್ಕೆ ತಕ್ಕುದಾಗಿ ಕಥೆಯು ಸರಸವಾಗಿಯೇ ಓಡುವದು. ಓದುವಾಗ ಕಾದಂಬರಿಯನ್ನು ಕೆಳಗಿಡುವಂತೆ ಅನಿಸುವದಿಲ್ಲ. ಅಂತಹ ರಸವತ್ತಾದ ಸನ್ನಿವೇಶಗಳ ಕಲ್ಪನೆಯಿಂದ ನಮ್ಮ ಮನಸ್ಸನ್ನು ಕಾದಂಬರಿಯಲ್ಲಿ ಸೆರೆಹಿಡಿಯುತ್ತಾರೆ. ನಿಶಾಕಾಂತರ ಕಥೆಯು ಸಾಮಾನ್ಯವಾದರೂ ಅದನ್ನು ಹೇಳುವ ರೀತಿಯಲ್ಲಿ ಒಂದು ನಾವೀನ್ಯವನ್ನು ನಾವು ಕಾಣಬಹುದು. ಆದರೂ ಇಲ್ಲಿ ಬರುವ ಯಾವ ಪಾತ್ರಗಳೂ ನಮ್ಮ ಮನಸ್ಸಿನ ಮೇಲೆ ಪರಿಣಾಮವನ್ನು ಉಂಟುಮಾಡುವದಿಲ್ಲ. ಕೆಲವು ಪಾತ್ರಗಳು ಕಥೆಗೆ ಸಮಯೋಚಿತವಾಗಿ ಬಂದು ಕೊರತೆಯನ್ನು ತುಂಬುತ್ತವೆ. ನಿಶಾಕಾಂತರು ಉತ್ತಮ ಕಾದಂಬರಿಕಾರರಾಗಬಲ್ಲರೆಂದು ಈ ಕಾದಂಬರಿಯಿಂದ ಆಶಿಸಬಹುದು.

ಹೂವಾಡಗಿತ್ತಿ

ಲೇಖಕರು: ಶ್ರೀ ರಾ. ಸು. ಮಣಿ. ಪ್ರಕಾಶಕರು: ಶ್ರೀ ಎಚ್. ಆರ್. ಸುಬ್ರಹ್ಮಣ್ಯ, ೨೨೦, ಓಲ್ಡ್‌ವೆಡ್‌ಯಾರ್ಡ್, ಕೃಷ್ಣರಾಜ ಮೊಹಲ್ಲ, ಮೈಸೂರು. ೩೭ ಪುಟ ರೂ. ೧/—

ಹನ್ನೊಂದು ಕವಿತೆಗಳನ್ನೊಳಗೊಂಡ ಈ ಪುಟ್ಟ ಸಂಗ್ರಹವನ್ನು ಪೂರ್ತಿ ಓದಿದ ಬಳಿಕ ಈ ಅಜ್ಞಾತ ಕವಿಯಲ್ಲಿ ಕಾವ್ಯ ಪ್ರತಿಭೆ ಖಂಡಿತವಾಗಿ ಇದೆಯೆಂದು ಹೇಳಲಡ್ಡಿ ತೋರುವದಿಲ್ಲ. ಈ ಪದ್ಯಗಳಲ್ಲಿ ಹೆಚ್ಚಿನವು ವೈಯಕ್ತಿಕ ಕವನಗಳು. ಅವುಗಳಲ್ಲಿ ಭಾವನೆಯ ವೇಗವನ್ನು ಸಾಕಷ್ಟು ಕಾಣುತ್ತೇವೆ. ಮೊದಲಿನ ಐದಾರು ಕವನಗಳಲ್ಲಿ ಕವಿ ಬೆಲ್ಲತಿಂದ ಮೂಕನಂತೆ ಅಭಿವ್ಯಂಜನಕ್ಕಾಗಿ ಹೆಣಗಾಡುತ್ತಾನೆ. ಛಂದೋವಿನ್ಯಾಸಗಳನ್ನು ನಿರ್ಮಿಸಿಕೊಳ್ಳುವ ಅಸಫಲ ಪ್ರಯತ್ನಗಳು ನಡೆದು ಚಿಕ್ಕಪುಟ್ಟ ಕವಿತೆಗಳು ಕೂಡ ತಲೆ ಬೇಸರವಾಗುವಂತೆ ಮಾಡಿವೆ. "ಸರಸ್ವತಿ"ಯಲ್ಲಿ ಕವಿಯೆ ಒಪ್ಪಿಕೊಂಡಂತೆ "ಎನ್ನ ಮನದಲ್ಲಿ ಬಂದು ಎನ್ನ ಪ್ರೇರಿಸುವನಕ ನಾನೊಬ್ಬ ಪೆಚ್ಚು ಪಂಡಿತ"— ಆಗಿದ್ದುದು ನಿಜ. ಕೊನೆಯ ಮೂರು ನಾಲ್ಕು ಕವಿತೆಗಳಲ್ಲಿ ಸರಸ್ವತಿಯ "ಪ್ರಿಯ ಅನುನಯುವ" ಕವಿ ಅರಿತುದು ಸುಳ್ಳಲ್ಲವೆಂದು ಸಿದ್ಧವಾಗುತ್ತದೆ. ಮುಂದೆ ಆ ಛಂದೋವೈಚಿತ್ರ್ಯದ ಸುರುಳು ಹೋಗಿ ಸರಳತೆಯನ್ನೆ ಕವಿ ನೆಮ್ಮುತ್ತಾನೆ. "ನೀವಲ್ಲವೇ ಅಕೆ?" ಎಂಬ ಕವನದ ಅನೇಕ ಪಂಕ್ತಿಗಳು ಮನ ಸೆಳೆಯುತ್ತವೆ. ಪ್ರೀತಿಯ ಪತ್ನಿಯನ್ನು ಕಳೆದುಕೊಂಡು ನಿರ್ವಿಣ್ಣನಾಗಿ ಲಾಲಬಾಗಿನಲ್ಲಿ ಕುಳಿತ ಗಂಡನೊಬ್ಬ ಮಳ್ಳಕೊಡನೆ ರಾತ್ರಿಯಲ್ಲಿ ಎದುರಿಗೆ ಹಾದುಹೋದ ರಮಣಿಯನ್ನು ಸಂಬೋಧಿಸಿ "ನೀವಲ್ಲವೇ ಅಕೆ?" ಎಂದು ಕೇಳುವದು ಈ ೧೦ ಪುಟ ಉದ್ದದ ಕವಿತೆಯ ಕಥಾ ಸಾರ. ಲಾಲಬಾಗಿನಲ್ಲಿ "ಮುಪ್ಪಲ್ಲಿ ಎಳವೆಯಹು ಎಳವೆ ಜವ್ವನದ ಹುದು! ಉತ್ಸಾಹಿ ಜನಗಳಿಗೆ ಮಾರಮಂತ್ರಣವಹುದು!" ಎಂದು ಕವಿ ಬಣ್ಣಿಸಿದ್ದಾನೆ. "ಕಾವೇರಿಗೆ"ಯಲ್ಲಿ ಪತ್ನೀ ವಿಯೋಗ ಹೊಂದಿದ ಕವಿಯ ವಿಲಾಪ ಮನೋಹರವಾಗಿದೆ. ಕಾವೇರಿಯನ್ನು ಕವಿ "ಕಾಲದ ಅವಿಚ್ಛಿನ್ನ ವಾಹಿನಿಯ ಮಲಮಗುವೆ!" ಎಂದು ಕರೆಯುತ್ತಾನೆ.

ಆದರೆ ಶ್ರೀ ಮಣಿಯವರಿಗೆ ಶಬ್ದಗಳ ನಿಶ್ಚಿತಾರ್ಥಜ್ಞಾನದ ಅಭಾವವಿದ್ದಂತೆ ಕಾಣುತ್ತದೆ. ಕವಿತೆಗೆ ಒಗ್ಗದ "ಜಾಸ್ತಿ" ಮೊದಲಾದ ಪದ ಪ್ರಯೋಗಗಳೂ ಕಾಣುತ್ತವೆ. ತಮಿಳಿನ ಪ್ರಭಾವವೋ ಏನೊ ಅವರ ಕೆಲ ಶಬ್ದಗಳ ಅರ್ಥವೇ ಆಗುವದಿಲ್ಲ. "ಮಯ್ಯು" ಎಂದರೇನು? ತಪ್ಪು ಪ್ರಯೋಗಗಳೂ ಅಲ್ಲಲ್ಲಿ ಕಾಣಿಸಿಕೊಳ್ಳುತ್ತವೆ. ವ್ಯುತ್ಪತ್ತಿಯನ್ನವರು ಹೆಚ್ಚಿಸಿಕೊಳ್ಳಬೇಕೆಂದು ಸೂಚಿಸಬೇಕಾಗಿದೆ.

ಜೋಗದ ಝೋಕು ಮತ್ತು ಇತರ ಕವನಗಳು

ಲೇಖಕರು: ಶ್ರೀ "ಕ್ರಿಸ್ತಕಿಂಕರ" ಶಾಮಂಣ. ಪ್ರಕಾಶಕರು: ವಾಗ್ವಿಲಾಸ ಬುಕ್‌ಡಿಪೋ ಹುಬ್ಬಳ್ಳಿ, ೮೪ ಪುಟ ರೂ. ೧-೮-೦

ರೆ. ಶಾಮಣ್ಣನವರು ಪ್ರೊಟೆಸ್ಟಂಟ ಧರ್ಮೋಪದೇಶಕರು. ಅವರ ಈ ಕವಿತೆಗಳಲ್ಲಿ ಉಪದೇಶತತ್ವದ ರೀತಿ ಅನಿವಾರ್ಯವಾಗಿ ಎಲ್ಲೆಡೆಗಳಲ್ಲೂ ತಲೆಹಾಕುತ್ತದೆ. ತಮ್ಮದೇ ರೀತಿಯಲ್ಲಿ ಕವನಗಳು ಸುಂದರವಾಗಿವೆ. ಆದರೆ ಸಂಪಾದಕರಾದ ಶ್ರೀ ಕರಬಿಯವರು ತಮ್ಮ ಆಶ್ಚರ್ಯಚಿಹ್ನಮಯ(!)ವಾದ ಕನ್ನಡ ಇಂಗ್ಲಿಷ್ ಮುನ್ನುಡಿಗಳು ಮತ್ತು ಕಾವ್ಯ ಚರ್ಚೆ ಮಾಡಿದುದು ಅಪ್ರಸ್ತುತವಾಗಿದೆಯೆನ್ನಬೇಕಾಗಿದೆ. ರೆ. ಶಾಮಣ್ಣನವರ ಕವಿತೆಗಳು ಇನ್ನೂ ಎಚ್ಚರಿಕೆಯಿಂದ ಆರಿಸಲ್ಪಟ್ಟು ಸರಳವಾಗಿ ನಿರರ್ಥಕ ಆಡಂಬರಗಳಿಂದ ವಿರಹಿತವಾಗಿ ಪ್ರಕಟವಾಗಿದ್ದರೆ ಒಳಿತಾಗುತಿತ್ತು.

ವಿವೇಕ ವಿಜಯ

ಬರೆದವರು ಮತ್ತು ಪ್ರಕಾಶಕರು: ಶ್ರೀ ಅಣ್ಣಾರಾಮರು, ಪರಮಾನಂದಮಠ, ಸೀಗೆಹಳ್ಳಿ. ಪುಟ ೨೬೩, ಬೆಲೆ ರೂ. ೩॥

ಸಂಸ್ಕೃತ "ಪ್ರಬೋಧ ಚಂದ್ರೋದಯ"ವೆಂಬ ಕಾವ್ಯದಂತೆ ಈ "ವಿವೇಕವಿಜಯ"ವು ಮಾನವ ಗುಣಗಳನ್ನು ಮೂರ್ತೀಕರಿಸಿ ಮನುಷ್ಯಪಾತ್ರಗಳನ್ನಾಗಿ ಮಾಡಿ ಅವುಗಳ ದ್ವಾರಾ ತತ್ವವನ್ನು ಪ್ರತಿಪಾದಿಸುತ್ತದೆ. ಇದೊಂದು ಯಕ್ಷಗಾನ ಕಾವ್ಯವೆಂದು ಬರೆಯಲಾಗಿದೆ; ಜೊತೆಗೆ ಟೀಕೆಯೂ ಇದೆ. ಅಧ್ಯಾತ್ಮಿಕ ವಿಚಾರಗಳನ್ನು ಈ ರೀತಿ ಬೋಧಿಸಿದ್ದಕ್ಕೆ ರಾಮಾಯಣಕ್ಕೆ ಬರೆದ ಅಂತರಾರ್ಥ ಒಂದು ನಿದರ್ಶನ. ಅದರಲ್ಲಿ ಸೀತೆಯೆಂದರೆ ಸತ್ವಗುಣ, ರಾಮನೆಂದರೆ ರಜೋಗುಣ ಮತ್ತು ರಾವಣನೆಂದರೆ ತಮೋಗುಣ ಎಂದು ಅರ್ಥ ಹೇಳಲಾಗಿದೆ. ಈ ಯಕ್ಷಗಾನ ಪ್ರಸಂಗದಲ್ಲಿ ಆಯಾ ಗುಣಗಳೇ ಕೈಬಾಯಿ ತಳೆದು ಮನುಷ್ಯರಾಗಿ ನಿಂತು ಅವರಂತೆ ಅದರೆ ಅಲಂಕಾರಿಕವಾಗಿ (Metaphorically) ಪ್ರಾಪಂಚಿಕ ಕಾರ್ಯಗಳನ್ನು ಮಾಡುತ್ತವೆ. ಪ್ರತಿಯೊಂದು ಕಾರ್ಯವೂ ಸಮಾಸೋಕ್ತಿ (Allegorical) ಇರುವುದು ಕಾವ್ಯದೃಷ್ಟಿಯಿಂದ ರಸಾವಹ ಎನಿಸುವುದಿಲ್ಲ. ಇದೀ ಕಾವ್ಯವು ಒಟ್ಟಿನ ಮೇಲೆ ಹಾಗಿದ್ದರೆ ಇಷ್ಟು ಕೇಡಲ್ಲ. ರಾಮಾಯಣಕ್ಕೆ ಅಂತರಾರ್ಥ ಬರೆದು ರಾಮಾಯಣದ ರುಚಿಯನ್ನು ಹೇಳು ಮಾಡಿದ್ದಕ್ಕಿಂತಲೂ ಈ ಪ್ರಬೋಧ ಚಂದ್ರೋದಯ ಪದ್ಧತಿ ಮತ್ತಷ್ಟು ಅರುಚಿಕರ. ಪ್ರತಿಕ್ಷಣವೂ ಇದು ಸುಳ್ಳು ಇದು ಸುಳ್ಳು ಎಂಬ ಭಾವನೆ ಓದುಗರಿಗೆ ಬರುವಂತೆ ಈ ಅದೃಶ್ಯ ಅಸ್ಪೃಶ್ಯ ಮಾನಸಿಕ ಪಾತ್ರಗಳು ಕಾರ್ಯಮಗ್ನರಾದರೆನ್ನುವುದು ಕಾವ್ಯಕ್ಕೆ ಸತ್ಯಸಾದೃಶ್ಯವನ್ನು ಸಾಕಷ್ಟು ಕೊಡುವುದಿಲ್ಲ. ದೊಡ್ಡವರಿಗೆ ಕಾಕಕ್ಕ ಗುಬ್ಬಕ್ಕನ ಕಥೆ ಹೇಳಿದರೆ ಆಗುವಷ್ಟೇ ಮನೋರಂಜನೆ ಇದರಿಂದಲೂ ಆಗಬಹುದು. ಆದುದರಿಂದ ಇದನ್ನು ಕಾವ್ಯವೆನ್ನಲು ಬರುವಂತಿಲ್ಲ. ಹಾಗಾದರೆ ಇದನ್ನೊಂದು ವೇದಾಂತಗ್ರಂಥವೆನ್ನಬಹುದೊ? ಇಲ್ಲ. ಆ ಶೈಲಿಗಾಂಭೀರ್ಯ, ತತ್ವ ವಿವರಣ ಯೋಗ್ಯತೆ ಶಾಸ್ತ್ರಮರ್ಯಾದೆ ಇದಕ್ಕಿಲ್ಲ. ಹೀಗಾಗಿ ವಾಙ್ಮಯದಲ್ಲಿ ಇದಕ್ಕೆ ತ್ರಿಶಂಕು ಪದವಿಯೇ ಗತಿ. ಆದರೆ ಇಂಥ ಸಾಹಿತ್ಯದ ಭಕ್ತರಿಲ್ಲವೆಂದಿಲ್ಲ. ಅಂಥವರಿಗೆ ಇದು ಆಪ್ಯಾಯಮಾನವಾಗದಿರದು. ತತ್ವಜ್ಞಾನವನ್ನು ತಿಳಿಯುವ ಶಕ್ತಿ ಇಲ್ಲದವರಿಗೆ ಇದು ವಿವೇಕಬೋಧಕ್ಕೆ ಉತ್ತಮ ಸಾಧನವಾಗುವಂತಿದೆ. ಇಲ್ಲಿ ಆತ್ಮಕ್ಕೆ ಪುಲ್ಲಿಂಗವನ್ನು ಅನ್ವಯಿಸಿದೆ. ಸ್ತ್ರೀಮುಮುಕ್ಷುಗಳು ಆತ್ಮಕ್ಕೆ ಸ್ತ್ರೀಲಿಂಗವನ್ನು ಅನ್ವಯಿಸಿ ಅರ್ಥಮಾಡಿಕೊಳ್ಳಬೇಕಾಗುತ್ತದೆ.

ಜಯಂತಿ (ಕಥಾ ಸಂಚಿಕೆ)

ಸಂಪಾದಕರು: [illegible] ಪ್ರಕಾಶಕರು: ಶ್ರೀ ಎಸ್. ಪಿ. ಮನ್ನೂರಿ, ಜಯಂತಿ ಕಾರ್ಯಾಲಯ, ಧಾರವಾಡ. ಪುಟ ೬೩, ಬೆಲೆ ಎಂಟಾಣೆ.

'ಜಯಂತಿ'ಯು ಈ ಕಥಾಸಂಚಿಕೆಯಲ್ಲಿ ಕಥೆಗಳ ಮೇಲಾಟದಲ್ಲಿ ಬಹುಮಾನ ಪಡೆದ 'ಸ್ನೇಹಿತರು', 'ಧರ್ಮ ಬುದ್ಧಿಯಿಂದ' ಮತ್ತು 'ಗೊತ್ತುಮಾಡಿದ ಹೊತ್ತಿಗೆ ಬರದ ಇದ್ದುದರಿಂದ' ಎಂಬ ಕಥೆಗಳನ್ನು ಅನುಕ್ರಮವಾಗಿ ಶ್ರೀಗಳಾದ ಯಮರ್ಗಂಚ ರಾಮಚಂದ್ರ, ಪುತ್ತೂರು, ಪಿ. ಎಸ್. ಭಟ್ಟ, ಕಲ್ಲಾಪುರ ಶ್ರೀನಿವಾಸ ಪರಗುಂಡಿಕರ ... ಇವರು ಬರೆದವರು. ಬಂದ ಆ ಕತೆಗಳಲ್ಲಿ 'ಉತ್ತಮ ಕರಡ ಕತೆಗಳು ಇಲ್ಲವೇ ಇಲ್ಲ' ವೆಂದು ಒಟ್ಟಿನಲ್ಲಿ ನಿರ್ಣಾಯಕರು ಅಭಿಪ್ರಾಯಪಟ್ಟಿದ್ದಾರೆಂದು ಪತ್ರಿಕೆಯೇ ಹೇಳುತ್ತದೆ. ಇದು ಪತ್ರಿಕೆಯ ಮತ್ತು ನಿರ್ಣಾಯಕರ ನಿಷ್ಪಕ್ಷಪಾತ ಮತ್ತು ಸರಳ ಸ್ವಭಾವವನ್ನು ವ್ಯಕ್ತಮಾಡುತ್ತದೆ. ಇದರಿಂದ ಕತೆಗಾರರು 'ಕೈಕೆಸರಾಗದೆ ಬಾಯಿ ಮೊಸರಾಗದು' ಎಂಬುದನ್ನು ಅರಿತು ತಮ್ಮ ಅನುಭವ ಮತ್ತು ವಾಗುಪಾಸನೆಯನ್ನು ಇನ್ನೂ ವೃದ್ಧಿಗೊಳಿಸಿಕೊಳ್ಳಲು ಪಣತೊಡಬೇಕಾಗಿದೆ ಎಂಬುದು ಸ್ಪಷ್ಟವಾಗುತ್ತದೆ. ಪತ್ರಿಕೆಯು ಮೇಲಾಟದ ವ್ಯವಸ್ಥೆಗಿಂತಲೂ ವಿವಿಧ ಭಾರತೀಯ ಭಾಷೆಗಳ ಕಥಾಸಾಹಿತ್ಯದ ಬಗ್ಗೆ ಪರಿಚಯಾತ್ಮಕ ಲೇಖನಗಳನ್ನು ಸಮರ್ಥರಿಂದ ಬರೆಸಿ ಪ್ರಕಟಿಸಿದ್ದು ಮತ್ತಷ್ಟು ಶ್ಲಾಘ್ಯವೆನ್ನಬೇಕು. ಈ ಪ್ರಯತ್ನ ಕನ್ನಡದಲ್ಲಿ ವಿರಳ. ಇದು ಬಿಕ್ಕಮಾಸಿಕಗಳಿಗೊಂದು ಮಾದರಿ ಹಾಕಿಕೊಟ್ಟಂತಾಗಿದೆ. ಹೀಗೇ ಕವಿತೆ, ನಾಟಕ ಮುಂತಾದ ಸಾಹಿತ್ಯದ ಬೇರೆ ಬೇರೆ ವಿಭಾಗಗಳ ಬಗ್ಗೂ ಸಂಪಾದಕರು ಮೇಲಾಟ ಮತ್ತು ಪರಿಚಯಾತ್ಮಕ ಲೇಖನಗಳನ್ನು ವ್ಯವಸ್ಥೆಗೊಳಿಸಿ 'ಜಯಂತಿ'ಯ ಮೂಲಕ ಕನ್ನಡ ಸಾಹಿತ್ಯಕ್ಕೆ ಸರ್ವಾಂಗಸುಂದರ ಸೇವೆ ಸಲ್ಲಿಸುವದರಲ್ಲಿ ಸಂಪಾದಕರು ಸಮರ್ಥರಾಗಲೆಂದು ನಮ್ಮ ಹಾರೈಕೆ.

ಅವಳು: ಪ್ರತಿಭಾವಂತರ ಕೈಹಿಡಿದರೆ ಸುಖವುಂಟೆಂದು ನಿಮ್ಮ ಅಭಿಪ್ರಾಯವೊ?
ಅವನು: ನನ್ನ ಹೆಂಡತಿಯನ್ನು ಕೇಳು.

ಗ್ರಹಗಳ ಮುನ್ನೋಟ

ಮೇ ೨೩ ರಿಂದ ೨೯ ರ ವರೆಗೆ

ಜ್ಯೋತಿಷಿ:— ಶ್ರೀ ಕೃಷ್ಣಶಾಸ್ತ್ರಿ ಭಿಡೆ, ಬೆಳಗಾಂವಿ

ಮೇಷ

ನಿಮ್ಮ ಪ್ರಕೃತಿಗೆ ಅಲ್ಪಸ್ವಲ್ಪ ಕಿರುಕುಳವಾದರೂ ಪ್ರಾಪಂಚಿಕ ಸುಖದ ಯೋಗ ಚೆನ್ನಾಗಿದೆ. ಮಾತ್ರ ನೀವು ಅಂತಃಕಲಹಗಳಿಗೆ ಕೆಡೆಗೊಡಬಾರದು. ಉದ್ಯೋಗದಲ್ಲಿ ಲಾಭ ಚೆನ್ನಾಗಿದ್ದು ನಾಲ್ಕು ಕಾಸು ಕೂಡಿಡುವಿರಿ. ಪ್ರತಿಷ್ಠೆಗೆ ಕುಂದು ಬರಬಹುದು. ವಾದಸ್ಪರ್ಧೆಗಳಲ್ಲಿ ಇನ್ನೆರಡು ವಾರ ಸ್ಥಿತಿ ಇದ್ದಕ್ಕಿದ್ದಂತೆ ಉಳಿದು ಮುಂದೆ ನಿಮಗೆ ಯಶಸ್ಸು ದೊರಕುವದು. ಪ್ರವಾಸಾದಿ ಕಾರ್ಯಗಳು ಹಿತಾವಹ. ಅಶ್ವಿನಿಯ ೪ ನೆ ಮತ್ತು ಭರಣಿಯ ಮೊದಲ ೩ ಚರಣಗಳಿಗೆ ಸ್ವಲ್ಪ ತೊಂದರೆ ಹೆಚ್ಚು. ತಾ. ೨೫, ೨೬, ೨೭, ೨೮ ಅನುಕೂಲ.

ವೃಷಭ

ನಿಮ್ಮ ಪ್ರಕೃತಿ ಆರೋಗ್ಯವಾಗಿದ್ದರೂ ಹೆಂಡತಿಯದು ತುಸು ಕೆಡಬಹುದು. ಮೇಲಾಗಿ ನಿಮ್ಮೊಳಗೆ ಮತಭೇದವೂ ಆಗುವದು. ಮಕ್ಕಳ ಉನ್ನತಿ ಮತ್ತು ದಾಯಾದ್ಯರ ಸಹಾನುಭೂತಿಯಿಂದ ನಿಮಗೆ ತುಂಬ ಹಿತವೆನಿಸುವದು. ಉದ್ಯೋಗದಲ್ಲಿ ಪ್ರತಿಷ್ಠೆ ಮತ್ತು ಲಾಭ ಚೆನ್ನಾಗಿರುವದು. ವಾದ ಸ್ಪರ್ಧೆಗಳಲ್ಲಿ ನೀವೇ ಗೆದ್ದರೂ ಅದರಿಂದ ದೊರಕುವ ಪ್ರಯೋಜನ ಮಾತ್ರ ಕಡಿಮೆ. ಪ್ರವಾಸ ಅಷ್ಟು ಫಲಕಾರಿಯಾಗದು. ಭೆಟ್ಟಿ ಪತ್ರವ್ಯವಹಾರ ಅಡ್ಡಿಯಿಲ್ಲ. ಕೃತ್ತಿಕೆಯ ೪ ನೆ ಮತ್ತು ರೋಹಿಣಿಯ ಮೊದಲನೆ ೩ ಚರಣಗಳಿಗೂ ಸ್ವಲ್ಪ ಪ್ರತಿಕೂಲ ಕಾಲ. ತಾ. ೨೩, ೨೪, ೨೭, ೨೮ ಅನುಕೂಲ.

ಮಿಥುನ

ನಿಮ್ಮಿಬ್ಬರಿಗೂ ಸ್ವಲ್ಪ ಅಸೌಖ್ಯ. ಮಕ್ಕಳಲ್ಲೊಬ್ಬನಿಗೆ ಬಹಳ ಜಾಡ್ಯವಾಗಬಹುದು. ಉದ್ಯೋಗದಲ್ಲಿ ಪ್ರತಿಷ್ಠೆ ಕಡಿಮೆಯಾದರೂ ಲಾಭ ಉತ್ತಮ. ವೆಚ್ಚ ಬಹಳವಾದರೂ ಉದ್ದೇಶ ಸಫಲವಾಗುವದು. ವಾದ ಸ್ಪರ್ಧೆಗಳಲ್ಲಿ ಮಧ್ಯಮಾವಸ್ಥೆ. ಮೇಲಾಗಿ ಶತ್ರುಗಳಿಂದ ತೊಂದರೆಯೂ ಹೆಚ್ಚುವದು. ಪ್ರವಾಸ ಹಿತಕರ. ಭೆಟ್ಟಿ ಪತ್ರವ್ಯವಹಾರ ಅಷ್ಟು ಉಪಯುಕ್ತವಲ್ಲ. ಮೃಗಶಿರದ ೪ ನೆ ಮತ್ತು ಆರ್ದ್ರೆಯ ಮೊದಲ ೩ ಚರಣಗಳು ಸ್ವಲ್ಪ ಪ್ರಯತ್ನದಿಂದಲೇ ಕಾರ್ಯ ಸಾಧನೆ ಮಾಡಿಕೊಳ್ಳಬೇಕು. ತಾ. ೨೩, ೨೪, ೨೫, ೨೬ ಅನುಕೂಲ.

ಕರ್ಕ

ಪ್ರಾಪಂಚಿಕ ಸುಖ ಅಷ್ಟೊಂದು ಚೆನ್ನಾಗಿಲ್ಲದಿದ್ದರೂ ಉಳಿದ ವಿಚಾರಗಳಲ್ಲಿ ಈ ವಾರ ನಿಮಗೆ ತುಂಬ ಅನುಕೂಲವೇ. ಪ್ರಕೃತಿ, ಸ್ತ್ರೀಸುಖ ಚೆನ್ನಾಗಿರುವದಲ್ಲದೆ ಉದ್ಯೋಗದಲ್ಲಿ ಪ್ರತಿಷ್ಠೆಯೂ ಲಾಭವೂ ಅಪೇಕ್ಷಿಸಿದಷ್ಟು ದೊರೆಯುವದು. ಮೇಲಾಗಿ ದೊಡ್ಡ ಮನುಷ್ಯರಿಂದ ತುಂಬ ಗೌರವಿಸಲ್ಪಡುವಿರಿ. ಮಿತ್ರಸುಖ ಉತ್ತಮ. ವಾದ ಸ್ಪರ್ಧೆಗಳಲ್ಲಿ ಯಶಸ್ಸು. ಪ್ರವಾಸಾದಿ ಕಾರ್ಯಗಳು ಹಿತಾವಹ. ಪುಷ್ಯದ ೪ ನೆ ಮತ್ತು ಆಶ್ಲೇಷೆಯ ಮೊದಲ ೩ ಚರಣಗಳಿಗೆ ಸ್ವಲ್ಪ ಅನನುಕೂಲ. ತಾ. ೨೩, ೨೪, ೨೭, ೨೮, ಅನುಕೂಲ ದಿನಗಳು.

ಸಿಂಹ

ನಿಮ್ಮ ಮತ್ತು ಹೆಂಡತಿಯ ಪ್ರಕೃತಿ ಸ್ವಸ್ಥ. ಮಕ್ಕಳಿಗೆ ಅಲ್ಪ ಸ್ವಲ್ಪ ಕ್ಲೇಶವಾದೀತು. ಉದ್ಯೋಗದಲ್ಲಿ ಪ್ರತಿಷ್ಠೆ, ಲಾಭ ಚೆನ್ನಾಗಿದ್ದರೂ ಮನಸಿಗೆ ಒಗ್ಗದ ಕೆಲಸಗಳಿಗಾಗಿ ಹಣ ಸುರಿಯುವ ಪ್ರಸಂಗ ಬರಬಹುದು. ವಾದ ಸ್ಪರ್ಧೆಗಳಲ್ಲಿ ಏನೂ ವಿಶೇಷವಿಲ್ಲ. ಪ್ರವಾಸಾದಿ ಕಾರ್ಯಗಳು ಸುಖವಾಗಿ ನೆರವೇರುವವು. ಮಘೆಯ ೪ನೆ ಮತ್ತು ಪೂರ್ವೆಯ ಮೊದಲ ೩ ಚರಣಗಳಿಗೆ ತೊಂದರೆ ಹೆಚ್ಚು. ತಾ. ೨೫, ೨೬, ೨೭, ೨೮ ಅನುಕೂಲ.

ಕನ್ಯಾ

ನಿಮ್ಮಿಬ್ಬರ ಆರೋಗ್ಯವೂ ಚೆನ್ನಾಗಿರುವದು. ಮಕ್ಕಳಿಗೆ ಅಲ್ಪ ಸ್ವಲ್ಪ ಅನಾರೋಗ್ಯವೂ ಅಲ್ಪ ಸ್ವಲ್ಪ ಪ್ರಾಪಂಚಿಕ ತಾಪತ್ರಯಗಳೂ ಘಟಿಸಬಹುದಾದರೂ ಒಂದೆರಡು ಉತ್ಸಾಹಜನಕ ಸಂಗತಿಗಳು ಸಂಭವಿಸುವದರಿಂದ ಮನಸಿಗೆ ನೆಮ್ಮದಿಯುಣಿಸುವದು. ಉದ್ಯೋಗದಲ್ಲಿ ಕೈತುಂಬ ಲಾಭ. ಆದರೆ ಪ್ರತಿಷ್ಠೆಗೆ ಕಿಂಚಿತ್ ದೋಷ ತಟ್ಟಬಹುದು. ವಾದ ಸ್ಪರ್ಧೆಗಳಲ್ಲಿ ಮಹತ್ವದ ಯಾವ ಸಂಗತಿಯೂ ಸಂಭವಿಸಲಾರದು. ವೆಚ್ಚ ಮಾಡಿಯಾದರೂ ಅಪೇಕ್ಷಿತ ಫಲವನ್ನು ಸಾಧಿಸುವಿರಿ. ಒಂದು ಧರ್ಮಕಾರ್ಯವೂ ನೆರವೇರುವದು. ಪ್ರವಾಸಾದಿ ಕಾರ್ಯಗಳು ನಿರ್ವಿಘ್ನ. ಉತ್ತರೆಯ ೪ ನೆ ಮತ್ತು ಹಸ್ತದ ಮೊದಲ ೩ ಚರಣಗಳಿಗೆ ಪ್ರಯತ್ನದಿಂದಲೇ ಯಶ. ತಾ. ೨೩, ೨೭, ೨೮, ೨೯ ಒಳಿತು.

ತುಲಾ

ಪ್ರಕೃತಿಗೆ ತುಸು ಕ್ಲೇಶವಾದಂತೆ ಸುಮ್ಮಸುಮ್ಮನೆ ಸಂದೇಹಪಡುವಿರಿ. ಹೆಂಡತಿಯಿಂದ ಪದೇಪದೇ ವಿರೋಧ ಬಂದು ತಲೆ ಚಿಟ್ಟೇರಿ ಹೋಗಬಹುದು. ಉದ್ಯೋಗದಲ್ಲಿ ಪ್ರತಿಷ್ಠೆಗೆ ಕುಂದು ಬರುವ ಭಯವಿದ್ದರೂ ಲಾಭ ಚೆನ್ನಾಗಿರುವದು. ಮೇಲಾಗಿ ಅನಿರೀಕ್ಷಿತ ಲಾಭವನ್ನೂ ನೀವು ನಿರೀಕ್ಷಿಸಬಹುದು. ವಾದ ಸ್ಪರ್ಧೆಗಳಲ್ಲಿ ಹೇಳಿಕೊಳ್ಳುವ ಮಾತೇನೂ ಇಲ್ಲ. ಪ್ರವಾಸಾದಿ ಕಾರ್ಯಗಳು ಅಷ್ಟು ಸಮರ್ಪಕವಾಗಿ ಕೈಗೂಡಲಿಕ್ಕಿಲ್ಲ. ಚಿತ್ರೆಯ ೪ ನೆ ಮತ್ತು ಸ್ವಾತಿಯ ಮೊದಲ ೩ ಚರಣಗಳಿಗೆ ಸ್ವಲ್ಪ ತೊಂದರೆ ಹೆಚ್ಚು. ತಾ. ೨೫, ೨೬, ೨೯ ಅನುಕೂಲ.

ವೃಶ್ಚಿಕ

ನಿಮಗೀ ವಾರ ಅನೇಕ ವಿಧದಲ್ಲಿ ಸುಖಕರವಾಗಲಿದೆಯೆನ್ನಬಹುದು. ನಿಮ್ಮ ಪ್ರಕೃತಿ ತುಸು ಕೆಡಬಹುದಾದರೂ ಉಳಿದವರು ಆರೋಗ್ಯವಾಗಿರುವರು. ಪ್ರಾಪಂಚಿಕ ಸುಖ ಉತ್ತಮ. ಪ್ರಿಯಜನರ ಸಹವಾಸ. ಧಾರ್ಮಿಕ ಕಾರ್ಯ ನೆರವೇರಬಹುದು. ಉದ್ಯೋಗದಲ್ಲಿ ಉತ್ತಮ ಲಾಭ. ಪ್ರತಿಷ್ಠೆಯ ವಿಷಯದಲ್ಲಿ ಮಾತ್ರ ನೀವು ಸ್ವಲ್ಪ ಎಚ್ಚರಿಕೆ ವಹಿಸಬೇಕು. ವಾದ ಸ್ಪರ್ಧೆಗಳಲ್ಲಿಯೂ ನಿಮಗೆ ಯಶಸ್ಸು. ಪ್ರವಾಸಾದಿ ಕಾರ್ಯಗಳು ಅಪೇಕ್ಷಿಸಿದಂತೆ. ಅನುರಾಧೆಯ ೪ ನೆ ಮತ್ತು ಜ್ಯೇಷ್ಠದ ಮೊದಲ ೩ ಚರಣಗಳಿಗೆ ಮಾತ್ರ ಸ್ವಲ್ಪ ಅನಿಷ್ಟ. ತಾ. ೨೩, ೨೪, ೨೭, ೨೮ ಅನುಕೂಲ.

ಧನು

ನಿಮ್ಮ ಪ್ರಕೃತಿ ಚೆನ್ನಾಗಿರುವದು. ಹೆಂಡತಿ ಮಕ್ಕಳದು ಅಷ್ಟು ಚೆನ್ನಾಗಿರದು. ಉಳಿದ ಪ್ರಾಪಂಚಿಕ ಸುಖಗಳಿಗೆ ವಿಶೇಷ ಕೊರತೆಯೆನಿಸದು. ಪ್ರಿಯಜನರ ಸಹವಾಸ. ಉದ್ಯೋಗದಲ್ಲಿ ಪ್ರತಿಷ್ಠೆ ಲಾಭಗಳು ಕಡಿಮೆ. ಇನ್ನೂ ಎರಡುವಾರ ನಿಮ್ಮ ಆರ್ಥಿಕಸ್ಥಿತಿ ಸುಧಾರಿಸದು. ನೌಕರರಿಗೆ ಧಂದೆಯವರಿಗಿಂತ ಒಳಿತು. ಮಿತ್ರರಲ್ಲಿ ವಿರೋಧವೂ ಸ್ತ್ರೀಯರಲ್ಲಿ ಅನಾದರವೂ ಉಂಟಾದೀತು. ಪ್ರವಾಸಾದಿ ಕಾರ್ಯಗಳನ್ನು ಮುಂದೆ ತಳ್ಳಿರಿ. ಮೂಲದ ೪ ನೆ ಮತ್ತು ಪೂರ್ವಾಷಾಢದ ಮೊದಲ ೩ ಚರಣಗಳು ವಿಶೇಷ ಎಚ್ಚರದಿಂದಿರಬೇಕು. ತಾ. ೨೫, ೨೬, ೨೯ ಅನುಕೂಲ.

ಮಕರ

ಸ್ವಂತದ ಪ್ರಕೃತಿ ಸ್ವಲ್ಪ ಕೆಡಬಹುದು ಉಳಿದವರಿಗೆ ಆರೋಗ್ಯ ಚೆನ್ನಾಗಿರುವದು. ಆದರೆ ಅಂತಃಕಲಹದಿಂದ ಕೌಟುಂಬಿಕ ಶಾಂತಿಭಂಗವಾಗದಂತೆ ನೋಡಿಕೊಳ್ಳುವ ಭಾರ ನಿಮ್ಮದು. ಸ್ಥಾವರದಲ್ಲಿ ತುಸು ಹೆಚ್ಚಳ. ಆದರೆ ರೈತರೂ ನೌಕರಚಾಕರರೂ ನಿಮಗೆ ಕಿರುಕುಳ ಉಂಟುಮಾಡಬಹುದು. ಉದ್ಯೋಗದಲ್ಲಿ ಪ್ರತಿಷ್ಠೆ ಲಾಭಗಳೆನ್ನು ಯಥಾವತ್ತಾಗಿ ಉಳಿಸಿಕೊಳ್ಳಲು ನೀವು ತುಂಬ ಶ್ರಮಪಡಬೇಕಾಗುವದು. ವಾದಸ್ಪರ್ಧೆಗಳಲ್ಲಿ ತುಸು ಅನುಕೂಲ. ಮಕ್ಕಳು ಸ್ತುತ್ಯಕಾರ್ಯಗಳನ್ನೆಸಗಿ ಜನಾದರಕ್ಕೆ ಪಾತ್ರರಾಗುವರು. ಭೆಟ್ಟಿಯಿಂದ ಕಾರ್ಯ ಸಾಧನೆಯಾಗುವದು ಸಂಶಯ. ಪತ್ರವ್ಯವಹಾರ ಪ್ರವಾಸಗಳು ಹಿತಾವಹ. ಉತ್ತರಾಷಾಢದ ೪ನೆ ಮತ್ತು ಶ್ರವಣದ ಮೊದಲ ೩ ಚರಣಗಳಿಗೆ ತೊಂದರೆ ಹೆಚ್ಚು. ತಾ, ೨೩ ೨೪, ೨೭ ಅನುಕೂಲ.

ಕುಂಭ

ನಿಮ್ಮ ಪ್ರಕೃತಿ ಚೆನ್ನಾಗಿದ್ದರೂ ಹೆಂಡತಿಯದರ ಬಗ್ಗೆ ಎಚ್ಚರಿಕೆತಾಳಿರಿ. ಉದ್ಯೋಗದಲ್ಲಿ ಪ್ರತಿಷ್ಠೆ ಚೆನ್ನಾಗಿದ್ದರೂ ಲಾಭ ಕಡಿಮೆಯೆ. ಉದ್ವೇಗದ ಭರದಲ್ಲಿ ಏನಾದರೊಂದು ಕೆಲಸ ಮಾಡಿ ಮುಂದೆ ಫಜೀತಿ ಬೀಳುವ ಪ್ರಸಂಗ ತಂದುಕೊಳ್ಳಬೇಡಿರಿ. ಸ್ಥಾವರದಲ್ಲಿ ಅನುಕೂಲ ಘಟನೆಗಳು. ವಾದ ಸ್ಪರ್ಧೆಗಳಲ್ಲಿ ಉಭಯ ಪಕ್ಷಗಳ ಸ್ಥಿತಿ ಯಥಾವತ್ತಾಗಿರುವದು. ಪ್ರವಾಸಾದಿ ಕಾರ್ಯಗಳಲ್ಲಿ ಸಾಧಾರಣ ಸಫಲತೆ. ಧನಿಷ್ಠೆಯ ೪ನೆ ಮತ್ತು ಶತತಾರೆಯ ಮೊದಲ ೩ ಚರಣಗಳಿಗೆ ಪ್ರಯತ್ನದಿಂದಲೇ ಕಾರ್ಯಸಿದ್ಧಿ. ತಾ. ೨೩, ೨೪, ೨೫, ೨೬ ಅನುಕೂಲ.

ಮೀನ

ನಿಮ್ಮೆಲ್ಲರ ಪ್ರಕೃತಿಯೂ ಚೆನ್ನಾಗಿರುವದಲ್ಲದೆ ಸರ್ವವಿಧ ಪ್ರಾಪಂಚಿಕ ಸುಖಗಳನ್ನೂ ಅನುಭವಿಸುವಿರಿ. ಮಕ್ಕಳ ಮತ್ತು ದಾಯಾದ್ಯರ ಉತ್ಕರ್ಷ. ಉದ್ಯೋಗದಲ್ಲಿ ಉತ್ತಮ ಲಾಭ, ಪ್ರತಿಷ್ಠೆ. ಖ[illegible] ಮಾತ್ರ ತುಂಬ. ವಾದ ಸ್ಪರ್ಧೆ[illegible]ಯ. ಕೆಲ ಮಿತ್ರರು ನಿಮ್ಮ ಕಾ[illegible]ತುಂಬ ಪ್ರೋತ್ಸಾಹ ಕೊಡುವರು. ಪ್ರ[illegible]ದಿ ಕಾರ್ಯಗಳು ನಿರ್ವಿಘ್ನ. ಉತ್ತರಾಭಾದ್ರೆಯ ೪ ನೆ ಮತ್ತು ರೇವತಿಯ ಮೊದಲ ೩ ಚರ[illegible] ಸ್ವಲ್ಪ ತೊಂದರೆಯಾಗಬಹುದು. ತಾ[illegible] ೨೪, ೨೬, ಅನುಕೂಲ.

ನಿಸರ್ಗದ ಚೆಲುವು

ಗಿರಿಕಂದರ ಹಸಿರು ಬಯಲು
ಝರಿ ತೊರೆಕೆರೆ ಬರೀ ಹುಯಿಲು
ಇಲ್ಲ ಮನುಜ ವಾಸವು.
ಅನಿಸದು ನನಗಿಲ್ಲಿ ಗೆಲುವು
ಜನರೆ ಇರದ ಹಾಳು ಚೆಲುವು
ಹೆಣಕೆ ಬರೆದ ವೇಷವು.

— ವಿ. ಜಿ. ಭಟ್ಟ

ಕಾರ್ಲೊ ಬ್ರಾಸ್ಕಿ



ಕಾರ್ಲೊ ಬ್ರಾಸ್ಕಿ ಫರಿನೆಲ್ಲಿ ನೇಪಲ್ಸಿನವನು. ಅವನ ಕಾಲ ೧೭೦೫–೧೭೮೨. ಅವನು ಹುಡುಗನಾಗಿದ್ದಾಗಲೇ ಜಗದ್ವಿಖ್ಯಾತನಾದ ಸಂಗೀತಗಾರನೆನಿಸಿದ್ದ. ೧೭೩೪ ರಲ್ಲಿ ಅವನು ಲಂಡನ್ನಿಗೆ ಹೋದಾಗ ಅವನನ್ನು ಮುತ್ತಿದ ಸ್ತ್ರೀ ಪುರುಷರ ಸಂಖ್ಯೆ ಅದ್ಭುತವಾಗಿತ್ತು. ಅವನ ಕೀರ್ತಿ ಸ್ಪೇನಿನ ಆಸ್ಥಾನವನ್ನು ಮುಟ್ಟಿತು. ಆಗ ಅಲ್ಲಿ ೫ ನೆಯ ಫಿಲಿಪ್ ದೊರೆ ಆಳುತ್ತಿದ್ದ. ಅವನು ಒಂದು ತರದ ರೋಗದಿಂದ ನರಳುತ್ತಿದ್ದನು. ಈ ಸಂಗೀತ ಸುಂದರನು ೧೦ ವರ್ಷಗಳ ವರೆಗೆ ರಾಜನಿಗೆ ಸಂಗೀತದ ಸವಿಯುಣಿಸಿ ಅವನ ರೋಗವನ್ನು ಗುಣಪಡಿಸಿದನು. ಅವನು ೬ ನಿಮಿಷಗಳ ವರೆಗೆ ಒಂದೇ ಮಟ್ಟದಲ್ಲಿ ತನ್ನ ಸ್ವರವನ್ನು ಎಳ್ಳಷ್ಟೂ ಹೆಚ್ಚು ಕಡಿಮೆಯಾಗದಂತೆ ಹಿಡಿತದಲ್ಲಿಟ್ಟು ಹಾಡಬಲ್ಲವನಾಗಿದ್ದನು!



ಬ್ರಿಟಿಶ ಮುಖ್ಯ ಮಂತ್ರಿ ಸದನದಲ್ಲಿ ಕಾಮನ್‌ವೆಲ್ತ ಮುಖ್ಯ ಮಂತ್ರಿಗಳು: ನಿಂತವರು (ಎಡದಿಂದ) ಕ್ರಿಪ್ಸ, ಲೆಸ್ಟರ ಪಿಯರ್ಸನ್ (ಕಾನಡಾ), ಲಿಯಾಕತ್ ಅಲಿಖಾನ್ (ಪಾಕಿಸ್ತಾನ), ಪೀಟರ ಫ್ರೇಸರ್ (ನ್ಯೂಝೀಲ್ಯಾಂಡ್) ಗ[illegible]) ಸರ್ ಸ್ಟಾಫರ್ಡ್ ಮಾಲನ್ (ದ. ಆಫ್ರಿಕೆ), ಡಿ. ಎಸ್. ಸೇನಾನಾಯಕೆ (ಸಿಂಹಳ), ಪಿ. ಜೆ. ನೋಯೆಲ ಬೇಕರ್ (ಬ್ರಿ. ಮಂತ್ರಿ), ಕುಳ್ಳಿತಿರುವವರು: ಡಾ. ಡೇನಿಯಲ್ ಪಂ. ಜವಾಹರಲಾಲ ನೆಹರೂ, ಲೇಡಿ ಕ್ರಿಪ್ಸ್, ಶ್ರೀಮತಿ ಮಾಲನ್, ಮುಖ್ಯ ಮಂತ್ರಿ ಆ್ಯಟ್ಲಿ, ಬೇಗಮ ಲಿಯಾಕತ್ (ಆಸ್ಟ್ರೇಲಿಯಾ). ಹೆಚ್ಚಿನವರು: ಶ್ರೀಮತಿ ಆ್ಯಟ್ಲಿ, ಕಿಂಡಿಯಸ್ಅಲಿ, ಜೋಸೆಫ್ ಚೀಫ್ಲಿ

ನಗರ ರಾಜ್ಯಗಳು

ಭಾಷಾನ್ವಯ ಪ್ರಾಂತಗಳ ಪ್ರಶ್ನೆಯನ್ನು ಚರ್ಚಿಸುತ್ತ ನಾನು ಈ ಕೆಳಗಿನ ಸೂಚನೆ ಮಾಡಿದ್ದೆ:

‘‘ಹತ್ತು ಲಕ್ಷಕ್ಕಿಂತ ಹೆಚ್ಚು ಜನಸಂಖ್ಯೆಯುಳ್ಳ ಪ್ರತಿಯೊಂದು ನಗರವನ್ನೂ ಸ್ವಾಯತ್ತ ಘಟಕವನ್ನಾಗಿ ಮಾಡಬೇಕು. ಅದರ ನಗರ ಸಭೆಯೇ ಅದರ ಸ್ಥಾನಿಕ ಸರಕಾರವಾಗಿರಬೇಕಲ್ಲದೆ ಅದಕ್ಕೆ ವಿಶಿಷ್ಟ ವಿಷಯಗಳ ಬಗ್ಗೆ ಕಾಯದೆ ಮಾಡುವ ಅಧಿಕಾರವಿರಬೇಕು. ಶಿಷ್ಟ ಶಾಸನಾಧಿಕಾರಗಳು ಕೇಂದ್ರ ಸರಕಾರಕ್ಕೆ ಸೇರತಕ್ಕದ್ದು. (ಹರಿಜನ, ಮಾರ್ಚ ೧೬, ೧೯೪೬)

ಈ ಸೂಚನೆಯ ಸೂಕ್ತತೆಯ ಬಗ್ಗೆ ಸಂಶಯಗಳನ್ನೆತ್ತಲಾಗಿದೆ. ಶ್ರೀಮತಿ ಪ್ರೇಮಾಬೆನ್ ಕಂಟಕರೊಮ್ಮೆ ಲಕ್ಷಾಂತರ ಜನವಸತಿಯುಳ್ಳ ನಗರಗಳಿರುವದು ಕ್ಷೇಮವೇ ಎಂದು ಕೇಳಿದ್ದರು. ಮುಂಬಯಿ, ಮದ್ರಾಸ, ಕಲಕತ್ತ ಮೊದಲಾದ ನಗರಗಳನ್ನು ಒಡೆದು ಪರಸ್ಪರ ಸುದೂರವಾಗಿರುವ ಸಣ್ಣ ಸಣ್ಣ ನಗರಗಳಾಗಿ ಮಾರ್ಪಡಿಸುವದು ಒಳ್ಳೆಯದಲ್ಲವೆ?

ಮುಂಬಯಿಯ ಎಲ್‌ಫಿನ್‌ಸ್ಟನ್ ಕಾಲೇಜಿನ ಪ್ರೊ. ಎಚ್. ಕೆ. ಪರಾಂಜಪೆಯವರು ಇನ್ನೂ ಕೆಲ ಪ್ರಶ್ನೆಗಳನ್ನೆತ್ತಿದ್ದಾರೆ.

‘‘ನಗರ ಮತ್ತು ಗ್ರಾಮ ಪ್ರದೇಶಗಳು ಸೇರಿಯೆ ಒಂದು ಪೂರ್ಣಪ್ರದೇಶವಾಗುತ್ತದೆ. ಅವೆರಡನ್ನೂ ಬೇರ್ಪಡಿಸುವದರಿಂದ ಸಾಮಾಜಿಕ ಮತ್ತು ಆರ್ಥಿಕ ಅವ್ಯವಸ್ಥೆಯಾಗಲಾರದೆ?

‘‘ಆಧುನಿಕ ಸಾಮಾಜಿಕ ಯೋಜನೆಯಲ್ಲಿ ಪ್ರತಿಯೊಂದು ವಲಯದಲ್ಲಿ ನಗರ ಮತ್ತು ಗ್ರಾಮ ಜನತೆಯ ಸಮತೂಕವುಳಿಯುವಂತೆ ಪಟ್ಟಣಗಳನ್ನು ಯೋಜಿಸುವದು ಅವಶ್ಯ. ಆಯಾ ಪ್ರದೇಶದಲ್ಲಿ ನಗರ ಮತ್ತು ಹಳ್ಳಿಗಳೆರಡೂ ಇದ್ದರೆ ಮಾತ್ರವೇ ಅದರ ಸ್ವಯಂಪೂರ್ಣತೆ ಬಹಳ ಮಟ್ಟಿಗೆ ಸಾಧ್ಯವಾಗುವದು. ದೊಡ್ಡ ಪಟ್ಟಣಗಳ, ಉದಾಹರಣೆಗಾಗಿ ಮುಂಬಯಿಯ, ತೀಕ್ಷ್ಣವಾದ ಸಾಮಾಜಿಕ ಸಮಸ್ಯೆಗಳನ್ನು ಪರಿಹರಿಸಲು ಯೋಗ್ಯ ಉಪಾಯವೆಂದರೆ, ಹಾನಿಯಿಲ್ಲದೆ ಅಲ್ಲಿಂದ ಕಿತ್ತು ಬೇರೆ ಕಡೆ ಒಯ್ದು ಸ್ಥಾಪಿಸಬಹುದಾದ ಉದ್ದಿಮೆಗಳನ್ನೂ ಕಚೇರಿಗಳನ್ನೂ ಸ್ಥಳಾಂತರಿಸುವದು. ಆದರೆ ನೀವು ಹೇಳಿದ ಮಾರ್ಗವನ್ನು ಅನುಸರಿಸಿದರೆ, ಅಂಥ ಪರಿಹಾರೋಪಾಯಕ್ಕೆ ಅವಕಾಶವಿಲ್ಲ. ಈಗಿರುವ ಅಸ್ವಾಭಾವಿಕ, ಅನಪೇಕ್ಷಣೀಯ ನಿಬಿಡತೆ ಶಾಶ್ವತವಾದೀತು.

“ನೀವು ಸೂಚಿಸಿದ ಪರಿಹಾರೋಪಾಯದಿಂದ ಗ್ರಾಮಮಯ ಪ್ರಾಂತಗಳ ಕರ ಕಂದಾಯಗಳು ಸೊರಗುವವು. ಆಯಾ ಪ್ರದೇಶಗಳ ವ್ಯಾಪಾರ ವ್ಯವಹಾರಗಳು ನಗರಗಳಲ್ಲೇ ಕೇಂದ್ರಿತವಾಗಿರುವುದರಿಂದ, ಕರದ, ಅದರಲ್ಲಿಯೂ ಪ್ರತ್ಯಕ್ಷ ಕರದ ಬಹುಭಾಗವನ್ನು ಅವೇ ಕೊಡುತ್ತವೆ. ಪ್ರತ್ಯೇಕ ನಗರ ರಾಜ್ಯಗಳೋ ಕೇಂದ್ರ ಸರಕಾರವೋ ಈ ಕರದ ಬಹ್ವಂಶವನ್ನು ಪಡೆದು, ಪ್ರಾಂತಗಳು, ಅರ್ಥಾತ್ ಗ್ರಾಮ ಪ್ರದೇಶಗಳು ಗತಿಗೇಡಿಗಳಾಗುವವು. ಇದನ್ನು ನಿವಾರಿಸಲು ಪ್ರಾಂತಗಳಿಗೆ ಯಾವುದಾದರೊಂದು ಬಗೆಯ ನಿಶ್ಚಿತ ಸಹಾಯಧನವನ್ನು ಕೊಡಲು ಪ್ರಯತ್ನಿಸಿದರೆ, ಅವುಗಳಿಗೆ ತಮ್ಮ ಉತ್ಪನ್ನವನ್ನು ಪ್ರಸಂಗ ಬಂದಂತೆ ಹೆಚ್ಚು ಕಡಿಮೆ ಮಾಡಿಕೊಳ್ಳಲು ಅವಕಾಶವಿಲ್ಲದೆ ಹೋಗುವದು; ಇಲ್ಲವೆ ಅವುಗಳು ಕೇಂದ್ರ ಸರಕಾರದ ಕರ ಧೋರಣೆಗೆ ಅಧೀನವಾಗಿ ಬಾಳಬೇಕಾಗುವದು. ಇದರಿಂದ ಸಂಯುಕ್ತ ರಾಜ್ಯ ಘಟನೆಯನ್ವಯ ನ್ಯಾಯವಾಗಿ ಅವುಗಳಿಗೆ ಬೇಕಾದ ಸ್ವಾಯತ್ತತೆ ಕಡಿಮೆಯಾಗುವದು.

“ಇದೂ ಅಲ್ಲದೆ ಈ ನಗರಗಳನ್ನು ಹೀಗೆ ಬೇರ್ಪಡಿಸಿದರೆ, ಪ್ರಾಂತಗಳು ಸ್ವಾಭಾವಿಕವಾಗಿ ತಮ್ಮ ವ್ಯಾಪಾರ ವ್ಯವಹಾರಗಳನ್ನು ಪ್ರಾಂತದೊಳಗೇ ಇರುವ ನಗರಗಳ ಕಡೆ ಹೊರಳಿಸತೊಡಗುವವು. ಸ್ವಾಭಾವಿಕ. ಮಾರ್ಗದಿಂದ ಹೀಗೆ ಬೇರೆ ಕಡೆ ವ್ಯಾಪಾರವನ್ನು ಹೊರಳಿಸಿದರೆ ಸಹಜವಾಗಿ ಇಡಿ ಸಮಾಜಕ್ಕೆ ಹಾನಿಯುಂಟು.

“ಹೀಗೆ ಹೊಸತಾಗಿ ಬೆಳೆದ ನಗರಗಳ ಜನಸಂಖ್ಯೆ ಹತ್ತು ಲಕ್ಷಕ್ಕೆ ಮೀರಿದರೆ ಅವುಗಳ ಸ್ಥಾನಮಾನವೇನು? ಮುಂದೆಯೂ ನಿಮ್ಮ ನಿಯಮವನ್ನು ಅವಕ್ಕೆ ಅನ್ವಯಿಸುತ್ತ ಹೋಗಬೇಕೆ? ಇನ್ನು ಹೀಗೆ ಬೇರ್ಪಟ್ಟ ನಗರದ ಜನಸಂಖ್ಯೆ ಕಡಿಮೆಯಾದರೆ ಆಗೇನು ಮಾಡಬೇಕು?

“ಮೂಲಶೋಧನೆ ಮಾಡಿದರೆ, ವಿಶಿಷ್ಟ ಪ್ರದೇಶಗಳಲ್ಲಿರುವ ನಗರಗಳ ನಿವಾಸಿಗಳು ಆ ಪ್ರದೇಶದ ಜನರೊಡನೆ ಬೆರೆತು ಬಾಳಲು ಸಿದ್ಧರಿಲ್ಲದೆ, ಅವರಿಗೆ ಹೆದರುತ್ತಾರೆಂಬುದೀಗ ಈ ಸಮಸ್ಯೆಯುಂಟಾಗಲು ಕಾರಣ. ನಮ್ಮ ದೇಶದ ವ್ಯಾಪಾರ ವ್ಯವಹಾರಗಳು ಕೆಲ ವಿಶಿಷ್ಟ ಜಾತಿಗಳ ಕೈಯಲ್ಲಿ, ಅದಕ್ಕಿಂತಲೂ ಹೆಚ್ಚಿನ ಮಾತೆಂದರೆ ವಿಶಿಷ್ಟ ಪ್ರದೇಶದ ಜನರ ಕೈಯಲ್ಲಿ, ಸಿಕ್ಕಿಹೋಗಿರುವ ಕಾರಣ, ಆ ಪ್ರದೇಶಗಳ ಜನರು ನಮ್ಮ ವ್ಯಾಪಾರ ವ್ಯವಹಾರ ಕೇಂದ್ರಗಳಾದ ನಗರಗಳಲ್ಲಿ ಬಹುಸಂಖ್ಯೆಯಲ್ಲಿ ವಾಸಿಸಿಕೊಂಡಿರುವದು ನಿಜ. ಎಲ್ಲ ನಗರಗಳಲ್ಲಿಯೂ ಮಾರವಾಡಿ, ಗುಜರಾಥಿ, ಸಿಂಧಿ ಮೊದಲಾದ ಜನರ ಸಾಕಷ್ಟು ವಸತಿಯಿದ್ದು ಅವರನ್ನು ಹೊರಗಟ್ಟಲು ಈ ವರೆಗಂತೂ ವಿಶೇಷ ಪ್ರಯತ್ನಗಳಾಗಿಲ್ಲ. ಆದರೆ ಈ ವ್ಯಾಪಾರಿ ಜಾತಿಗಳು ಆ ಪ್ರದೇಶದ ಜನರಲ್ಲಿ ವಿಶ್ವಾಸದ ಅಭಾವವನ್ನು ಪ್ರದರ್ಶಿಸಿದರೆ ಮತ್ತು ನಗರ ಭಾಗಗಳನ್ನು ಪ್ರತ್ಯೇಕಿಸಬೇಕೆಂದು ಬೇಡತೊಡಗಿದರೆ, ಆಗ ಪ್ರಾಂತಿಕ ಅಸೂಯೆಗಳು ಉದ್ರಿಕ್ತವಾಗಿ ಅಂಥ ಜಾತಿಗಳು ಬಂದು ನೆಲೆಸುವದನ್ನು ತಡೆಯಲು ಪ್ರಯತ್ನಗಳಾಗುವದು ನಿಶ್ಚಯ. ಇಂಥ ಪರಿಣಾಮವನ್ನು ಯಾರೂ ಬಯಸಲಿಕ್ಕಿಲ್ಲೆಂದು ನನ್ನ ನಂಬಿಕೆ.

“ಈ ಸಮಸ್ಯೆಗಿರುವ ಒಂದೇ ಉಪಾಯವೆಂದರೆ, ಜನರು ಹೆಚ್ಚು ಪರಿವರ್ತನಶೀಲತೆಯನ್ನು ತೋರಿಸಿ, ತಾವು ವಾಸಿಸುತ್ತಿರುವ ಪ್ರದೇಶದವರೊಡನೆ ಬೆರೆತು ಬಾಳುವದೆಂದು ನನ್ನ ಅಭಿಪ್ರಾಯ. ತಾನು ಹುಟ್ಟಿದ ಜಾತಿಯನ್ನೇ ಬಿಗಿಯುವದು ಹೇಗೆ. ಯೋಗ್ಯವಲ್ಲವೊ, ತನ ಸಾಮಾನ್ಯ ಜೀವನದ ಬಗ್ಗೆ ನಿರ್ಣಯಿಸುವಲ್ಲಿ ಅದಕ್ಕೆ ಹೇಗೆ ಮಹತ್ವವಿಲ್ಲವೊ, ಹಾಗೆಯೆ ತನ್ನ ಮೂಲ ಪ್ರಾಂತವೂ ಮಹತ್ವದ್ದಲ್ಲವೆಂದಾಗಬೇಕು. ಮದ್ರಾಸಿನಲ್ಲಿ ವಾಸಿಸುವ ಸಿಂಧೀ ವ್ಯಾಪಾರಿ ಮದ್ರಾಸಿಯೆ ಆಗಬೇಕು, ಮುಂಬಯಿಯಲ್ಲಿರುವ ಮಾರವಾಡಿ ಮಹಾರಾಷ್ಟ್ರೀಯನೇ ಆಗಬೇಕು. ಈ ಬಹುಭಾಷಾ ನಗರಗಳನ್ನು ಬೇರ್ಪಡಿಸುವ ಮೂಲಕವಲ್ಲ, ಆದರೆ ಸುತ್ತಮುತ್ತಲಿನ ಪ್ರದೇಶಗಳೊಡನೆ ಅವನ್ನು ಎರಕಗೊಳಿಸುವದರಿಂದಲೇ ನಾವೀ ಸಮಸ್ಯೆಯನ್ನು ಬಿಡಿಸಬಲ್ಲೆವು. ಇತರ ಉಪಾಯಗಳು ತತ್ಕಾಲಕ್ಕೆ ಅನುಕೂಲವೆಂದು ತೋರಿದರೂ ಪರಿಣಾಮದಲ್ಲಿ ದ್ವೇಷಾಸೂಯೆಗಳನ್ನು ಉಗ್ರಗೊಳಿಸುವುದೇ ಸರಿ.”

ಶ್ರೀ ಪ್ರೇಮಾಬೆನ್ ಕಂಟಕ್ ಮತ್ತು ಪ್ರೊ. ಪರಾಂಜಪೆಯವರ ಕೆಲ ಅಭಿಪ್ರಾಯಗಳನ್ನು ಸ್ವೀಕರಿಸುವುದರಲ್ಲಿ ನನ್ನದೇನೂ ಅಭ್ಯಂತರವಿಲ್ಲ.

ಉದಾ– ದೊಡ್ಡ ನಗರಗಳನ್ನು ಮುರಿದು ವಿಶಾಲತರ ಪ್ರದೇಶಗಳಲ್ಲಿ ಹಂಚಬೇಕು ಮತ್ತು ಪ್ರತಿಯೊಂದೆಡೆಯಲ್ಲೂ ಬಹಳ ಮಟ್ಟಿಗೆ ಸ್ವಯಂಪೂರ್ಣತೆಯಿರುವಂತೆ ಪಟ್ಟಣಗಳನ್ನು ರಚಿಸಬೇಕು ಎಂಬುದನ್ನು ನಾನು ಒಪ್ಪುತ್ತೇನೆ. ಸುಮಾರು ಫೆಬ್ರುವರಿ ೨ರ ‘ಹರಿಜನ’ದಲ್ಲಿ ನಾನು ಹೀಗೆ ಬರೆದಿದ್ದೆ:

‘‘ಸರಕಾರ ಮತ್ತು ನಗರಸಭೆಗಳು ಅರಿತುಕೊಳ್ಳಬೇಕಾದ ಮತ್ತೊಂದು ಮುಖ್ಯ ಸಂಗತಿಯೆಂದರೆ, ಮುಂಬಯಿಯನ್ನು ೨ ನೆಯ ಲಂಡನ್ ಇಲ್ಲವೆ ೨ ನೆಯ ನ್ಯೂಯಾರ್ಕನ್ನಾಗಿ ಮಾಡಬೇಕೆಂಬ ಅಸಂಬದ್ಧ ಆಸೆ ಕೌಶಲದಿಂದ ತಯಾರಿಸಿದ ಬೃಹನ್ಮುಂಬಯಿಯ ಯೋಜನೆ ನಮಗೆ ಬೇಕಾದುದಲ್ಲ; ಮುಂಬಯಿಯನ್ನು ಪರಸ್ಪರ ೫೦ ರಿಂದ ೧೦೦ ಮೈಲುಗಳ ಅಂತರವಿರುವ ೧೫–೨೦ ಪಟ್ಟಣ[illegible] ರುವ ಪುಟ್ಟ ಪಟ್ಟಣಗಳಿಗಾಗಿ ತಯಾರಿಸಿದ ಯೋಜನೆ.

ಅದರಲ್ಲಿ ನಾನು ನನ್ನ ಸಲಹೆಗೆ ಸುದೀರ್ಘವಾಗಿ ಕಾರಣ ಕೊಟ್ಟಿದ್ದೆ. ಆದರೆ ಅದು [illegible]ವಾಗಿ ವ್ಯವಹಾರ್ಯವೆನಿಸುವ ಸೂಚನೆಯಲ್ಲ ಎಂಬುದನ್ನು ಅರಿತುಕೊಳ್ಳಬೇಕು. [illegible]ರುದ್ಧವಾಗಿ, ನಿರಾಶ್ರಿತರ ಪಲಸೆಯಿಂದ ನಗರಗಳು ಮೊದಲಿಗಿಂತ ಹೆಚ್ಚು ವಿಶಾಲತರವಾಗಿಯೂ ಜನಸಾಂದ್ರತೆಯುಳ್ಳವಾಗಿಯೂ ಆಗಿವೆ ಮತ್ತು ಸರಕಾರ ಅಪೇಕ್ಷಿಸಿದರೂ ಜನರನ್ನು ಅಲ್ಲಿಂದ ಚದುರಿಸುವುದು ದುಷ್ಕರ ಎಂಬುದು ದಿಲ್ಲಿಯ ಅನುಭವ ತೋರಿಸಿಕೊಡುತ್ತದೆ. ಅದುದರಿಂದ ಮಿಕ್ಕೆಡೆಗಳಲ್ಲಿ ನಗರಸ್ಥ ಜನರು ಹೋಗಿ ನೆಲಸುವಂತೆ ಮಾಡಲು ಅಲ್ಲಿ ಅನುಕೂಲ ಪರಿಸ್ಥಿತಿಯನ್ನು ಕಲ್ಪಿಸಿ ಕೊಡುವುದೊಂದೇ ದಾರಿ.

ಮುಂಬಯಿ ಇಲ್ಲವೆ ಮದ್ರಾಸನ್ನು ಪ್ರತ್ಯೇಕಿಸಬೇಕೆಂಬ ಬೇಡಿಕೆ ಅಪನಂಬಿಗೆಯ ಮೇಲೆ ನಿಂತಿದೆ ಮತ್ತು ಸರಿಯಾದ ಸಮಸ್ಯಾ ಪರಿಹಾರವೆಂದರೆ, ಮಿಕ್ಕ ಪ್ರಾಂತಗಳಿಂದ ಬರುವ ಜನರು ಹೊಸ ವಸತಿಸ್ಥಲದ ಜನರೊಡನೆ ಕಲೆಯುವ ಶಕ್ತಿಯನ್ನು ತೋರಬೇಕು. ಜಾತಿಯ ಪಿಡುಗು ಹೇಗೆ ತೊಲಗಬೇಕೋ ಹಾಗೇ ಭಾಷಾತ್ಮಕ ಅಥವಾ ಪ್ರಾಂತಿಕತೆಯ ಪಿಡುಗೂ ತೊಲಗಬೇಕು.

ಆದರೆ ಎರಡು ಕಡೆಯವರ ಮೇಲೂ ಹೊಂದಿಕೆಗೇಡಿತನದ ಆರೋಪವಿದೆ ಎಂಬುದನ್ನು ಗಮನದಲ್ಲಿಡುವುದು ಅವಶ್ಯಕ. ಒಬ್ಬ ಗುಜರಾತಿ ಅಥವಾ ಮಾರವಾಡಿ ಒಬ್ಬ ಮರಾಠಿಗ ಅಥವಾ ಮದ್ರಾಸಿಯೊಡನೆ ಕೂಡಿಕೊಂಡು ಹೋಗಲಾರದುದಕ್ಕೆ ಅವನ ಅನಿಚ್ಛೆಯಷ್ಟೇ ಕಾರಣವಲ್ಲ; ಮರಾಠಿಗ ಅಥವಾ ಮದ್ರಾಸಿಯೂ ತನ್ನವನೆಂದು ಅವನನ್ನು ಸ್ವಾಗತಿಸಲಾರದವನಾಗಿದ್ದಾನೆ. ಇಬ್ಬರೂ ಒಂದೇಪರಂಪರೆಯುಳ್ಳವರಾಗಿರುವುದೇ ಅದಕ್ಕೆ ಕಾರಣ. ಅದೆಂದರೆ, ಜಾತಿನಿಷ್ಠೆ. ಭಾಷಾಭೇದ ಸಂಪೂರ್ಣ ಸಂಪರ್ಕಕ್ಕೆ ಜಾತಿ ಭೇದದಷ್ಟು ಅಡ್ಡ ಬರುವುದಿಲ್ಲ. ತಂಜಾವೂರಿನ ಬ ಎಂಬವನು ತನ್ನ ಜಾತಿಯವನೆಂದು ಅ ಎಂಬ ಮರಾಠಿಗ ತಿಳಿದರೆ ಸಾಕು, ಮರಾಠಿಯ ಒಂದು ಶಬ್ದವನ್ನೂ ಅರಿಯದ ಆ ತಂಜಾವೂರಿನವನೊಡನೆ ಅವನು ಸಮಾನಸ್ಕಂಧತೆಯಿಂದ ಸಂಪರ್ಕವನ್ನಿಟ್ಟುಕೊಳ್ಳುತ್ತಾನೆ; ಆದರೆ ಅವನು ಬೇರೆಯ ಜಾತಿಯ ಮರಾಠಿಗನೊಡನೆ ಹಾಗೆ ಮಾಡಲೊಪ್ಪನು. ಇತರ ಭಾಗಗಳ ಜನರೂ ಹೀಗೇ ಇದ್ದಾರೆ.

ಎರಡನೆಯದಾಗಿ ಒಮ್ಮಿಂದೊಮ್ಮೆ ಒಂದು ಹೊಸ ಪ್ರಾಂತದೊಡನೆ ಸಮರಸವಾಗುವುದು ಅಸಾಧ್ಯ. ಕೆಲವೊಮ್ಮೆ ಈ ಸಾಮರಸ್ಯ ಕಾರ್ಯಗತಿ ಪೂರ್ಣವಾಗಲು ೪ ಅಥವಾ ಇನ್ನೂ ಹೆಚ್ಚು ತಲೆಮಾರುಗಳಾಗಬೇಕು. ಎಷ್ಟೋ ವೇಳೆ ಬಹಳ ಕಾಲ ನಿಂತ ನಂತರವೇ ಒಬ್ಬ ವಲಸೆಗಾರನು ಆ ಪ್ರಾಂತದ ಸ್ಥಿರನಿವಾಸಿಯಾಗುವ ಆಲೋಚನೆ ಮಾಡಲು ಪ್ರಾರಂಭಿಸುತ್ತಾನೆ. ಆ ವಿಚಾರ ಬೆಳೆಯಲು ಮತ್ತೆ ಸಮಯಬೇಕು. ಅವನು ಸ್ಥಾಯಿಯಾಗಿ ಅಲ್ಲಿ ನೆಲೆನಿಲ್ಲುವಷ್ಟರಲ್ಲಿ ತನ್ನ ಪ್ರಾಂತದ ಜನರ ಒಂದು ಗುಂಪು ಹತ್ತಿರದಲ್ಲೇ ಪ್ರತ್ಯೇಕವಾಗಿ ನೆಲಸಿದ್ದನ್ನು ಕಾಣುತ್ತಾನೆ. ತಮ್ಮ ಹಿರಿಯರು ಅನೇಕ ತಲೆಮಾರುಗಳ ಹಿಂದೆಯೇ ಸಂಯುಕ್ತ ಪ್ರಾಂತದಲ್ಲಿ ನೆಲೆಸಿದ್ದರೂ ಬಹುಶಃ ತಮಗೆ ಕಾಶ್ಮೀರೀ ಭಾಷೆ ಬರದಿದ್ದರೂ ಪಂಡಿತ ಜವಾಹರಲಾಲರಿಗೆ ತಾವು ಕಾಶ್ಮೀರಿಗಳೆಂಬುದನ್ನು ಮರೆಯಲು ಬರದು. ಕಾಶ್ಮೀರಿಗಳು ಸಂಯುಕ್ತ ಪ್ರಾಂತದಲ್ಲಿ ತಮ್ಮದೊಂದು ಪ್ರತ್ಯೇಕ ಜಾತಿಯನ್ನು ಮಾಡಿಕೊಂಡದ್ದೇ ಹೀಗಾಗಲು ಕಾರಣ. ಜಾತೀಯತೆಯ ಬುದ್ಧಿ ಹೋಟು ಹೋದರೆ ಪ್ರಾಂತೀಯತಾಭಾವನೆ ತಾನಾಗಿಯೇ ಹೋಗುವುದೆಂಬುದೇ ಇದರ ನೀತಿ.

ಇಂದಿನ ಪ್ರಾಂತೀಯತೆಯ ಮತ್ತು ಭಾಷಾವಾರ ಪ್ರಾಂತರಚನೆಯ ಆಂದೋಲನ, ವಾದವಿವಾದಗಳು ಏರುವುದಕ್ಕೆ ಬಹಳ ಮೊದಲೇ ನಾನು ಪ್ರತ್ಯೇಕ ನಗರರಾಜ್ಯಗಳ ನಿರ್ಮಾಣವನ್ನು ಸೂಚಿಸಿದ್ದೆ. ಜನಸಂಖ್ಯೆ ೧೦ ಲಕ್ಷಕ್ಕಿಂತ ಹೆಚ್ಚಿದ್ದು ಏಕಭಾಷಾತ್ಮಕ ಪ್ರದೇಶದಲ್ಲಿರುವ ಅಹಮ್ಮದಾಬಾದ್, ಕಾನ್ಪುರ, ದಿಲ್ಲಿ, ಪುಣೆ ಮುಂತಾದ ನಗರಗಳಿಗೂ ನನ್ನ ಸಲಹೆ ಅನ್ವಯಿಸುತ್ತದೆ. ಜನಸಂಖ್ಯಾಮಿತಿಯನ್ನು ಇನ್ನೂ ಕೆಳಗಿಳಿಸಬೇಕೆಂದರೂ ನನಗೆ ಅಭ್ಯಂತರವಿಲ್ಲ. ಇನ್ನು ಮುಂದೆ ಯಾವುದಾದರೊಂದು ನಗರ ಹೀಗೆ ಬೆಳೆದರೆ ಅದು ಈ [illegible] ಯೊಳಗೆ ಬರಬೇಕು. ಅದಕ್ಕೆ ಪ್ರತಿಯಾ[illegible] ಯಾವುದಾದರೊಂದು ನಗರ ಕ್ಷಯಿಸಿದರೆ ಅದನ್ನು ಪಕ್ಕದ ಪ್ರಾಂತದಲ್ಲಿ ಸೇರಿಸಿ [illegible] ಬಹುದು.

ಈಗಿದ್ದಂತೆ ಮುಂಬಯಿ ಪ್ರಾಂ[illegible] ಅವಿಭಕ್ತವಾಗಿ ಇರುವುದಕ್ಕೆ ನನ್ನ [illegible] ವಿರೋಧ ಇದರ ಅರ್ಥವಲ್ಲ. [illegible] ಮತ್ತು ಇತರ ಕಾರಣಗಳ [illegible] ತಂತಮ್ಮ ಕಚೇರಿಗಳು, ಶಾಸನ [illegible]ಗಳು, ವಸತಿಗೃಹಗಳು, [illegible] ಮುಂತಾದವುಗಳೊಡನೆ ಹೊಸ [illegible]ಗಳನ್ನು ಸ್ಥಾಪಿಸುವುದು ಬಹಳ [illegible] ಶ್ರೀ ಮನುಸುಭೇದಾರರು ಹೇಳಿದಂತೆ [illegible] ಯೊಂದು ಅಂಗವನ್ನು ದ್ವಿಗುಣ [illegible]ಗುತ್ತದೆ; ಆದ್ದರಿಂದ ಅದು [illegible] ವಾಗಿಲ್ಲ. ಅವು ಈ ಸ್ಥಿತಿಯಲ್ಲಿ [illegible] ತೆಯ ಯೋಜನೆಗಳೇ ಸರಿ. [illegible] ವಂತಿಕೆಯಿಂದ ಒಟ್ಟಿಗೆ ಮುಂದೆ [illegible] ಮತ್ತು ನಮ್ಮಲ್ಲಿಯ ಪ್ರತಿಯೊಬ್ಬನೂ [illegible] ಭೇದವನ್ನು ಗಣಿಸದೆ ಪ್ರತಿಯೊಂದು [illegible] ಪ್ರದೇಶವೂ ಅತಿ [illegible] ತೋರಬೇಕು. ಅದರ ಒಂದು [illegible] ಯನ್ನು ಪಡೆಯಲೇ ಬೇಕಾದಾಗ [illegible] ಪ್ರತ್ಯೇಕಿಸುವುದೇ ಉತ್ತಮ [illegible] ದು.

[illegible] — ಕಿ. [illegible]

ಆಹಾರ ಕೊರತೆ ಮತ್ತು ಕಾರ್ಖಾನೆಗಳು

[illegible]

[illegible] ನಾಗಿದೆ.

ಆಹಾರಧಾನ್ಯಗಳು ಪೂರೈಸ[illegible]ವಾಗಿ ಪರಿಣಮಿಸಿ ಪೂರ್ಣಾ[illegible] ಬೆಲ್ಲವೂ ಇದರಲ್ಲಿ ಮಹತ್ವದ ಸ್ಥಾನವ[illegible]ದಿದೆ ಮತ್ತು ಧಾನ್ಯಗಳ ಉತ್ಪಾದನೆ[illegible] ಬೆಲ್ಲ ಮತ್ತು ಸಕ್ಕರೆಯ ಪೂರೈಕೆ[illegible] ಅವಲಂಬಿಸುವದರಿಂದ ಕಾರ್ಖಾನೆ ಹುರಿಗಳು [illegible]ಯದಲ್ಲಿ ಮಹತ್ವದ ಪಾತ್ರವನ್ನು [illegible] ಬಲ್ಲವು.

ಸದ್ಯದಲ್ಲಿ ಸಕ್ಕರೆ ಮತ್ತು ಬೆಲ್ಲದ [illegible]ನೆಯ ಮುಖ್ಯಸಾಧನವು ಕಬ್ಬುಮಾತ್ರ [illegible] ಹಿಂದುಸ್ಥಾನದಲ್ಲಿ [illegible] ಯುವ ಸುಮಾರು ೪೦ ಲಕ್ಷ [illegible] ಭೂಮಿಯಲ್ಲಿ ಈಗ ಕಬ್ಬನ್ನು ಬೆಳೆ[illegible]ತ್ತದೆ. ಇವುಗಳಲ್ಲಿ ೧೦೦ ಕ್ಕೆ ೬೦ [illegible] ಭೂಮಿಯು ನೀರುಣಿಸುವ ಭೂ[illegible]. ಇದರ ಅರ್ಥವೇನೆಂದರೆ ಕಬ್ಬು [illegible] ಮತ್ತು ನೀರಾವರಿಯ ಭೂಮಿಗಳಲ್ಲಿ [illegible] ಚೆನ್ನಾಗಿ ಬೆಳೆಯುತ್ತದೆ. ಗೋಧಿ[illegible] ಧಾನ್ಯವನ್ನು ಬೆಳೆಯುವದಕ್ಕೆ ಇಂಥ [illegible]ದ ಭೂಮಿಗಳು ಬಹಳ ಉಪಯುಕ್ತ[illegible]ಸುವವು; ಅಲ್ಲದೆ ನೀರುಂಡ ಭೂಮಿ[illegible] ಕಬ್ಬು ಬೆಳೆಸುವದಕ್ಕಿಂತ ಎರಡು [illegible] ಧಾನ್ಯವನ್ನು ಬೆಳೆಯಬಹುದಾಗಿದೆ. [illegible] ಕ್ಷೇತ್ರದಲ್ಲಿ ೪೦ ಲಕ್ಷ ಟನ್ನ ಬೆಲ್ಲ [illegible] ಲಕ್ಷ ಟನ್ನ ಸಕ್ಕರೆ ಬರುತ್ತದೆ. [illegible] ಬಹಳ ಸ್ವಲ್ಪ ಅಂಶವನ್ನು ಬಿಟ್ಟು [illegible] ಬೆಲ್ಲ ಹಿಂದುಸ್ಥಾನದಲ್ಲಿಯೇ ಸುರಿಸ[illegible]ತ್ತದೆ. ಸದ್ಯದಲ್ಲಿ ಪ್ರತಿಯೊಬ್ಬರು [illegible] ಪೌಂಡು ಬೆಲ್ಲ ಮತ್ತು ಸಕ್ಕರೆಯನ್ನು [illegible] ತಿದ್ದು ಅದನ್ನು ೧೬ ಪೌಂಡಿಗೆ ಏರಿಸ[illegible] ಆಹಾರ ಶಾಸ್ತ್ರಜ್ಞರು ಅಭಿಪ್ರಾಯ[illegible]. ಇದಕ್ಕಾಗಿ ಮತ್ತೆ ೧೦ ಲಕ್ಷ ಎಕರೆ ಭೂಮಿ[illegible]ಯನ್ನು ಕಬ್ಬಿಗಾಗಿ ಉಪಯೋಗಿಸಬೇಕಾ[illegible]ವದು. ಹೀಗೆ ಮಾಡಿದ್ದಾದರೆ ಧಾನ್ಯದ [illegible]ದನೆಯು ಮತ್ತಷ್ಟು ಕಡಿಮೆಯಾಗುವದು.

ತಾಜಾ ಮಧುರ ರಸದಿಂದ ತಾಳೇ [illegible]ಗಳ ಬೆಲ್ಲ ಸಕ್ಕರೆ ಮತ್ತು ಕಾಕವಿ, ಜೋ[illegible] ಕಲ್ಲುಸಕ್ಕರೆ ಮೊದಲಾದ ಸಕ್ಕರೆಯ [illegible]

— ೧೫ ನೆಯ ಪುಟಕ್ಕೆ

ಮಕ್ಕಳಿಗಾಗಿ

ಸತೀಪ್ರಿಯ ಬೋರ

ಪರೀಕ್ಷೆಯು ಮುಗಿದ ನಂತರ ಬಿಸಿಲು ಕಾಲದ ರಜೆಯನ್ನು ಕಳೆಯುವುದಕ್ಕಾಗಿ ನನ್ನ ಹಳ್ಳಿಗೆ ಹೊರಟೆನು. ನನ್ನ ಹಳ್ಳಿ ಪಟ್ಟಣದಿಂದ ಬಲು ದೂರ, ಆದರೂ ಪ್ರಕೃತಿ ಸೌಂದರ್ಯದ ನೆಲೆವೀಡು. ವಸಂತಋತು ನನ್ನ ಹಳ್ಳಿಗೆ ಹೆಜ್ಜೆಯಿಕ್ಕುತ್ತಿತ್ತು. ಗಿಡಗಳು ಚಿಗುರಿ ತಮ್ಮ ತಳಿರ ತೋರಣಗಳಿಂದ ಊರನ್ನು ಅಲಂಕರಿಸಿದ್ದವು. ಕುಕಿಲ್ವ ಕೋಗಿಲೆಯು ಆಗಲೇ ಪಂಚಮಸ್ವರದಲ್ಲಿ ಹಾಡಲು ಮೊದಲು ಮಾಡಿತ್ತು. ಸಂಧ್ಯಾಕಾಲವಂತೂ ನನ್ನ ಊರಿನಲ್ಲಿ ಬಲು ಸೊಗಸು. ಪ್ರಾತಃ ಕಾಲದ ಬಾಲಸೂರ್ಯನ ಕಿರಣಗಳು ತರು ಲತೆಗಳ ಮೇಲೆ ಬಿದ್ದಾಗ ಪ್ರಕೃತಿಯು ಸುವರ್ಣವರ್ಣದ ಉಡಿಗೆಯನ್ನು ಉಟ್ಟಂತೆ ತೋರುತ್ತಿತ್ತು. ಹೆಚ್ಚು ಹೇಳುವುದಾದರೆ ನನ್ನ ಊರಿನಲ್ಲಿ ವರ್ಡ್ಸ್‌ವರ್ತನಂತಹ ಕವಿಯು ಹುಟ್ಟಿದ್ದರೆ, ಆ ಮಹಾಶಯನು ತನ್ನ ಕಾವ್ಯದಲ್ಲಿ ಎಷ್ಟು ವಸ್ತುವನ್ನು ನನ್ನ ಊರಿನಿಂದ ಬಳಸುತ್ತಿದ್ದನೊ; ಇವೆಲ್ಲಕ್ಕಿಂತಲೂ ನನ್ನ ಊರಿನ ಮೇಲೆ ನನಗೆ ಪ್ರೀತಿಯಿರಲು ನಮ್ಮ ಮನೆಯಾಳು ಬೋರನೇ ಕಾರಣ.

ನಾನು ಊರಿಗೆ ಹೋದಾಗ ಬೋರ ನನಗೋಸ್ಕರ ಬಸ್ ಸ್ಟಾಂಡಿನಲ್ಲಿ ಬಂದುಕಾದಿದ್ದ. ನಾನು ಇಳಿದ ತಕ್ಷಣವೇ ಅವನ ಮನಸ್ಸು ಹೊರಗೆ ಹೋಗಿದ್ದ ಮಗುವನ್ನು ಕಂಡ ಮಾತೆಯಂತೆ ಸಂತಸಗೊಂಡಿತು. ನನ್ನನ್ನು ನೋಡಿ ಮೈಸವರಿ ಮುತ್ತಿಟ್ಟುಕೊಂಡು "ಏನವ್ವಾ ಈಸೊತ್ತು?" ಎಂದು ಕೇಳಿದ. ಅಂದು ಬಸ್ ಎರಡು ಗಂಟೆ ತಡವಾಗಿ ಬಂದಿತ್ತು. ಬಸ್ ನಿಲ್ಲುವ ಸ್ಥಳದಿಂದ ನಮ್ಮ ಊರಿಗೆ ನಾಲ್ಕು ಮೈಲು ದೂರವಿತ್ತು. ಬೋರನೂ ನಾನೂ ನಡೆದುಕೊಂಡೇ ಬರುತ್ತಿದ್ದೆವು. ದಾರಿಯ ಇಕ್ಕಡೆಗಳಲ್ಲೂ ಹೊಂಗೆಯು ಚಿಗುರಿ ತಂಗಾಳಿಯನ್ನು ಬೀಸುತ್ತಿತ್ತು. ಗದ್ದೆಗಳಲ್ಲಿ ಬತ್ತದ ಪೈರು ಮೇರೆಮೀರಿ ಬೆಳೆದಿತ್ತು. ದಾರಿಯುದ್ದಕ್ಕೂ ಬೋರನಿಗೆ ನನ್ನ ಓದಿನ ವಿಚಾರವೇ. ಬೋರ "ಅವ್ವಾ ನೀವು ಚಂದಾಕ ಓದಿ ಪೋಲೀಸ ಕೆಲಸದಾಗ ಸೇರಬೇಕು ನನ್ನವ್ವ" ಎಂದ. ಬೋರ ಈರೀತಿಯಾಗಿ ಏಕೆ ಅಂದನೋ ನನಗೆ ಬಿಡಿಸಲಾರದ ಪ್ರಶ್ನೆಯಾಯಿತು. ಅದಕ್ಕೆ ನಮ್ಮ ಹಳ್ಳಿಗೆ ಪೋಲೀಸಿನವರು ಬಂದು ಏನೂ ತಿಳಿಯದ ಮುಗ್ಧರಾದ ಹಳ್ಳಿಯವರ ಮೇಲೆ ನಡೆಸುತ್ತಿದ್ದ ದೌರ್ಜನ್ಯವೇ ಕಾರಣವಿರಬಹುದು.

ಬೋರ ನಾನು ಪ್ರೈಮರಿ ಸ್ಕೂಲಿನಲ್ಲಿ ಓದುತ್ತಿದ್ದಾಗ ನಮ್ಮ ಮನೆಯಲ್ಲಿ ಕೆಲಸಕ್ಕೆ ಸೇರಿದ. ಆಗ ಬೋರನಿಗೆ ಇಪ್ಪತ್ತೈದು ಅಥವಾ ಇಪ್ಪತ್ತಾರು ವರ್ಷವಿದ್ದಿರಬಹುದು. ಸುಂದರನಾಗಿಲ್ಲದಿದ್ದರೂ ಕುರೂಪಿಯಾಗಿರಲಿಲ್ಲ. ಬೋರ ಮದುವೆಯಾಗಿದ್ದ ಹೆಂಡತಿ ತಕ್ಕಷ್ಟು ಚೆಲುವೆಯಾಗಿದ್ದಳು. ಹೆಸರುಚೆನ್ನಿ. ಚೆನ್ನಿಗೆ ಹೆಸರು ಅನ್ವರ್ಥವಿದ್ದಂತೆ ತೋರುತ್ತಿತ್ತು. ಅವಳು ಮಾಡುತ್ತಿದ್ದ ಯಾವ ಕೆಲಸವನ್ನಾಗಲಿ, ಮನಸ್ಸಿಗೆ ಒಪ್ಪುವಂತೆ ಮಾಡುತ್ತಿದ್ದಳು. ನಮ್ಮ ಮನೆಯ ಬಟ್ಟೆ ಒಗೆಯುವುದೂ ಮುಸುರೆ ಕಸ ತೆಗೆಯುವುದೂ ಅವಳಿಗೆ ಸೇರಿದ್ದವು. ಬೋರನಿಗೆ, ಬೆಳಿಗ್ಗೆ ಎದ್ದು ಇದ್ದ ಎರಡು ಜೊತೆ ಎತ್ತುಗಳನ್ನು ಹೊರಗೆ ಕಟ್ಟುವುದು, ಹಿತ್ತಲಿನಲ್ಲಿದ್ದ ಹೂದೋಟಕ್ಕೆ ನೀರು ಹಾಕುವುದು, ದೇವರ ಪೂಜೆಗೆ ಹೂಗಳನ್ನು ತಂದಿರಿಸುವುದು ಇಷ್ಟು ಕೆಲಸ. ಇಷ್ಟು ಹೊತ್ತಿಗೆ ಚೆನ್ನಿಯು ಬೋರನಿಗಾಗಿ ರೊಟ್ಟಿಯೋ ದೋಸೆಯೋ ಮಾಡಿಕೊಂಡು ಕಾದಿರುವುದು. ಬೋರ ಮನೆಗೆ ಬಂದ ಮೇಲೆ ಇಬ್ಬರೂ ಸಂತೋಷವಾಗಿ ತಿನ್ನುವುದು. ತಿಂದು ಮುಗಿಸಿ ಬೋರ ಹೊಲಗಳ ಕಡೆ ಸುತ್ತಿ ಬರುವಷ್ಟರಲ್ಲಿ ಬಟ್ಟೆಗಳನ್ನು ಒಗೆದು ತಂದಿಟ್ಟು ಶುಚಿಯಾಗಿ ಅಡಿಗೆ ಮಾಡಿಟ್ಟುಕೊಂಡು ಚೆನ್ನಿ ಬೋರನಿಗಾಗಿ ಕಾದಿರುವಳು. ಅವನು ಬಂದ ಮೇಲೆ ಊಟಮಾಡಿ ಸ್ವಲ್ಪ ಹೊತ್ತು ಅವರು ಮಲಗುವರು. ಸಂಜೆ ಬೋರ ಆಕಳು ಎತ್ತುಗಳನ್ನು ಕೊಟ್ಟಿಗೆಯಲ್ಲಿ ಕಟ್ಟಿ ಅವಕ್ಕೆ ಹುಲ್ಲು ಹಾಕಿ ನಮ್ಮ ತಂದೆಯವರ ಹತ್ತಿರ ಮಾತನಾಡಲು ಹೋಗುವನು. ಚೆನ್ನಿಯು ನಮ್ಮ ತಾಯಿಯವರ ಹತ್ತಿರ ಹೂ ಕಟ್ಟಿಕೊಡುವುದರಲ್ಲೋ ಇಲ್ಲವೆ ನನ್ನ ತಂಗಿಯನ್ನು ಆಟವಾಡಿಸುವುದರಲ್ಲೋ ಕಾಲ ಕಳೆಯುವಳು. ಇದು ಬೋರ ಚೆನ್ನಿಯರ ದಿನಚರಿಯಾಗಿತ್ತು.

ಆದರೆ ಇಂದು ಬೋರ ಒಬ್ಬಂಟಿಗ. ಈ ಪ್ರಪಂಚದಲ್ಲಿ ಅವನವರೆಂಬವರು ಯಾರೂ ಇರಲಿಲ್ಲ. ದೇವರಿಗೆ ಇವರು ಈ ರೀತಿಯಾಗಿ ಬಾಳುವೆಯನ್ನು ನಡೆಸುತ್ತಿರುವುದು ಹಿಡಿಸಲಿಲ್ಲವೋ ಏನೋ, ಚೆನ್ನಿಯು ಬೋರನನ್ನು ಒಬ್ಬನ್ನಾಗಿ ಮಾಡಿ ಚಿರವಾಗಿ ಅವನಿಂದ ದೂರವಾದಳು. ಆಗ ನಮ್ಮ ಊರಲ್ಲಿ ಪ್ಲೇಗ್ ತಲೆದೋರಿತ್ತು. ಅದು ಹಳೆಯ ಕಾಲ. ಇನ್ನೂ ಜನರಿಗೆ ಇಂತಹ ರೋಗಗಳಿಗೆ ಯಾವುದೋ ದೇವತೆಯ ಮುನಿಸೆಂಬ ಭಾವನೆ. ಹಳ್ಳಿಯವರು ಹರಕೆಗಳನ್ನು ಒಪ್ಪಿಸಿದರೂ ಸಾವು ನೋವುಗಳೇನೂ ಕಡಿಮೆಯಾಗಲಿಲ್ಲ. ಕೊನೆಗೊಂದು ದಿನ ಯಮರಾಯನು ಚೆನ್ನಿಯ ಮೇಲೆ ಕಣ್ಣಿಟ್ಟು, ಅವಳನ್ನು ಬೋರನಿಂದ ಬೇರೆ ಮಾಡಿದನು. ಅಂದಿನಿಂದ ಬೋರ ಹಿಂದಿನ ಹುಸಿನಗೆಯ ಬೋರನಾಗಿರಲಿಲ್ಲ. ಅವನಿಗೆ ಪ್ರಪಂಚವು ಬರಿದಾಗಿ ಕಾಣಿಸಿತು. ಅವನ ಜೀವದ ಜೀವವಾಗಿದ್ದ ಚೆನ್ನಿಯ ಸಾವು ಅವನ ಮನಸ್ಸಿನ ಮೇಲೆ ಅಳಿಯಲಾರದ ಬರೆಯನ್ನು ಎಳೆಯಿತು. ಬೋರ ಒಂದು ಯಂತ್ರವಾದ. ತನ್ನ ಕೆಲಸವನ್ನೇನೋ ಮಾಡುತ್ತಿದ್ದ. ಆದರೆ ಮೊದಲಿನಂತೆ ತನ್ನ ದಣಿವಾರಿಸುತ್ತಿದ್ದ ಚೆನ್ನಿಯು ಮಾಯವಾಗಿದ್ದಳು. ಈಗವನ ಆತ್ಮಕ್ಕೆ ಶಾಂತಿಯಿಲ್ಲ. ಇನ್ನು ಶಾಂತಿಯು ಬರುವ ಹಾಗೂ ಕಾಣಲಿಲ್ಲ. ಆಗಾಗ ಮಡಿದ ಚೆನ್ನಿಯ ಸಂಗಡ ಮಾತನಾಡುವನು. ತನ್ನ ಹೃದಯದ ಅಳುವನ್ನು ತೋಡಿಕೊಳ್ಳುವನು. ಇದನ್ನು ನೋಡಿ ನಮ್ಮ ತಂದೆಯವರು ನೆರೆಯ ಹಳ್ಳಿಯಲ್ಲೆಲ್ಲಾದರೂ ಹೋಗಿ ಯಾರನ್ನಾದರೂ ಮದುವೆಯಾಗೆಂದರು. ಆದರೆ ಬೋರ ಒಪ್ಪಲಿಲ್ಲ. ಚೆನ್ನಿ ಬೋರನ ಕಣ್ಣಿಂದ ದೂರವಾಗಿದ್ದರೂ ಮನಸ್ಸಿನಿಂದ ಮಾತ್ರ ದೂರವಾಗಿರಲಿಲ್ಲ. ಇವನ ಮನವನ್ನು ಅರಿತ ತಂದೆಯವರೂ ಸುಮ್ಮನಾದರು.

ಅಂದಿನ ಬೋರನಿಗೂ ಇಂದಿನ ಬೋರನಿಗೂ ಬಹಳ ವ್ಯತ್ಯಾಸ. ಬೋರನ ಕೂದಲಾಗಲೇ ಬೆಳ್ಳಗಾಗುತ್ತಾ ಬಂದಿದೆ. ಹಣೆಯ ಮೇಲೆ ಮುದಿತನದ ಗೆರೆಗಳು ಮೂಡಿವೆ. ಆದರೂ ಬೋರ ಮುದುಕನಂತೆ ತೋರುತ್ತಿರಲಿಲ್ಲ. ಈಗಿನ ಕಾಲದ ಒಬ್ಬ ಯುವಕನು ಬೋರನು ಮಾಡುತ್ತಿದ್ದಷ್ಟು ಕೆಲಸವನ್ನು ಮಾಡಲಾರ. ಬೋರ ಜೀವನದಲ್ಲಿ ಸುಖ ದುಃಖ, ಶಾಂತಿ ಮತ್ತು ತೃಪ್ತಿ ಈಯೆಲ್ಲದರ ಸವಿಯನ್ನು ಕಂಡು ಜೀವನದ ತಿರುಳನ್ನು ತಿಳಿದ ಒಬ್ಬ ಜ್ಞಾನಿಯಂತಾಗಿದ್ದ. ಬೋರ ತನ್ನ ಕೆಲಸವನ್ನು ಶ್ರದ್ಧೆಯಿಂದ ಮಾಡುವನು. ಹೂ ಗಿಡಗಳಿಗೆ ನೀರೆರೆಯುವುದು, ಹೂ ಬಿಡಿಸಿ ತಂದಿಡುವುದು, ಸ್ನಾನ ಮಾಡಿ ತೋಟದಲ್ಲಿ ಬಿಟ್ಟಿದ್ದ ಹೂವನ್ನು ತಾನೂ ಚೆನ್ನಿಯೂ ಸಂತೋಷವಾಗಿ ಬಾಳುವೆಯನ್ನು ನಡೆಸಿದ್ದ ಮನೆಯಲ್ಲಿದ್ದ ರಾಮದೇವರ ಪಟಕ್ಕೆ ಇರಿಸಿ ಬಂದು ನಮ್ಮ ಮನೆಯಲ್ಲಿ ಊಟ ಮಾಡುವನು.

ಊಟ ಮುಗಿದ ನಂತರ ನಮ್ಮ ತಾಯಿಯವರ ಹತ್ತಿರ ಎಲೆ ಅಡಿಕೆ ತೆಗೆದುಕೊಂಡು ತೋಟದಲ್ಲಿ ಹೋಗಿ ಕುಳಿತು ಅಡಿಕೆ ಎಲೆ ಹಾಕಿಕೊಂಡು ಗಿಡಗಳ ನೆರಳಿನಲ್ಲಿ ಮಲಗುವನು. ಬೋರ ಒಳ್ಳೆಯ ಕಥೆಗಾರನಾಗಿದ್ದ. ದೆವ್ವದ ಕಥೆಗಳನ್ನೂ ರಾಮಾಯಣ ಮಹಾಭಾರತದ ಕಥೆಗಳನ್ನೂ ಮನಮುಟ್ಟುವಂತೆ ಹೇಳುವನು. ಹೀಗೆ ಹೇಳುವಾಗ ಅವನ ಕಣ್ಣಿನಲ್ಲಿ ಆನಂದಬಾಷ್ಪಗಳು ಸುರಿಯುವವು. ನಾನು ರಜೆ ಕಳೆಯಲು ಬಂದಾಗ ಬೋರನೇ ನನ್ನ ಸಂಗಾತಿ. ಮೂರು ಹೊತ್ತೂ ಬೋರನ ಹತ್ತಿರವೇ ಕಾಲ ಕಳೆಯುತ್ತಿದ್ದೆ. ತೋಟದಲ್ಲಿದ್ದಾಗ ತೋಟದಲ್ಲಿಯೂ ಹೊಲದಲ್ಲಿದ್ದಾಗ ಹೊಲದಲ್ಲಿಯೂ ಯಾವಾಗಲೂ ಅವನ ಜೊತೆಯಲ್ಲಿಯೇ ಕಾಲ ಕಳೆಯುತ್ತಿದ್ದೆ. ಬೋರ ವಯಸ್ಸಿನಿಂದ ಬಳಲಿದ್ದರೂ ಅವನು ಮಾಡುತ್ತಿದ್ದ ಕೆಲಸದಲ್ಲಿ ಜುಗುಪ್ಸೆಯನ್ನು ತೋರಿಸುತ್ತಿರಲಿಲ್ಲ.

ಒಂದು ದಿನ ಬೋರ ತನ್ನ ಮನೆಯಲ್ಲಿ ಪೆಟ್ಟಿಗೆಯನ್ನು ತೆಗೆದು ಅದರೊಳಗಿದ್ದ ಒಂದು ಪಟಕ್ಕೆ ಹೂವನ್ನಿರಿಸುತ್ತಿದ್ದ. ನಾನು ಬೋರನನ್ನು ಕರೆಯುವುದಕ್ಕೆ ಬಂದವಳು, ಇವನ ರೀತಿಯನ್ನು ನೋಡಿ ಮಂಕು ಹಿಡಿದಂತಿದ್ದೆ. ಅಷ್ಟರಲ್ಲಿ ನಮ್ಮ ತಂದೆಯವರೇ ಬೋರನನ್ನು ಕರೆಯಲು ಬಂದರು. ನಾನೂ ಬೋರನನ್ನು ಕರೆದೆ. ಅವನು ದಡದಡನೆ ಪೆಟ್ಟಿಗೆಯ ಬಾಗಿಲನ್ನು ಮುಚ್ಚಿ, ಕಣ್ಣೊರಸಿಕೊಳ್ಳುತ್ತಾ ಹೊರಗೆ ಬಂದನು. ನನಗೆ ಆಶ್ಚರ್ಯ, ನಗು ದುಃಖ ಎಲ್ಲವೂ ಒಂದೇಸವನೆ ಬಂದವು. ಹೆಂಡತಿ ಸತ್ತಾಗ ಒಂದು ತೊಟ್ಟು ಕಣ್ಣೀರನ್ನೂ ಹರಿಸದ ಬೋರ ಇಂದೇಕೆ ಕಣ್ಣೀರು ಸುರಿಸುತ್ತಿರುವನೆಂದು! ಬೋರ ತಂದೆಯೊಡನೆ ಮಾತಾಡಲು ಹೊರಟು ಹೋದನು. ನಾನು ಊಟಕ್ಕೆ ಕುಳಿತೆ; ಆದರೆ ಊಟವೂ ಹಿಡಿಸಲಿಲ್ಲ. ನನಗೆ ತಿಳಿಯಬೇಕಾಗಿದ್ದುದು ಬೋರನ ಕಣ್ಣೀರಿನ ಕಾರಣ. ಬೋರ ಊಟವಾದ ಮೇಲೆ ತೋಟಕ್ಕೆ ಹೋಗುವುದನ್ನು ಕಾದು ಕುಳಿತೆ. ಅವನು ತೋಟಕ್ಕೆ ಹೋದ ತತ್ಕ್ಷಣವೇ ಅವನ ಹಿಂದೆಯೇ ನಾನೂ ಹೋದೆ. ನನ್ನನ್ನು ನೋಡಿದ ಬೋರ ಅಕ್ಕರೆಯಿಂದ ತನ್ನ ಕಂಬಳಿಯನ್ನು ಹಾಸಿ ಕುಳಿತುಕೊಳ್ಳುವಂತೆ ಹೇಳಿದ. ಆದರೆ ನಾನು ಕುಳಿತುಕೊಂಡು ಬೋರನ ಹತ್ತಿರ ಹರಟೆ ಹೊಡೆಯುವುದಕ್ಕೆ ಹೋಗಲಿಲ್ಲ. ಅವನ ಪ್ರಾಣವನ್ನು ಹಿಂಡುವುದಕ್ಕಾಗಿ ಹೋಗಿದ್ದೆ. ಕೊನೆಗೆ ಕೇಳಿದೆ–

"ಬೋರ, ಆಗ ಮನೆಯಲ್ಲೇಕೆ ಅಳುತ್ತಿದ್ದೆ?" ಎಂದೆ.

ಬೋರ, ಮಾತು ಮರೆಸುವುದಕ್ಕಾಗಿ "ಸುಮ್ಮನೆ, ಕಣ್ಣಿಗೇನೋ ಕಸ ಬಿತ್ತವ್ವಾ" ಎಂದ. ನಾನು ಅವನು ಮಾಡುತ್ತಿದ್ದುದೆಲ್ಲವನ್ನೂ ತಿಳಿಸಿ ಅದೆಲ್ಲವನ್ನೂ ವಿಶದವಾಗಿ ವಿವರಿಸುವಂತೆ ಕೇಳಿದೆ. ನನ್ನ ಮಾತನ್ನು ಕೇಳುತ್ತಲೇ ಬೋರ ಮಂಕು ಹಿಡಿದಂತಾದ. ಹುಚ್ಚುನಗೆನಕ್ಕು "ಆ ಪಟ ನನ್ನ ಚನ್ನೀದೂ ಕಣವ್ವಾ, ಚನ್ನಿ ಉರಿದೋದ್ಲು, ನಾನೂ ಉರಿಹೊಗ್ತೇನಿ" ಎಂದು ಉನ್ಮತ್ತನಂತೆ ಕಿರಿಚಿ ಬಿದ್ದುಬಿಟ್ಟನು! ನನಗೆ ಭಯವಾಯಿತು. ಥಟ್ಟನೆ ಚೌಕವನ್ನು ಕಣ್ಣೀರಿನಲ್ಲಿ ನೆನೆಯಿಸಿ ಹಣೆಗೂ ಎದೆಗೂ ಒತ್ತಿದೆನು. ಸ್ವಲ್ಪ ಹೊತ್ತಿನ ಮೇಲೆ ಬೋರನಿಗೆ ಜ್ಞಾನ ಬಂದಿತು. ಸಂತೋಷಪಟ್ಟು, ಬೋರನನ್ನು ಇನ್ನೆಂದಿಗೂ ಇಂತಹ ಪ್ರಶ್ನೆ ಕೇಳುವುದಿಲ್ಲವೆಂದು ದೇವರಿಗೆ ಮೊರೆಯಿಟ್ಟೆ.

ಬೋರ ನಿದ್ದೆಯಿಂದೆದ್ದ. ತನ್ನ ಕೆಲಸಗಳೆಲ್ಲವನ್ನೂ ಜಾಗ್ರತೆಯಾಗಿ ಮುಗಿಸಿಕೊಂಡು ಊಟಕ್ಕೆ ಬಂದ. ಊಟ ಮುಗಿಸಿ ಮಲಗುವುದಕ್ಕೆ ಹೊರಟ. ಮರುದಿನ ಬೆಳಿಗ್ಗೆ ಬೋರನಿರಲಿಲ್ಲ! ಎಲ್ಲಿಗೋ ಹೋಗಿರುವನೆಂದು ಕೇಳಿದೆವು. ಊಟದ ಹೊತ್ತಿಗೂ ಬರಲಿಲ್ಲ. ಸಾಯಂಕಾಲವೂ ಬರಲಿಲ್ಲ. ಮರುದಿನ ಕಟ್ಟೆಗೆಗೆ ಹೋಗಿದ್ದವರು ದಾರಿಯಲ್ಲಿ ಬೋರನು ಚೆನ್ನಿಯನ್ನು ಸುಟ್ಟ ಸ್ಥಳದಲ್ಲಿ ಅಸು ನೀಗಿರುವುದನ್ನು ಬಂದು ತಿಳಿಸಿದರು. ಬೋರನ ಶವ ಸಂಸ್ಕಾರಗಳನ್ನು ನಮ್ಮ ತಂದೆಯವರೇ ಹಳ್ಳಿಗರ ಸಹಾಯದಿಂದ ಮುಗಿಸಿದರು; ಇಂದಿಗೆ ಬೋರನು ಸತ್ತು ಒಂದು ವರ್ಷವಾಗಿದೆ. ಆದರೂ ಅವನು ಪೂಜಿಸುತ್ತಿದ್ದ "ಚೆನ್ನಿಯ ಮತ್ತು ಬೋರನ" ಪಟವು ಅವನ ಜೀವನವನ್ನು ಕಣ್ಣುಮುಂದೆ ತರುತ್ತಿದೆ. –ಎಸ್. ಪದ್ಮ.

ಭಾರೀ ಸಣಬಿನ ಗಿಡ

ಕಲಕತ್ತೆಯ ಬೋಸ್ ವಿಜ್ಞಾನ ಸಂಸ್ಥೆಯ ಸಸ್ಯಶಾಸ್ತ್ರ ಶಾಖೆಯ ಪ್ರಮುಖರಾದ ಶ್ರೀ ಕೆ. ಟಿ. ಜಾಕೋಬರ ದೋಹಳದಿಂದ ಬೆಳೆದ ಮಾದರಿಯ ಸಣಬಿನ ಗಿಡವನ್ನು ಭಾರತದಲ್ಲಿ ವಿಪುಲವಾಗಿ ಬೆಳೆಯುವದು ಸಾಧ್ಯವಾದರೆ ವಿಭಜನೆಯಿಂದ ಭಾರತದ ಆರ್ಥಿಕ ಸಮತೋಲದ ಮೇಲೆ ಬಿದ್ದ ಒಂದು ದೊಡ್ಡ ಹೊಡೆತವನ್ನು ಪರಿಹರಿಸಬಹುದಾಗಿದೆ. ಪೂರ್ವ ಬಂಗಾಳವನ್ನು ಪಾಕಿಸ್ತಾನಕ್ಕೆ ಕೊಟ್ಟಿದ್ದರಿಂದ ಭಾರತದ ಸಣಬಿನ ಗಿರಣಿಗಳು ಕಚ್ಚಾ ಸಣಬಿಗಾಗಿ ಪಾಕಿಸ್ತಾನದ ಮೇಲೆ ಕೈಯೊಡ್ಡಬೇಕಾಗಿ ಬಂದಿದೆ. ಅದರಿಂದ ನಮ್ಮ ವಿದೇಶ ವ್ಯಾಪಾರದ ಶಿಲ್ಕಿನ ಮೇಲೆ ದುಷ್ಪರಿಣಾಮವಾಗಿದೆ.

ಶ್ರೀ ಜಾಕೋಬರು ಬೆಳೆಸಿದ ಗಿಡವು ಈಗ ಲಭ್ಯವಾಗುವ ಅತ್ಯುತ್ತಮ ಗಿಡಗಳಿಗಿಂತ ಒಂದೂವರೆ ಪಟ್ಟು ಎತ್ತರವೂ ಎರಡೂವರೆ ಪಟ್ಟು ದಪ್ಪವೂ ಆಗಿದೆಯಂತೆ. ಸಣಬಿನ ಬೀಜಗಳನ್ನು ವಿವಿಧ ಪ್ರಮಾಣದ "ಕ್ಷ-ಕಿರಣ" ಗಳ ಪ್ರಯೋಗಕ್ಕೊಳಗುಮಾಡಿ ಅವರು ಈ ಮಾದರಿಯ ಭಾರೀ ಗಿಡವನ್ನು ರೂಪುಗೊಳಿಸಿದ್ದಾರೆ. ಈಗಿನ ಅತ್ಯುತ್ತಮ ಗಿಡಗಳು ಬಹಳಾದರೆ ೧೫ ಅಡಿ ಎತ್ತರ, ೧ ಇಂಚು ದಪ್ಪ ಇರುತ್ತವೆ; ಜಾಕೋಬರ ಗಿಡ ೨೨॥ ಅಡಿ ಎತ್ತರಕ್ಕೆ ೨॥ ಇಂಚು ದಪ್ಪಾಗಿ ಬೆಳೆಯುತ್ತದೆ. ಇದಲ್ಲದೆ ಸಾಮಾನ್ಯ ಸಣಬಿನ ಗಿಡಗಳಿಗೆ ಬೆಳೆಯಲು ೧೬ ವಾರ ಹಿಡಿದರೆ ಇವುಗಳಲ್ಲಿ ಕೆಲವು ಎಂಟೇ ವಾರಗಳಲ್ಲಿ ಉಪಯೋಗಕ್ಕೆ ಸಿದ್ಧವಾಗುತ್ತವೆ. ಇವುಗಳ ನಾರುಹೆಚ್ಚು ಮೆತ್ತಗಾಗಿಯೂ ಎಳೆಗಳು ನಾಜೂಕಾಗಿಯೂ ಇವೆ. ಬಣ್ಣವೂ ಹೆಚ್ಚು ಚನ್ನಾಗಿದೆ.

ನಮ್ಮ ಇಂದಿನ ಸ್ಥಿತಿಯಲ್ಲಿ ಈ ಹೊಸ ಶೋಧವೊಂದು ದೈವೀ ವರವೆಂದೇ ಹೇಳಬೇಕು. ಭಾರತದ ವಿದೇಶೀ ವಿನಿಮಯ ಸಂಪಾದನೆಯ ಮುಖ್ಯ ಸಾಧನಗಳಲ್ಲೊಂದಾಗಿದ್ದ ಸಣಬಿನ ಉದ್ದಿಮೆಯನ್ನು ನಾವು ಅನ್ಯಾಯವಾಗಿ ಕಳೆದುಕೊಳ್ಳುತಿದ್ದೆವು. ಇದು ಅಂಥ ಪ್ರಸಂಗವನ್ನು ನಿವಾರಿಸಬಲ್ಲದೇ ಎಂದು ಎಲ್ಲರೂ ಆತುರದಿಂದ ಎದುರು ನೋಡುವದು ಸಹಜವೇ ಸರಿ.

ಸಮಸ್ತ ಭಾರತ

ಮುಂಬಯಿ

ನಾಸಿಕದಿಂದ ೪ ಮೈಲು ದೂರದ ಹಳ್ಳಿ ಪಥರ್ಡಿಯಲ್ಲಿ ೧೦ ಜನ ಮುಲಕಿ ಶಾಖೆಯ ಶಿಬ್ಬಂದಿಗಳೂ ಸಶಸ್ತ್ರ ಪೋಲೀಸರೂ ಜನರ ದಾಳಿಯಿಂದ ಗಾಯಗೊಂಡರು. ಈ ಸಂದರ್ಭದಲ್ಲಿ ೩೨ ಸ್ತ್ರೀಪುರುಷರನ್ನು ಸೆರೆಹಿಡಿಯಲಾಗಿದೆ.

ಕೇಂದ್ರದಲ್ಲಿದ್ದಂತೆ ಮುಂಬಯಿಯಲ್ಲಿ ಪ್ರಾಂತದ ಗೌಣವಾದ ಚಿಕ್ಕ ಉದ್ಯಮಗಳಿಗೆ ಧನಸಹಾಯ ನೀಡಲು ಒಂದು ಔದ್ಯಮಿಕ ನಿಧಿಸಂಘವನ್ನು ಸ್ಥಾಪಿಸಬೇಕೆಂದು ನಿರ್ಧರಿಸಲಾಗಿದೆ.

ಮುಂಬಯಿ ನಗರದ ವಯಸ್ಕರ ಶಿಕ್ಷಣ ಸಮಿತಿಯ ಆಶ್ರಯದಲ್ಲಿ ಮುಖ್ಯ ಮಂತ್ರಿ ಶ್ರೀ ಖೇರರು ಭಾಷಣ ಮಾಡುತ್ತ, ಮಹಿಳೆಯರು ರಾಷ್ಟ್ರದಲ್ಲಿಯ ನಿರಕ್ಷರತೆಯನ್ನು ಹೋಗಲಾಡಿಸಲು ಹೇಗೆ ಸಹಾಯ ಮಾಡಬೇಕೆಂದೂ ರಾಷ್ಟ್ರನಿರ್ಮಾಣ ಕಾರ್ಯದಲ್ಲಿ ಪುರುಷರಿಗೆ ಸಕ್ರಿಯ ಸೇವೆ ಸಲ್ಲಿಸಬೇಕೆಂದೂ ಬಿನ್ನವಿಸಿದರು ಮತ್ತು ೧೩೫೦ ಮುಸ್ಲಿಂ ಸ್ತ್ರೀಯರಿಗೆ ಸಾಕ್ಷರತೆಯ ಸರ್ಟಿಫಿಕೇಟನ್ನು ಹಂಚಿದರು.

ನಗರ ಮತ್ತು ಪಟ್ಟಣಗಳಲ್ಲಿ ವಾಚನಾಲಯಗಳನ್ನು ಪಸರಿಸಲು ಮತ್ತು ಗ್ರಾಮಗಳಲ್ಲಿ ಸಂಚಾರಿ ವಾಚನಾಲಯಗಳನ್ನು ಸ್ಥಾಪಿಸಲು ಸಹಾಯ ಮಾಡಲು ಸ್ಥಾನಿಕ ಸಂಸ್ಥೆಗಳ ಮೇಲೆ ವಾಚನಾಲಯದ ಕರವನ್ನು ಹೇರುವ ಅಧಿಕಾರ ಕೊಡಬೇಕೆಂದು ಮುಂಬಯಿ ಸರಕಾರವನ್ನು ಬಿನ್ನವಿಸಿಕೊಳ್ಳುವ ಗೊತ್ತುವಳಿಯು ಪುಣೆಯಲ್ಲಿ ಸೇರಿದ ಮಹಾರಾಷ್ಟ್ರ ವಾಚನಾಲಯಗಳ ಪರಿಷತ್ತಿನಲ್ಲಿ ಸ್ವೀಕೃತವಾಯಿತು.

ಸ್ಥಳೀಯ ಅಧಿಕಾರಿಗಳ ಸಹಾಯ ಪಡೆಯುವ ಖಾಸಗಿ ಪ್ರಾಥಮಿಕ ಶಾಲೆಗಳ ಸ್ಥಿತಿಯನ್ನು ಸುಧಾರಿಸಲು ಮುಂಬಯಿ ಸರಕಾರವು ಹೆಚ್ಚಿನ ಸಹಾಯ ಧನವನ್ನು ಕೊಡಲು ನಿರ್ಧರಿಸಿದೆ. ೨೦ ಕ್ಕಿಂತ ಹೆಚ್ಚು ವಿದ್ಯಾರ್ಥಿಗಳಿದ್ದಲ್ಲಿ ಸಲಕರಣೆಯ ವೆಚ್ಚಕ್ಕೆಂದು ಪ್ರತಿ ಶಿಕ್ಷಕನಿಗೆ ೫೦ ರೂ, ೪ ನೆಯ ಇಯತ್ತೆಯ ಮೇಲಿನ ವರ್ಗಗಳಿದ್ದಲ್ಲಿ ಪ್ರತಿವರ್ಷ ೨೫ ರೂ., ೫ ವರ್ಷಕ್ಕಿಂತ ಹಳೆಯದಾದ ಶಾಲೆಯ ಪ್ರತಿ ಶಿಕ್ಷಕನಿಗೆ ೨೫ ರೂ., ಪಂಚವಾರ್ಷಿಕ ಸಹಾಯ ನೀಡಲಾಗುವುದು. ಟ್ರೇಂಡ್ ಇದ್ದರೆ ತಲಾ ೫ ರೂ. ಕೊಡಲಾಗುವುದು.

ಮುಂಬಯಿಯ ಪ್ರಿನ್ಸ್ ಆಫ್ ವೇಲ್ಸ ವಸ್ತುಸಂಗ್ರಹಾಲಯದ "ನಿಸರ್ಗಜೀವನ" ವಿಭಾಗದಲ್ಲಿ ನಿಸರ್ಗಶಿಕ್ಷಣವನ್ನು ಕೊಡುವುದನ್ನು ಕುರಿತು ಮುಂಬಯಿಯ ನಿಸರ್ಗ ಜೀವನ ಸಂಸ್ಥೆಯವರು ತಯಾರಿಸಿದ ಯೋಜನೆಯನ್ನು ಮುಂಬಯಿ ಸರಕಾರ ಮತ್ತೆರಡು ವರ್ಷಗಳ ವರೆಗೆ ಬೆಳೆಸಲು ನಿರ್ಧರಿಸಿದೆ.

ಮಹಾರಾಷ್ಟ್ರ ಸಾಹಿತ್ಯ ಪರಿಷತ್ತಿನ ನೊಸ್ಸೆ ನಡೆದ ೩೨ ನೆಯ ಅಧಿವೇಶನದಲ್ಲಿ ಸಂಯುಕ್ತ ಮಹಾರಾಷ್ಟ್ರದ ಬೇಡಿಕೆಯ ಗೊತ್ತುವಳಿಯನ್ನು ಸ್ವೀಕರಿಸಲಾಯಿತು. ಆಚಾರ್ಯ ಎಸ್. ಡಿ. ಜಾವಡೆಕರರು ಅಧ್ಯಕ್ಷತೆ ವಹಿಸಿದ್ದರು.

ಮದರಾಸ

ಜುಲೈಯಲ್ಲಿ ಹೆಲಸಿಂಕಿಯಲ್ಲಿ ಕೂಡಲಿರುವ ಜಾಗತಿಕ ಅರಣ್ಯ ಪರಿಷತ್ತಿಗೆ ಹಿಂದುಸ್ತಾನದ ಅರಣ್ಯ ಶಾಖೆಯ ಇಬ್ಬರು ದೊಡ್ಡ ಅಧಿಕಾರಿಗಳು ಪ್ರತಿನಿಧಿಗಳಾಗಿ ಹೋಗುವರೆಂದು ತಿಳಿದಿದೆ. ಮದ್ರಾಸಿನ ಅರಣ್ಯಶಾಸ್ತ್ರ ಶಿಕ್ಷಣದ ನಿರ್ದೇಶಕರಾದ ಶ್ರೀರಂಗನಾಥರು ಈ ಇಬ್ಬರಲ್ಲಿ ಒಬ್ಬರಾಗಬಹುದೆಂದು ನಿರೀಕ್ಷಿಸಲಾಗಿದೆ.

ಪಾಕಿಸ್ತಾನದಿಂದ ಬಂದ ನಿರಾಶ್ರಿತರನ್ನು ಇನ್ನು ಮೇಲೆ ಮದ್ರಾಸ ಪ್ರಾಂತದ ಶಿಬಿರಗಳಲ್ಲಿ ಸೇರಿಸಿಕೊಳ್ಳಲಾಗುವುದಿಲ್ಲವೆಂದು ಮದ್ರಾಸ ಸರಕಾರ ಪತ್ರಿಕಾಪ್ರಕಟನೆ ಹೊರಡಿಸಿದೆ.

ಮದ್ರಾಸಿನ ಆಂಧ್ರ ಚೇಂಬರ್ ಆಫ್ ಕಾಮರ್ಸಿನ ಅಧ್ಯಕ್ಷರು ಕೊಟ್ಟ ಸತ್ಕಾರದ ಸಮಯದಲ್ಲಿ "ಸ್ವದೇಶ ಮಿತ್ರ"ದ ಸಂಪಾದಕರೂ ಅ. ಭಾ. ವೃತ್ತಪತ್ರಿಕಾ ಸಂಪಾದಕರ ಪರಿಷತ್ತಿನ ಅಧ್ಯಕ್ಷರೂ ಆದ ಶ್ರೀ ಸಿ. ಆರ್. ಶ್ರೀನಿವಾಸನ್ನರು ಪತ್ರಿಕೆಗಳ ಕರ್ತವ್ಯ ಮತ್ತು ಹೊಣೆಗಳನ್ನು ಸ್ಪಷ್ಟವಾಗಿ ಹೇಳಿದರು.

ಮದ್ರಾಸಿಗೆ ದಕ್ಷಿಣದಲ್ಲಿರುವ ವೃದ್ಧಾಚಲ ಮತ್ತು ಕಡಲೂರುಗಳ ಸಮೀಪದಲ್ಲಿ ೧೦೦ ಮೈಲಿನ ಪ್ರದೇಶದಲ್ಲಿ ಕಲ್ಲಿದ್ದಲಿಯ ಆದಿರುಗಳಿವೆಯೆಂದು ತಿಳಿದು ಬಂದಿದೆ.

ನಾಳಿನ ಶಾಲಾ ವರ್ಷದಲ್ಲಿ ಮಧುರೆಯಲ್ಲಿ ವಾಲ್ಮನೆಯ ಆರ್ಟ್ಸ ಕಾಲೇಜನ್ನು ಸ್ಥಾಪಿಸಲಾಗುವುದು. ತ್ಯಾಗರಾಜರ ಕಾಲೇಜನ್ನು ಮದ್ರಾಸ ವಿಶ್ವವಿದ್ಯಾನಿಲಯಕ್ಕೆ ಸೇರಿಸಿಕೊಳ್ಳಬೇಕೆಂದು ನಿರ್ಧರಿಸಲಾಗಿದೆ.

ಪ್ರೆಸ್ ಟ್ರಸ್ಟ್ ಆಫ್ ಇಂಡಿಯದ ಶೇರುದಾರರ ಮೊದಲನೆಯ ಸಾಮಾನ್ಯ ವಾರ್ಷಿಕ ಸಭೆ ಕಳೆದ ೧೪ ರಲ್ಲಿ ಮದ್ರಾಸಿನಲ್ಲಿ ಸೇರಿ ಡೈರೆಕ್ಟರರ ಆಯ್ಕೆಯನ್ನು ಈ ಕೆಳಗಿನಂತೆ ಮಾಡಿತು: ಶ್ರೀಗಳಾದ ದೇವದಾಸ ಗಾಂಧಿ, ತುಷಾರಕಾಂತಿ ಘೋಷ್, ರಾಮನಾಥ ಗೊಯೆಂಕ, ಡಬ್ಲ್ಯು. ಜೆ. ಬಿ. ವಾಲೇಕರ, ಸಿ. ಆರ್. ಶ್ರೀನಿವಾಸನ್, ಡಾ. ಎನ್. ಬಿ. ಪರುಳೇಕರ, ಐ. ಎಸ್. ಜೇಹು, ಎಚ್. ಆರ್. ಮೊಹರೆ, ದೇಶಬಂಧು ಗುಪ್ತ, ಪಂಡಿತ ಹರಿಶಂಕರ ವಿದ್ಯಾರ್ಥಿ.

ಗಾಂಧೀ ಸ್ಮಾರಕ ನಿಧಿಗಾಗಿ ಶ್ರೀಮತಿ ಎಂ. ಎಸ್. ಸುಬ್ಬುಲಕ್ಷ್ಮಿಯವರು ಕಳೆದ ಏಪ್ರಿಲ್ ೩೦ ನೆಯ ದಿನ ಮುಂಬಯಿಯಲ್ಲಿ ನಡೆಸಿದ ಧರ್ಮಾರ್ಥ ಸಂಗೀತ ಕಚೇರಿಗಾಗಿ ಮುಂಬಯಿಯ ಪ್ರಾಂ. ಕಾಂ. ಸಮಿತಿ ಗಾಂಧಿಯವರ ಬೆಳ್ಳಿಯ ಪ್ರತಿಮೆಯೊಂದನ್ನು ಅವರಿಗೆ ಕಾಣಿಕೆಯನ್ನಾಗಿ ಕೊಟ್ಟರು.

ಹೊಸದಿಲ್ಲಿ

ಜಗತ್ತಿನಲ್ಲೆಲ್ಲ ಭಾರತವೇ ನೆಲಗಡಲೆಯ [ಸೇಂಗಾ] ಬೆಳೆಯಲ್ಲಿ ಹೆಸರು ಪಡೆದ ನಾಡು. ಒಟ್ಟು ಉತ್ಪತ್ತಿಯಲ್ಲಿ ನೂರಕ್ಕೆ ೪೦ ರಷ್ಟು ಭಾರತದ್ದಾಗುವುದು. ೧೯೪೭-೪೮ ರಲ್ಲಿ ಇಲ್ಲಿ ಬೆಳೆದ ನೆಲಗಡಲೆ ೩,೪೫,೪೦೦೦ ಟನ್ನುಗಳಷ್ಟಾಗಿದೆ.

ಒಂದು ವರ್ಷದ ವರೆಗೆ ಭಾರತದ ರಾಯಭಾರಿಯಾಗಿದ್ದು ಅಲ್ಲೇ ತೀರಿಕೊಂಡ ಡಾ. ಸಯ್ಯದ ಹುಸೇನರ ಸ್ಮಾರಕವಾಗಿ ಇಜಿಪ್ತ ಸರಕಾರವು ಅವರ ಸಮಾಧಿಯ ಬಳಿಯ ರಸ್ತೆಗೆ ಅವರ ಹೆಸರನ್ನಿಡಲು ನಿರ್ಧರಿಸಿತು.

ಹೊಸದಿಲ್ಲಿಯಲ್ಲಿ ಮಹಾತ್ಮರ ಅವಶೇಷಗಳನ್ನು ಪ್ರದರ್ಶಿಸುವ ಸ್ಥಿರವಾದ ವಸ್ತುಸಂಗ್ರಹಾಲಯವನ್ನು ಸ್ಥಾಪಿಸಲಾಗುವುದೆಂದು ತಿಳಿಯುತ್ತದೆ.

ದಿಲ್ಲಿ ಪ್ರಾಂತದಲ್ಲಿ ೨೦೦೦ ಬಾವಿಗಳನ್ನು ತೋಡಿಸುವದಕ್ಕೆ ಮತ್ತು ಹಿಂದೀ ಸಂಶೋಧನ ನಿಧಿಸಂಘಕ್ಕೆ ೧೨ ಲಕ್ಷ ರೂಪಾಯಿಗಳ ವಾರ್ಷಿಕ ಧನ ಸಹಾಯ ಕೊಡುವುದಕ್ಕೆ ಸ್ಥಾಯಿ ಆರ್ಥಿಕ ಸಮಿತಿ ಒಪ್ಪಿಗೆ ಕೊಟ್ಟಿತು. ಹಿಂದುಸ್ತಾನ ಸರಕಾರದ ಅರ್ಥಮಂತ್ರಿ ಡಾ. ಜಾನ್ ಮಥಾಯಿಯವರು ಅಧ್ಯಕ್ಷತೆ ವಹಿಸಿದ್ದರು.

೧೯೪೮ ರ ನೆವೆಂಬರ ೧ ರಿಂದ ೧೯೪೯ ರ ಮಾರ್ಚ ೩೧ ರ ವರೆಗೆ ಭಾರತದಲ್ಲಿ ೨೨೮೨೫೦೦೦ ಮಣ ಸಕ್ಕರೆಯ ಉತ್ಪಾದನೆಯಾಗಿದೆಯೆಂದು ತಿಳಿಯುತ್ತದೆ. ಭಾರತದಲ್ಲಿ ಸುಮಾರು ೧೨೪ ಸಕ್ಕರೆಯ ಗಿರಣಿಗಳಿವೆ.

ಶ್ರೀಮತಿ ವಿಜಯಲಕ್ಷ್ಮಿ ಪಂಡಿತರ ಸ್ಥಾನದಲ್ಲಿ ಡಾ. ಸರ್ವಪಲ್ಲಿ ರಾಧಾಕೃಷ್ಣನ್ನರನ್ನು ರಶಿಯದ ರಾಯಭಾರಿಯನ್ನಾಗಿ ನಿಯಮಿಸಲಾಗುವದೆಂದು ತಿಳಿದುಬಂದಿದೆ.

ಹಿಂದೀ ಅಲ್ಯುಮಿನಿಯಂ ಕಂಪೆನಿ ಮತ್ತು ಹಿಂದುಸ್ತಾನ ಅಲ್ಯುಮಿನಿಯಂ ಕಂಪೆನಿಗಳಿಗೆ ಧನಸಹಾಯ ಮಾಡಬೇಕೆಂದು ಭಾರತ ಸರಕಾರ ನಿರ್ಧರಿಸಿದೆ. ಅಲ್ಯುಮಿನಿಯಂ ಉದ್ಯಮದ ಬಗ್ಗೆ ಸುಂಕ ಮಂಡಲದವರು ಪ್ರಸಿದ್ಧಿಸಿದ ವರದಿಯ ಬಗ್ಗೆ ಸರಕಾರ ಕೈಕೊಂಡ ನಿರ್ಣಯದಲ್ಲಿ ಈ ಸೂಚನೆಯಿದೆಯೆಂದು ಭಾರತ ಸರಕಾರದ ವಿಶಿಷ್ಟ ಗಜೆಟ್ಟಿನಲ್ಲಿ ಹೇಳಲಾಗಿದೆ.

ಜಪಿಯಾಲಾ ಮತ್ತು ಪೂರ್ವ ಪಂಜಾಬ ಸಂಸ್ಥಾನ ಒಕ್ಕೂಟದ ಮುಖ್ಯಮಂತ್ರಿ ಸರದಾರ ಗ್ಯಾನಸಿಂಗ ರಾರೇವಾಲರು ತಮ್ಮ ಸರಕಾರವು ಕಾಂಗ್ರೆಸ್ಸಿನ ಸಂಪ್ರದಾಯಕ್ಕನುಗುಣವಾಗಿ ಕಾರ್ಯ ಕೈಕೊಳ್ಳುವುದೆಂದು ಪತ್ರಿಕಾ ಪ್ರತಿನಿಧಿಗಳಿಗೆ ತಿಳಿಸಿದರು.

ಮಧ್ಯಭಾರತ ಮಂತ್ರಿಮಂಡಲದ ಕೆಲಸವನ್ನು ಪರಿಶೀಲಿಸಲು ಸಂಸ್ಥಾನ ಶಾಖೆಯ ಸಲಹೆಯನ್ನು ಕೇಳುತ್ತಿದ್ದು ರಾಜಪ್ರಮುಖರಾದ ಗ್ವಾಲಿಯರಿನ ಸಿಂಧೆ ಮಹಾರಾಜರೂ ಮುಖ್ಯ ಮಂತ್ರಿ ಶ್ರೀ ಲೀಲಾಧರ ಜೋಶಿಯವರೂ ಹೊಸದಿಲ್ಲಿಗೆ ತೆರಳಿದರೆಂದು ಸುದ್ದಿ.

ಗ್ವಾಲಿಯರ ನಗರದ ಅದ್ಭುತ ಮನಮಂದಿರ

[ಮಧ್ಯಪುಟದಿಂದ ಮುಂದುವರಿದುದು]

ಅಡಿ ಎತ್ತರವಿರುವ ಸುಂದರವಾದ ದೇವಾಲಯವೊಂದು ಕಾಣುತ್ತದೆ. ಭಗ್ನವಾದ ಮಂದಿರವೆಂದು ನೆನಸಿ ಹೋದರೆ ಕಾಣುವುದೇನು? ಭಿನ್ನವಾದ ಮತ್ತು ದೇವರಿಲ್ಲದ ಮಂದಿರ. ಇಲ್ಲೂ ಐತಿಹಾಸಿಕ ದೃಷ್ಟಿ ಅತ್ಯಗತ್ಯ. ಎತ್ತರವಾದ ಮಹಾದ್ವಾರದ ಚೌಕಟ್ಟಿನ ಮಧ್ಯದಲ್ಲಿ ಗರುಡ ಮೂರ್ತಿಯಿದೆ. ಈ ಗುಡಿಯ ಹೆಸರು 'ತೇಲೀಕಾ ಮಂದಿರ' ಎಂದು. ಇದನ್ನು ಒಬ್ಬ ಗಾಣಿಗನು ಕಟ್ಟಿಸಿದನೆಂದು ಹೇಳುತ್ತಾರೆ. ಈ ಗುಡಿಯ ಸುತ್ತ ಅನೇಕ ಪುರಾತನ ಶಿಲ್ಪದ ಅವಶೇಷಗಳನ್ನು ಹಾಕಿದ್ದಾರೆ. ಕೆಲವು ಜೈನ ವಿಗ್ರಹಗಳೂ ಗುಡಿಯ ಸುತ್ತ ಇವೆ.

ಹಾಗೇ ಸಾಗಿದರೆ ಕೆಲವು ಈಗಿನ ಕಾಲದ ದೊಡ್ಡ ಕಟ್ಟಡಗಳಿವೆ. ಅಲ್ಲಿ ಸರಕಾರಿ ಪಾಠಶಾಲೆಗಳು ನಡೆಯುತ್ತಿವೆ. ಬೆಟ್ಟದ ಮೇಲಿನ ಹವೆ ಬಹಳ ತಂಪಾಗಿದ್ದು ಆಹ್ಲಾದಕರವಾಗಿದೆ. ಕೋಟೆಯ ಗೋಡೆಯ ಪಕ್ಕಕ್ಕೆ ನಿಂತು ನೋಡಿದರೆ, ಗ್ವಾಲಿಯರಿನ ಹಳೆಯ ಪಟ್ಟಣವೂ ರಸ್ತೆಗಳೂ, ವಾಹನಸಂಚಾರವೂ ಕಾಣುತ್ತದೆ. ದೃಷ್ಟಿ ಹೋಗುವಷ್ಟು ದೂರ ನೋಡುತ್ತಾ ನಿಂತರೆ, ಪ್ರಕೃತಿ ಸೌಂದರ್ಯವು ಮನಸ್ಸನ್ನು ಸೂರೆಗೊಳ್ಳದಿರದು.

ಗ್ವಾಲಿಯರ್ ನಗರದ ಆಕರ್ಷಣೆಗಳು ಸಾಂಪ್ರದಾಯಕ ಜನಕ್ಕೆ ಬೇಕಾದವುಗಳಲ್ಲ. ಅವರಿಗೆ ಬೇಕಾಗುವಂತಹ ಯಾವ ಪವಿತ್ರ ದೇವಾಲಯಗಳಾಗಲಿ, ನದಿ ಸರೋವರಗಳಾಗಲಿ, ಅಲ್ಲಿ ಇಲ್ಲ. ಹೆಂಗಸರ ಮತ್ತು ಮಕ್ಕಳ ಮನಸ್ಸನ್ನು ಸೂರೆಗೊಂಡು ಆಕರ್ಷಿಸುವುದರಲ್ಲಿ ಅಲ್ಲಿನ ಮಣ್ಣಿನ ಬೊಂಬೆಗಳು ಮಾತ್ರ ಎತ್ತಿದ ಕೈ.

ಸಂಯುಕ್ತಪ್ರಾಂತ

ಕಾಶ್ಮೀರದ ಮುಖ್ಯಮಂತ್ರಿಗಳ ಪತ್ನಿ ಬೇಗಂ ಅಬ್ದುಲ್ಲರ ವಿನಂತಿಯ ಮೇರೆಗೆ ಲಖನೌ ವಿಶ್ವವಿದ್ಯಾನಿಲಯವು ಗಾಯಗೊಂಡವರ ಚಿಕಿತ್ಸೆಗಾಗಿ ಒಂದು ವೈದ್ಯಪಥಕವನ್ನು ಕಳಿಸಲು ನಿರ್ಧರಿಸಿದೆ.

ಬಿಹಾರ ಮತ್ತು ಸಂಯುಕ್ತ ಪ್ರಾಂತಗಳ ಸಕ್ಕರೆಯ ಕಮಿಶನರರು ಇಂಡಿಯನ್ ಶುಗರ್ ಸಿಂಡಿಕೇಟಿನ ಅಧ್ಯಕ್ಷರೊಡನೆ ಮಾತಾಡಿ ಇನ್ನು ಮೇಲೆ ಸಕ್ಕರೆಯ ಮಾರಾಟವು ಹಿಂದೀ ಶರ್ಕರಾತಂತ್ರ ಸಂಸ್ಥೆಯ ಮಟ್ಟಗಳಿಗನುಗುಣವಾಗಿ ನಡೆಯಬೇಕೆಂದು ಕಾರಖಾನೆಗಳಿಗೂ ಮಾರಾಟಗಾರರಿಗೂ ತಿಳಿಸಲು ನಿರ್ಧರಿಸಿದ್ದಾರೆ.

ಪಶ್ಚಿಮಬಂಗಾಲ

ಮಂಗಳೂರೆಂಬ ಹಡಗಿನ ೪ ನಾವಿಕರು ಮಧ್ಯರಾತ್ರಿಯಲ್ಲಿ ಕಲಕತ್ತದ ರಸ್ತೆಯಲ್ಲಿ ಮೋಟಾರಲ್ಲಿ ಕುಳಿತು ಹೋಗುತ್ತಿದ್ದಾಗ ಮೋಟಾರು ೩೦ ಅಡಿ ತಗ್ಗಿಗೆ ಬಿದ್ದು ಅವರು ಮರಣ ಹೊಂದಿದರು.

ಕರ್ನಾಟಕ ಶಿಕ್ಷಣ ಸಮಿತಿ

ಸಾಹಿತ್ಯ ಪಾರಿತೋಷಕ

ಪ್ರತಿವರ್ಷದ ಕರ್ನಾಟಕ ಶಿಕ್ಷಣ ಸಮಿತಿಯು ಕೊಡುವ ಸಾಹಿತ್ಯ ಪಾರಿತೋಷಕದ ಸಂಬಂಧವಾಗಿ ೨೧-೧೨-೪೭ ರ ಸಂಯುಕ್ತ ಕರ್ನಾಟಕದ ಪತ್ರಿಕೆಯಲ್ಲಿ ಪ್ರಸಿದ್ಧವಾದ ಪ್ರಕಟನೆ ಕಳೆದ ವರುಷ ಹೊರಬಿದ್ದಿತ್ತು. ಸಮಿತಿಯು ಕಡೆಗೆ ಬಾರದಿದ್ದ ಕಾರಣ ಆ ವರುಷದ ಪಾರಿತೋಷಕವು ಹಾಗೆಯೇ ಉಳಿದು ಹೋಗಿದೆ. ಕಾರಣ ಈ ವರುಷ ಕೆಳಗೆ ಕಾಣಿಸಿದ ಅದೇ ವಿಷಯಗಳಲ್ಲೊಂದರ ಬಗ್ಗೆ ಪ್ರಕಟವಾದ ಪುಸ್ತಕಕ್ಕೆ ಪಾರಿತೋಷಕ ಕೊಡಲು ನಿಶ್ಚಯಿಸಿದೆ. ಈ ಸಾರೆಯ ಪಾರಿತೋಷಕವು ಒಟ್ಟು ರೂಪಾಯಿ ೨೦೦—೦—೦ ಗಳಿದ್ದು, ಒಂದು ಅಥವಾ ಎರಡು ಪುಸ್ತಕಗಳಿಗೆ ಹಂಚಿಕೊಡಬಹುದು.

ಪಾರಿತೋಷಕದ ಬಗ್ಗೆ ಕೆಳಗಿನ ನಿಯಮಗಳನ್ನು ಅನುಸರಿಸಬೇಕು.

೧) ಪುಸ್ತಕದ ವಿಷಯ: (ಅ) ರಾಜನೀತಿಶಾಸ್ತ್ರ, (ಆ) ಅರ್ಥಶಾಸ್ತ್ರ ಅಥವಾ (ಇ) ಸಮಾಜಶಾಸ್ತ್ರ ಇರಬೇಕು.

೨) ಪುಸ್ತಕವು ಸ್ವತಂತ್ರ ಕನ್ನಡದಲ್ಲಿದ್ದು ಕನಿಷ್ಠ ೧೦೦ ಪುಟಗಳದ್ದಿರಬೇಕು, ಅಚ್ಚಾಗಿರಬೇಕು.

೩) ಪುಸ್ತಕವು ೧-೮-೪೭ ರಿಂದ ೧-೮-೪೯ ರೊಳಗೆ ಪ್ರಕಟವಾಗಿದ್ದಿರಬೇಕು.

೪) ಕೇವಲ ಭಾಷಾಂತರ ಅಥವಾ ರೂಪಾಂತರ ಇರಕೂಡದು. ಮೌಲಿಕವಿದ್ದಷ್ಟು ಹೆಚ್ಚು ಗುಣ.

೫) ಇಚ್ಛೆಕರು ಅಯಾ ಪುಸ್ತಕದ ಮೂರು ಪ್ರತಿಗಳನ್ನು ಕೆಳಗಿನ ಪತ್ತೆಗೆ ೧—೮—೪೯ ರೊಳಗೆ ಮುಟ್ಟುವಂತೆ ಕಳಿಸಿ ಪಾವತಿ ಪಡೆಯಬೇಕು.

ಪಾರಿತೋಷಕದ ನಿರ್ಣಯವು ೩೧—೧೦—೪೯ ಕ್ಕೆ ಕೊಡಲಾಗುವದು ಎಂದು ಕಾರ್ಯದರ್ಶಿ ಕರ್ನಾಟಕ ಶಿಕ್ಷಣ ಸಮಿತಿ C/o ಸಂಯುಕ್ತ ಕರ್ನಾಟಕ ಅವರು ಪ್ರಕಟಿಸುತ್ತಾರೆ.

---

* ಕಾಶ್ಮೀರದಲ್ಲಿ ಆಹಾರದ ಕೊರತೆಯುಂಟಾದುದರಿಂದ ಹಿಂದೀ ಸರಕಾರವು ಅಲ್ಲಿಗೆ ೩೧,೫೦೦ ಟನ್ ಆಹಾರ ಧಾನ್ಯಗಳನ್ನು ಕಳಿಸಲು ಒಪ್ಪಿದೆ. ಈಗಾಗಲೆ ೧೧ ಸಾವಿರ ಟನ್ನಷ್ಟನ್ನು ಕಳಿಸಲಾಗಿದೆ, ಮಿಕ್ಕ ಪಾಲನ್ನು ಶೀಘ್ರವಾಗಿ ಕಳಿಸುವ ಏರ್ಪಾಡು ಮಾಡಲಾಗಿದೆ.

* ಹಿಂದುಸ್ತಾನ ಸರಕಾರ ಜುಲೈ ೧ ರಿಂದ ರಾಮಪುರದ ಆಡಳಿತೆಯನ್ನು ವಹಿಸಿಕೊಳ್ಳಲು ನಿರ್ಧರಿಸಿದೆ ಎಂದು ಸಂಸ್ಥಾನ ಶಾಖೆಯ ರಾಜನೀತಿಯ ಸಲಹೆಗಾರರಾದ ಶ್ರೀ ವಿ. ಪಿ. ಮೆನನ್ನರು ಪತ್ರಿಕಾಪರಿಷತ್ತಿನಲ್ಲಿ ತಿಳಿಸಿದರು.

* ಸುಬ್ರಹ್ಮಣ್ಯದಲ್ಲಿ ಶ್ರೀ ವಿಶ್ವೇಶ ತೀರ್ಥ ಸ್ವಾಮಿಗಳ ಅಧ್ಯಕ್ಷತೆಯಲ್ಲಿ ಜರಗಿದ ಅ. ಕ. ಸರ್ವಧರ್ಮಸಮ್ಮೇಳನದಲ್ಲಿ ಮದ್ರಾಸ ಮುಜ ದೇವಸ್ಥಾನ ಮಸೂದೆ, ಕೇಂದ್ರ ಹಿಂದೂ ಕಾಯದೆ ಮಸೂದೆಗಳನ್ನು ಖಂಡಿಸಿ ಪ್ರಸ್ತಾವಿಸಿದ ಪ್ರತಿಬಂಧ ಮಸೂದೆ ತರಲು ಕೇಳಿಕೊಳ್ಳಲಾಯಿತು.

ಲಂಡನ್ ನಿರ್ಣಯಕ್ಕೆ ಘಟನಾ ಸಮಿತಿಯ ಸಮ್ಮತಿ

(೪ನೆಯ ಪುಟದಿಂದ ಬಂದುದು)

ಬಾರದೆಂದು ಬೆಂಗಳೂರಲ್ಲಿ ಮೊನ್ನೆಗೆ ಆಧ್ಯಾಪ ದಿತ್ತು. ಅದೇ ಉಸಿರಲ್ಲಿ, ಮೈಸೂರಿನ ವಿಲ ಯನದ ಪ್ರಶ್ನೆಯನ್ನು ಮಹಾರಾಜರಿಗೆ ಬಿಟ್ಟು ಬಿಡಬೇಕೆಂದು ಪದೇಶಿಸಿದ್ದು ದರಿದ್ರರ ವಿಚಾರ ಧಾರೆಯ ದಿಶೆಯನ್ನು, ಅವರ ಗುರಿ ಯಾವ ನಿಸ್ತ್ರಿಸಹ್ಯಾನದ ಮೇಲಿದೆಯೆಂಬುದನ್ನೂ ಸೂಚಿ ಸುತ್ತದೆ.

ಸಂಪಾದಕರ ಪರಿಷತ್ತು

ಕರ್ನಾಟಕದಲ್ಲಿ ಮೊದಲನೆ ಬಾರಿ ಅ. ಭಾ. ಸಂಪಾದಕ ಪರಿಷತ್ತು ವಾರಾರಂಭದಲ್ಲಿ ಬೆಂಗ ಳೂರಲ್ಲಿ ಸೇರಿತು. ಗವರ್ನರ ಜನರಲ್ ರಾಜಾಜಿಯವರು ಅದನ್ನು ಉದ್ಘಾಟಿಸುತ್ತ ಸ್ವಾತಂತ್ರ್ಯದೊಡನೆ ನಮ್ಮ ಹೊಣೆಯೂ ಬಹಳವಾಗಿ ಹೆಚ್ಚಿರುವದರಿಂದ ಪತ್ರಿಕೆಗಳು ತಮ್ಮ ಹೊಣೆಯರಿತುಕೊಂಡು ಅಪಾಯಕರ ವಾಗಿ ಪರಿಣಮಿಸಬಹುದಾದ ಯಾವ ತಪ್ಪು ತಡೆಗಳನ್ನೂ ಮಾಡಬಾರದೆಂದು ಬೋಧಿಸಿ ದರು. ಕಾಯದೆಯ ಪುಸ್ತಕಗಳಲ್ಲಿ ಭಯಂ ಕರ ಕಾಯದೆಗಳಿರಬಹುದಾದರೂ ಈ ದೇಶದ ಪತ್ರಿಕೆಗಳು ಪರಮಾವಧಿ ಸ್ವಾತಂತ್ರ್ಯವನ್ನನು ಭವಿಸುತ್ತಿವೆಯೆಂದು ಅವರು ವಾದಿಸಿದರು. ಮಿತಿಮೀರಿದ ಸ್ವಾತಂತ್ರ್ಯವೂ ಮಾರಕವಾದು ದೆಂದು ಅವರ ಅಭಿಪ್ರಾಯವಾಗಿತ್ತು. ಪತ್ರಿಕಾ ಪ್ರಪಂಚವೊಂದು ವಿಶ್ವವಿದ್ಯಾಲಯದಂತಿದ್ದು ಜನತೆಯಲ್ಲಿ ಶಿಸ್ತು ಸಜ್ಜನಿಕೆಯನ್ನು ತುಂಬುವ ಶಕ್ತಿ ಅದಕ್ಕಿದೆಯೆಂದು ಅವರು ಸೂಚಿಸಿ ದರು. ಸ್ವಾಗತಾಧ್ಯಕ್ಷರಾದ ಕನ್ನಡ ಪತ್ರಿಕಾ ಪ್ರಪಂಚದ ಭೀಷ್ಮರೆನಿಸಬಹುದಾದ ಶ್ರೀ ಡಿ. ವಿ. ಗುಂಡಪ್ಪನವರು ತಮ್ಮ ಭಾಷಣದಲ್ಲಿ ಅನೇಕ ದೂರದೃಷ್ಟಿಯುತ ಸೂಚನೆ ಗಳನ್ನು ಮಾಡಿದರು. ಪತ್ರಿಕೋದ್ಯೋಗಿಗಳ ತರಬೇತಿಗಾಗಿ ಯೋಗ್ಯ ಶಿಕ್ಷಣ ಸಂಸ್ಥೆಗಳನ್ನು ಪ್ರಮುಖ ಪತ್ರಿಕಾ ಕೇಂದ್ರಗಳಲ್ಲಿ ಪರಿಷತ್ತೇ, ಸರಕಾರದ ಮುಖ ನೋಡದೆ, ಸ್ಥಾಪಿಸಿಕೊಳ್ಳ ಬೇಕೆಂಬ ಮತ್ತು ಪತ್ರಿಕೆಗಳ ಮೇಲೆ ಕ್ರಮ ಕೈಕೊಳ್ಳುವ ಮೊದಲು ಅ ಸೂಚನೆಯನ್ನು ಒಂದು ಸಲಹೆ ಮಂಡಲದ ಮುಂದಿಡಬೇಕೆಂಬ ಅವರ ಸೂಚನೆಗಳು ಮಹತ್ವದವು. ಈ ವರ್ಷದ ಅಧ್ಯಕ್ಷರಾಗಿ ಅವಿರೋಧ ಆರಿಸಲ್ಪಟ್ಟ ಮದ್ರಾ ಸಿನ ತಮಿಳು "ಸ್ವದೇಶ ಮಿತ್ರನ್" ಪತ್ರಿಕೆಯ ಸಂಪಾದಕರಾದ ಶ್ರೀ ಸಿ ಆರ್ ಶ್ರೀನಿವಾಸನ್‍ರು ಸ್ವತಂತ್ರ ಪ್ರಜಾಸತ್ತೆಯಲ್ಲಿ ಮತದಾರರನ್ನು ಸುಜ್ಞರನ್ನಾಗಿ ಮಾಡುವ ಹೊಣೆ ವೃತ್ತಪತ್ರ ಗಳ ಮೇಲಿದೆಯೆಂದರು. ಭಾರತದಲ್ಲಿ ಪತ್ರಿಕಾಪ್ರಸಾರ ಇತರದೇಶಗಳಲ್ಲಿರುವದಕ್ಕಿಂತ ತೀರ ಕಡಿಮೆಯಾಗಿದೆ. ಆದರೆ ಪ್ರೌಢ ಮತದಾನ ಪದ್ಧತಿಯಂತೆ ನಾಳೆ ಚುನಾವಣೆಗಳಾಗುವಾಗ ಓದುಗರ ಪ್ರವಾಹವೇ ಪತ್ರಿಕೆಗಳ ಕಡೆ ತಿರುಗ ಬಹುದು. ಅದಕ್ಕೆ ನಾವು ಸಿದ್ಧರಾಗಬೇಕು. ದೇಶದ ಆರ್ಥಿಕ ಅಭ್ಯುದಯಕ್ಕಾಗಿ ಸರಕಾರದ ವರು ಕೈಕೊಳ್ಳುವ ಕ್ರಮಗಳಿಗೆ ಬೆಂಬಲ ನೀಡುವದಾದರೂ ಅದು ತಪ್ಪು ಮಾಡಿ ದ್ದಲ್ಲಿ ತೋರಿಸಿ ಕೊಡುವದು ನಮ್ಮ ಕರ್ತವ್ಯ. ಕೀಳ್ಮಟ್ಟದ ಪತ್ರಿಕೆಗಳು ಜನತೆಯ ಹೃದಯದಲ್ಲಿ ವಿಷ ತುಂಬುವದನ್ನು ತಡೆಯಲು ಪರಿಷತ್ತು ಸರಕಾರಕ್ಕೆ ಬೆಂಬಲ ನೀಡುವ ದೆಂದು ಹೇಳಿದ್ದಲ್ಲದೆ ಅಧ್ಯಕ್ಷ ಶ್ರೀನಿವಾಸನ್ನರು ಪತ್ರಿಕೋದ್ಯೋಗದಲ್ಲಿ ದುಡಿಯುವವರಿಗೆ ಯೋಗ್ಯ ವೇತನ, ಪ್ರಾವಿಡೆಂಟ್ ಫಂಡ್, ವಿಮಾ ಮೊದಲಾದ ಸೌಕರ್ಯಗಳನ್ನೊದಗಿ ಸಬೇಕೆಂದೂ ಸೂಚಿಸಿದರು. ಪಾಸಾದ ಗೊತ್ತುವಳಿಯಲ್ಲಿ, ಪತ್ರಿಕೋದ್ಯೋಗಿಗಳ ಸಂಬಳ ಮೊದಲಾದ ವಿವರಗಳನ್ನು ಸಂಗ್ರಹಿಸಿ ಪರಿಷತ್ತಿನ ಕಾರ್ಯದರ್ಶಿಗಳು ವಿವಿಧ ಪತ್ರಿಕಾ ಸಂಸ್ಥೆಗಳಿಗೆ ಸೂಚನೆಗಳನ್ನು ಮಾಡಬೇಕೆಂ ಬದೂ ಪತ್ರಿಕೋದ್ಯೋಗಿಗಳ ತರಬೇತಿಯ ಸಲುವಾಗಿ ಒಂದು ಪತ್ರಿಕೋದ್ಯೋಗ ಶಿಕ್ಷಣ ಸಂಸ್ಥೆ ಸ್ಥಾಪಿಸುವದಕ್ಕಾಗಿ ಒಂದು ಸಮಿತಿ ನೇಮಿಸಬೇಕೆಂಬದೂ ಇವೆ. ಪತ್ರಿಕೆಗಳ ಮೇಲಿನ ಕರವನ್ನು ಪ್ರತಿಭಟಿಸಲಾಯಿತು. ಈ ಕೆಳಗಿನವರು ಸ್ಥಾಯಿ ಸಮಿತಿಗೆ ಆರಿಸಲ್ಪಟ್ಟರು: ಶ್ರೀ ಜೋಶಿಮ ಅಲ್ವಾ, ಎಚ್. ಆರ್. ಮೋಹನಿ, ರಾಮನಾಥ ಗೋಯೆಂಕಾ, ದೇಶ ಬಂಧು ಗುಪ್ತ, ದೇವದಾಸ ಗಾಂಧಿ, ಎಸ್. ಸದಾನಂದ, ತುಷಾರ ಕಾಂತಿ ಘೋಷ, ಎ. ಡಿ. ಮಣಿ, ಬಿ. ಸೇನಗುಪ್ತಾ, ಶಂಭು ಪ್ರಸಾದ, ಕಸ್ತೂರಿ ಶ್ರೀನಿವಾಸನ್, ಕೆ. ಶ್ರೀನಿವಾಸನ್, ಪಿ. ಡಿ ಥಥಳೆ, ಸುರೇಶ ಮುಜುಮುದಾರ, ಜಿ. ವಿ. ಕೃಪಾನಿಧಿ, ಪಿ. ಪಿ. ಮಿಶ್ರ, ಎ. ಎಸ್. ಶಿವರಾಮನ್, ಎಚ್. ಎಂ. ಜೋಶಿ, ಡಾ. ಪಟ್ಟೇದಪ್ಪ ಸೇಠ, ಎಂ. ಹ್ಯಾರಿಸ್, ಶ್ರೀಕಾಂತ ಠಾಕೂರ.

ಆಹಾರಕೊರತೆ ಮತ್ತು ತಾಳೆ ಮರಗಳು

(೧೩ ನೇ ಪುಟದಿಂದ ಬಂದುದು)

ಪ್ರಕಾರಗಳನ್ನು ಮಾಡಬಹುದು. ಧಾನ್ಯ ಗಳನ್ನು ಬೆಳೆಯಲು ಬಾರದ, ಒಕ್ಕಲತನಕ್ಕೆ ಉಪಯುಕ್ತವಲ್ಲದ ಪಡಭೂಮಿಗಳಲ್ಲಿ ತಾಳೇ ಮರಗಳು ಬೆಳೆಯುತ್ತವೆ. ಕಬ್ಬಿನಂತೆ ಅವು ಗಳಿಗೇನು ಫಲವತ್ತಾದ ಭೂಮಿ ಬೇಕಿಲ್ಲ ಈಗ ೫ ಕೋಟಿಗಳಷ್ಟು ತಾಳೇ ಮರಗಳಿರುವ ವೆಂದು ಅಂದಾಜು: ಇವುಗಳಲ್ಲಿ ಬಂಗಾಲ ಮತ್ತು ಮದ್ರಾಸ ಪ್ರಾಂತಗಳಲ್ಲಿ ಸುಮಾರು ೧ ಕೋಟಿ ಗಿಡಗಳು ಬೆಲ್ಲಕ್ಕಾಗಿ ಮತ್ತು ಮದ್ಯ ಪ್ರತಿಬಂಧ ಜಾರಿಯಲ್ಲಿರದ ಪ್ರಾಂತಗಳಲ್ಲಿ ಶಿಂದಿ ಗಾಗಿ ಉಪಯೋಗಿಸಲಾಗುತಿವೆ. ಉಳಿದ ೪ ಕೋಟಿ ತಾಳೇ ಮರಗಳಿಂದ ೧೫೩ ಲಕ್ಷ ಟನ್ನ ಬೆಲ್ಲವನ್ನು ತೆಗೆಯಬಹುದಾಗಿದೆ. ಇದರಿಂದ ಸಕ್ಕರೆ ಮತ್ತು ಬೆಲ್ಲದ ಪೂರಯಿಕೆಯನ್ನು ಕಡಮೆ ಮಾಡದೆ ಹೆಚ್ಚು ಧಾನ್ಯಗಳನ್ನು ಬೆಳೆ ಯುವದಕ್ಕಾಗಿ ೬೩ ಲಕ್ಷ ಎಕರೆ ಭೂಮಿಯನ್ನು ಉಳಿಸುವದಕ್ಕಾಗಿ ತಾಳೇ ಮರಗಳ ಉಪ ಯೋಗ ಮಾಡಿಕೊಳ್ಳುವದು ಅತ್ಯವಶ್ಯವಾದ ಉಪಾಯವಾಗಿದೆ.

ಎಲ್ಲರಿಗೂ ಸಮಧಾತು ಆಹಾರ ದೊರೆಯ ಬೇಕೆಂದಿದ್ದರೆ ಕಬ್ಬಿನ ಕ್ಷೇತ್ರವನ್ನು ಇನ್ನೂ ಹೆಚ್ಚಿಸಬೇಕಾಗುವದು. ಪ್ರತಿ ವರ್ಷ ಜನ ಸಂಖ್ಯೆಯು ಹೆಚ್ಚಳ ಸುಮಾರು ೫೦ ಲಕ್ಷ ಅಗುತ್ತದೆಂದು ಅಂದಾಜು. ಈಯೆಲ್ಲ ಜನರ ಸಕ್ಕರೆ ಬೇಡಿಕೆಯನ್ನು ಪೂರಯಿಸುವದಕ್ಕಾಗಿ ಪ್ರತಿ ವರ್ಷ ಇನ್ನೂ ೨೧೦೦೦ ಎಕರೆ ಕಬ್ಬಿನ ಕ್ಷೇತ್ರವನ್ನು ಹೆಚ್ಚಿಸಬೇಕಾಗು ವದು. ಆದರೆ ತಾಳೇ ಮರಗಳ ಬೆಲ್ಲ ವನ್ನು ಉಪಯೋಗಿಸಿದ್ದಾದರೆ ಇಷ್ಟು ಕ್ಷೇತ್ರ ಭೂಪ್ರದೇಶವು ಧಾನ್ಯದ ಉತ್ಪಾದನೆಗೆ ಮೀಸ ಲಾಗಿ ಉಳಿಯಬಹುದು. ಈ ಕ್ಷೇತ್ರದಲ್ಲಿ ಧಾನ್ಯಗಳನ್ನು ಬೆಳೆಯುವದರಿಂದ ಪ್ರತಿಯೊಬ್ಬ ರಿಗೆ ೧೨ ಔಂಸುಗಳಂತೆ ೧೫ ಲಕ್ಷ ಜನರಿಗೆ ಸಾಲುವಷ್ಟು ಆಹಾರ ಧಾನ್ಯಗಳನ್ನು ಬೆಳೆಯ ಬಹುದು.

ಸಕ್ಕರೆಯ ಶಾಶ್ವತ ಆಕರ

ಕಬ್ಬನ್ನು ಸಾಮಾನ್ಯವಾಗಿ ಪ್ರತಿ ವರ್ಷ ಬಿತ್ತಬೇಕಾಗುತ್ತದೆ. ಬಹಳ ಸಂಶೋಧನೆಯ ನಂತರ ಮೂರು ನಾಲ್ಕು ವರ್ಷಗಳಿಗೊಮ್ಮೆ ಅದನ್ನು ಕಿತ್ತಿಹಚ್ಚಬಹುದೆಂದು ಕಂಡು ಹಿಡಿಯಲಾಗಿದೆ. ಆದರೆ ತಾಳೇ ಮರಗಳನ್ನು ಒಮ್ಮೆ ಬೆಳೆಸಿದ್ದಾದರೆ ಹತ್ತು ಹನ್ನೆರಡು ವರುಷಗಳ ವರೆಗೆ ಅತ್ತ ವಿಶೇಷ ಲಕ್ಷ ಪೂರೈ ಸದೆ ಪ್ರತಿ ವರ್ಷ ಸಕ್ಕರೆಯನ್ನು ಪಡೆಯ ಬಹುದು. ಕಬ್ಬು ತಾನಾಗಿಯೆ ಹಬ್ಬುವದಿಲ್ಲ. ಅದಕ್ಕಾಗಿ ಕೃತ್ರಿಮವಾಗಿ ಅದನ್ನು 'ಕಿತ್ತು ಹಚ್ಚಬೇಕಾಗುತ್ತದೆ. ತಾಳೇ ಮರಗಳು ತಾವಾಗಿಯೆ ಬೆಳೆಯುತ್ತವೆ. ಈಗಿದ್ದ ಬಹುಶಃ ಎಲ್ಲ ತಾಳೇಮರಗಳು ಸ್ವಾಭಾವಿಕವಾಗಿ ಬೆಳೆದವುಗಳು.

ಉತ್ಪಾದನೆಗೆ ಅಪ್ರತ್ಯಕ್ಷ ಪ್ರೋತ್ಸಾಹ

ಈ ರೀತಿ ಧಾನ್ಯದ ಉತ್ಪಾದನೆಗೆ ತಾಳೇ ಮರಗಳ ಪ್ರತ್ಯಕ್ಷವಾಗಿ ಸಹಾಯಕವಾಗುವ ದಲ್ಲದೆ, ಅಪ್ರತ್ಯಕ್ಷವಾಗಿ ಒಕ್ಕಲತನದ ಉತ್ಪ ತ್ತಿಯನ್ನು ಹೆಚ್ಚಿಸಿ ಧಾನ್ಯದ ಉತ್ಪಾದನೆ ಯನ್ನೂ ಹೆಚ್ಚಿಸಲು ಅವು ಸಹಾಯಕವಾಗು ವವು.

ಭೂಮಿಯ ಸಾರ ರಕ್ಷಣೆ

ತಾಳೇ ಮರಗಳ ಬೇರು ಆಳವಾಗಿ ಇಳಿಯು ವವಲ್ಲದೆ ಅಡ್ಡ ಹಬ್ಬುವದಿಲ್ಲ. ಇದರಿಂದ ತಾಳೇ ಮರ ಬೆಳೆಯಲು ಅವಕಾಶ ದೊರೆಯುತ್ತದೆ. ಕಬ್ಬನ್ನು ಬೆಳೆಯುವದರಿಂದ ಭೂಮಿಯ ಸಾರ ಕಡಮಿಯಾಗುತ್ತದೆ. ಆದುದರಿಂದ ಅದಕ್ಕಾಗಿ ಆಗಾಗ ಗೊಬ್ಬರವನ್ನು ಹಾಕ ಬೇಕಾಗುತ್ತದೆ. ಆದುದರಿಂದ ಒಂದು ವರ್ಷ ಕಬ್ಬು ಬಿತ್ತಿದರೆ ಮರುವರುಷ ಯೋಗ್ಯ ದ್ವಿದಳಧಾನ್ಯಗಳನ್ನು ಬೆಳೆಯುವ ಪರಿಪಾಠ ವುಂಟು. ಕೆಲಸ ಕಬ್ಬಿನ ಗೂಡವೆ ಈ ದ್ವಿದಲ ಧಾನ್ಯವನ್ನು ಬಿತ್ತುವದುಂಟು.

ಕಬ್ಬಿಗೆ ಹೆಚ್ಚು ನೀರು ಬೇಕಾದ್ದರಿಂದ ಕೆಲ ಪ್ರಾಂತಗಳಲ್ಲಿ ಬಹಳ ನೀರು ಉಳಿದು ಎಷ್ಟೋ ಹೊಲಗಳ ಫಲವತ್ತತೆ ಕಡಮೆಯಾದು ದುಂಟು. ಆದರೆ ತಾಳೇಮರಗಳನ್ನು ಹೆಚ್ಚಿಸಿ ದ್ದಾದರೆ ನೆರೆಯಿಂದ ಬಳೆದು ಹೋಗಬಹು ದಾದ ಹೊಲಗಳ ರಕ್ಷಣೆಯಾಗು ವದು. ಅಲ್ಲದೆ ನದಿಯ ದಂಡೆಯ ಸವಳು ಮುಂತಾದ್ದು ಕಡಮೆಯಾಗುವದು ಮತ್ತು ಅನೇಕ ಸಲ ಭೂಮಿಯಲ್ಲಿ ಮಣ್ಣುಬಿಟ್ಟು ಅದು ಫಲವತ್ತಾಗುವದುಂಟು. ಇದಕ್ಕಾಗಿಯೆ ಹೊಲಗಳ ಬದಿಯಲ್ಲಿ ತಾಳೆ ಮರಗಳನ್ನು ಹಚ್ಚುವ ರೂಢಿಯು ಬಂಗಾಲ, ಮದ್ರಾಸ, ಮುಂಬಯಿ, ಬಿಹಾರ, ಓಡಿಸಾ ಮೊದಲಾದ ಪ್ರಾಂತಗಳಲ್ಲಿ ಬಹಳ ದಿನಗಳಿಂದ ಉಂಟು.

(ಅಪೂರ್ಣ)

ವ್ಯಾಪಾರಲೋಕ

ಮುಂಬಯಿ ಶೇರಪೇಟೆ

ತಾ. ೧೯

ಪೇಟೆಯಲ್ಲಿ ಕಳೆದವಾರದಿಂದ ತುಸು ಸುಧಾ ರಣೆ ಕಂಡು ಬಂದಿದೆ. ಜವಳಿ ಪಾಲುಗಳು ಕೆಲವು ಸುಧಾರಿಸಿವೆ. ಇಂದಿನ ಕೊನೆಯ ಬೆಲೆ ಗಳು ಹೀಗಿದ್ದವು:

ಮುಂಬಯಿ ಡಾಯಿಂಗ್	೯೮೫–೦–೦
ಸೆಂಟ್ರಲ ಇಂಡಿಯಾ	೨೩೫–೦–೦
ಸೆಂಚುರಿ	೨೫೩–೧೨–೦
ಗೋಕಾಕ	೨೬೩–೦–೦
ಕೋಹಿನೂರು	೨೭೩–೧೨–೦
ಸಿಂಪ್ಲೆಕ್ಸ	೧೭೪–೦–೦
ಸ್ವದೇಶಿ	೨೮೮–೮–೦
ಸಿಂಧ್ಯ ಸ್ಟೀಮ	೧೩–೯–೦
ಟಾಟಾ ಸ್ಟೀಲ ಡೆಫರ್ಡ	೧೩೫೧–೪–೦
ಇಂಡಿಯನ್ ಅಯರ್ನ	೨೨–೧೧–೦
ಅಸೊ. ಸಿಮೆಂಟ್ಸ	೧೩೭–೮–೦
ಸೆಂಟ್ರಲ ಬ್ಯಾಂಕ್	೮೧–೦–೦
ಇಂಪೀರಿಯಲ್ ಬ್ಯಾಂಕ್(ಪೂರ್ಣ)	೧೭೬೫–೦–೦
ಬ್ಯಾಂಕ ಆಫ್ ಇಂಡಿಯಾ	೧೮೦–೦–೦

ಚಿನ್ನ ಬೆಳ್ಳಿ

ಪೇಟೆಯಲ್ಲಿ ವಾಯದಾದಲ್ಲಿ ಕೊಳ್ಳುವ ಮತ್ತು ಮಾರುವ ವ್ಯಾಪಾರಿಗಳು ಅರ್ಧ ಹಣ ವನ್ನು ಸಂಘದಲ್ಲಿಡಬೇಕೆಂದು ಬುಲಿಯನ್ ಸಂಘದವರು ನಿಯಮ ಮಾಡಿದ್ದಾರೆ. ಚಿನ್ನದ ಬೆಲೆ ೧೧೯ ರೂಪಾಯಿಯ ಗಡಿದಾಟಿ ಹೋಗಿ ಈಗ ತಿರಗಿ ಇಳಿಮುಖವಾಯಿತು. ಇಂದಿನ ಬೆಲೆಗಳು ಇಂತಿವೆ.

ತಯಾರಿ ಚಿನ್ನ	೧೧೮–೮–೦
ವಾಯದಾ ,,	೧೧೭–೮–೦
ಸಾವರಿನ	೭೫–೬–೦
ತಯಾರಿ ಬೆಳ್ಳಿ	೧೮೪–೬–೦
ವಾಯದಾ ,,	೧೮೩–೧೪–೦

ಅರಳೆ

ಅನಧಿಕೃತ ದರಗಳು ಇಂತಿವೆ.

ಮೇ	೬೨೭–೪–೦
ಜುಲೈ	೬೨೪–೦–೦
ಸೆಪ್ಟೆಂಬರ	೬೨೨–೧೨–೦

ಹುಬ್ಬಳ್ಳಿ

(ಅ. ಪ್ರೊ. ಮಾರ್ಕೆಟ ಕಮೀಟಿ ಹುಬ್ಬಳ್ಳಿ)

ತಾ. ೧೯

ಜ. ಹೊಸ ಹತ್ತಿ (ನಗಕ್ಕೆ)		೫೦೦–೫೨೫
ಅಪ್ಲಂಡ ಹತ್ತಿ		೪೯೦–೫೨೦
ಜ. ಅರಳಿ		೩೦೦–೩೩೦
ಡಬಲ್ ರೋಲ್ ,,	,,	೩೦೫–೩೧೦
ಕುಸುಬಿ (ಬ. ಮಣಕ್ಕೆ)		೧೫–೦–೦
ಅಗಸಿ	(ಚೀಲಕ್ಕೆ) —	೪೩–೪೪-೮-೦
ಔಡಲ	,,	೩೮–೩೯
ಜ. ಹೆಸರು	,,	೩೯–೦– ೪೦–೦–೦
ಕರಿ ಎಳ್ಳು	,,	೬೪–೭೫
ಬಿಳಿ ಎಳ್ಳು	,,	೭೨–೭೩
ಕಡಲೆ	,,	೫೫.೦-೦ ೫೬ ೮–೦
ಜ. ತೊಗರಿ	,,	೩೦–೩೨
ಹುರಳಿ	,,	೩೫–೩೬–೮–೦
ಕೆಂ. ಅಲಸಂದಿ	,,	೫೨–೫೫
ಬಿ. ಅಲಸಂದಿ	,,	೫೬
ಶೇಂಗಾ (ಹೇರು)		೪೮–೫೧
ಶೇಂಗಾ ಕಾಳು		೬೬—೬೮

Reg. No. B. 3148

LICENCE No. 3
Licenced to Post without Prepayment

KARMAVEER 23-5-49

ಕರ್ನಾಟಕದಲ್ಲಿ

ಧಾರವಾಡ

ಸಂಬಳದ ಹೆಚ್ಚಳವೇ ಮೊದಲಾದ ಸೌಕರ್ಯಗಳನ್ನು ಬೇಡಿ ೨ ತಿಂಗಳ ಹಿಂದೆ ನೋಟೀಸು ಕೊಟ್ಟಂತೆ ಹುಬ್ಬಳ್ಳಿ ನಗರದ ಭಂಗಿಗಳು ತಾ. ೧೩ ರಿಂದ ರಾಜೀನಾಮೆ ಸಲ್ಲಿಸಿ ಮನೆಯಲ್ಲಿ ಕುಳಿತರು. ನಗರ ಸಭಾಧಿಕಾರಿಗಳು ಈ ಬಿಕ್ಕಟ್ಟಿನಿಂದ ಪಾರಾಗಲು ನಾಗರಿಕರು ಸ್ವಯಂಸೇವಕರಾಗಬೇಕೆಂದು ಬಿನ್ನವಿಸಿ ಭಂಗಿಗಳು ಕೆಲಸಕ್ಕೆ ಬಾರದಿದ್ದಲ್ಲಿ ಅವರ ಪ್ರೊವ್ಹಿಡೆಂಟ ಫಂಡನ್ನು ಜಪ್ತಮಾಡಿ ಅವರಿಗಿತ್ತ ವಸತಿ ಸೌಕರ್ಯಗಳನ್ನು ರದ್ದುಗೊಳಿಸುವದಾಗಿ ತಿಳಿಸಿದ್ದರು. ತಾ. ೧೬ ರಾತ್ರಿ ಸಂಧಾನ ನಡೆದು ೫ ರೂಪಾಯಿಯ ತಾತ್ಪೂರ್ತಿಕ ಭತ್ತೆ ಪಡೆದು ತಾ. ೧೭ ರಿಂದ ಭಂಗಿಗಳು ಕೆಲಸಕ್ಕೆ ಹಾಜರಾಗಿದ್ದಾರೆ.

ಧಾರವಾಡ ಜಿಲ್ಹಾ ಪೂರೈಕೆ ಸಲಹೆ ಸಮಿತಿಯ ತಾ. ೧೩ ರ ಸಭೆಯಲ್ಲಿ, ಹುಬ್ಬಳ್ಳಿ ತಾಲೂಕ ಗೋಪನಕೊಪ್ಪದಲ್ಲಿ ಕೂಡಲೆ ಒಂದು ವಿತರಣ ಅಂಗಡಿ ತೆರೆಯಬೇಕು, ಹತ್ತಿಕಾಳಿನ ಬೆಲೆ ನಿಯಂತ್ರಣ ಬೇಡ, ಜೂನ ೧ ರಿಂದ ಚಿಮಣಿಎಣ್ಣೆ ಪೂರೈಕೆ ನಿಯಂತ್ರಣ ಹೇರಿರುವದರಿಂದ ಒಕ್ಕಲತನಕ್ಕಾಗಿ ರೈತರಿಗೆ ವಿಶೇಷ ಪರಮಿಟ್ಟುಗಳ ಮೂಲಕ ಎಣ್ಣೆ ಹಂಚಬೇಕು, ತಮ್ಮ ಹತ್ತಿಯನ್ನು ಜಿನ್ನಿಗೆ ಹಾಕಿದ ಒಕ್ಕಲಿಗರಿಗೆ ಬೀಜದ ಸಲುವಾಗಿ ಯೋಗ್ಯ ಪ್ರಮಾಣದಲ್ಲಿ ಹತ್ತಿಕಾಳು ಬಿಡಬೇಕೆಂದಿತ್ಯಾದಿ ಸೂಚನೆಗಳು ಮಾಡಲ್ಪಟ್ಟವು.

ಧಾರವಾಡ ಜಿಲ್ಹಾ ಪ್ರಾಥಮಿಕ ಶಿಕ್ಷಕರ ಸಂಘದ ವಾರ್ಷಿಕ ಸಭೆ ಶ್ರೀ ಬಿ. ಎನ್. ಬೆಂಡಿಗೇರಿ ವಕೀಲರ ಅಧ್ಯಕ್ಷತೆಯಲ್ಲಿ ಸೇರಿ ೧೯೪೯-೫೦ ರ ಬಗ್ಗೆ ಶ್ರೀ ಬೆಂಡಿಗೇರಿಯವರನ್ನು ಅಧ್ಯಕ್ಷರಾಗಿಯೂ ಶ್ರೀ ಅ. ಚ. ಕಾಗದಗರರನ್ನು ಕಾರ್ಯಾಧ್ಯಕ್ಷರಾಗಿಯೂ ಶ್ರೀ ನಾ. ಗ. ಸಾಲಿಮಠರನ್ನು ಕಾರ್ಯದರ್ಶಿಯಾಗಿಯೂ ಆರಿಸಿತು. ಶಿಕ್ಷಕ ವರ್ಗದ ಕುಂದು ಕೊರತೆಗಳನ್ನು ಕುರಿತು ಹಲವು ಗೊತ್ತುವಳಿಗಳಾದವು.

ಹೊಸರಿತ್ತಿ ಹಾಗು ಕೊರಡೂರ ಗ್ರಾಮ ಪಂಚಾಯತಿಗೆ ಹುತಾತ್ಮ ಮಹಾದೇವ ಮೈಲಾರರ ಸಂಗಡಿಗರಾದ ಶ್ರೀ ಸಂಗಪ್ಪ ಹಿತ್ತಲಮನೆಯವರು ಸರಪಂಚರಾಗಿ ಆರಿಸಿ ಬಂದಿದ್ದಾರೆ. ಬಹುದಿನಗಳಿಂದ ಪಂಚಾಯತಿಯಲ್ಲಿದ್ದ ಎರಡು ಬಣಗಳು ಅವರ ಪ್ರಯತ್ನಗಳಿಂದ ಒಟ್ಟಾದವು.

ಮುಂಬಯಿ ಗೃಹಮಂತ್ರಿಗಳಾದ ಶ್ರೀ ಮೊರಾರಜಿ ದೇಸಾಯಿಯವರು ತಾ. ೧೧ ಕ್ಕೆ ಧಾರವಾಡಕ್ಕೆ ಭೆಟ್ಟಿ ಕೊಟ್ಟಾಗ ಪೋಲೀಸ ಹಾಗು ಗೃಹರಕ್ಷಕ ದಲದ ಸಂಯುಕ್ತ ಪರೇಡನ್ನು ನೋಡಿ ಮೆಚ್ಚಿಗೆ ವ್ಯಕ್ತಗೊಳಿಸಿದರು. ತಾ. ೧೦ ರಾತ್ರಿ ಅವರು ಕಲೆಕ್ಟರರಲ್ಲಿ ಭೋಜನ ಸಮಾರಂಭದ ಸಮಯ ಸ್ಥಾನಿಕ ಕಾರ್ಯಕರ್ತರನ್ನು ಭೆಟ್ಟಿಯಾಗಿ ಮಾತುಕತೆ ನಡೆಸಿದರು.

ಬೆಳಗಾವಿ

ಸವದತ್ತಿಯಲ್ಲಿ ರಾಮಪ್ಪ ಭೀಮಪ್ಪ ಪಾಲಣ್ಣವರ ಎಂಬವರ ಎತ್ತುಗಳು ೮ ಚೀಲ ಜೋಳ ಹೇರಿದ ಚಕ್ಕಡಿಗೆ ಹಿಮ್ಮೊಗವಾಗಿ ಹೂಡಲ್ಪಟ್ಟಿದ್ದರೂ ಚಕ್ಕಡಿಯನ್ನು ಎಳೆದುಕೊಂಡು ಹಿಂಬರಿಕೆಯಾಗಿ ನಡೆದು ಏರುತಗ್ಗಿರುವ ಮುರುವುಗಳನ್ನು ದಾಟಿ ಬಂದು ಪ್ರೇಕ್ಷಕರನ್ನು ಅಚ್ಚರಿಗೊಳಿಸಿದವು.

ಬೆಳಗಾವಿ ಕಲೆಕ್ಟರರು ಒಂದು ಪ್ರಕಟನೆ ಹೊರಡಿಸಿ ೧೯೪೯ ಜೂನ್ ೧ ರಿಂದ ಸೆಪ್ಟೆಂಬರ ೩೦ ರ ವರೆಗೆ ಪ್ರಾಂತದಲ್ಲಿ ಎಲ್ಲಿಯೂ ಗೋದಿ ಬೆಳೆಯತಕ್ಕದಲ್ಲೆಂಬ ಸರಕಾರಿ ಆಜ್ಞೆಯತ್ತ ಜನರ ಲಕ್ಷ್ಯ ಎಳೆದಿದ್ದಾರೆ.

ಮಿಲಿಟರಿ ಲ್ಯಾನ್ಸ್‌ನಾಯಕ ಕುಲದೀಪಕ ಸಿಂಗ ವತ್ಸ ನಂ. ೪೦೫ ಹಿಂಚೆಸ್ಟರ ಬಂದೂಕೊಂದನ್ನು ಕಳ್ಳತನದಿಂದ ಮಾರುತಿದ್ದಾಗ ಬೆಳಗಾವಿಯಲ್ಲಿ ಪೋಲೀಸ ಇನ್‌ಸ್ಪೆಕ್ಟರ ದೊಡ್ಡಮನಿಯವರಿಂದ ಬಂಧಿಸಲ್ಪಟ್ಟಿದ್ದಾನೆ. ಆರ್. ಎಸ್. ಎಸ್. ನವರಿಗೆ ಹಿಂದೆಯೂ ಬಂದೂಕು ಮಾರಿದ ಸಂಶಯ ಅವನ ಮೇಲಿದೆ.

ಶ್ರೀ ನವಣೂರರ ರಾಜೀನಾಮೆಯಿಂದ ತೆರವಾದ ಸ್ಥಳಕ್ಕೆ ಗೋಕಾಕ ನಗರ ಸಭಾ ಉಪಚುನಾವಣೆಯಲ್ಲಿ ಶ್ರೀ ಬಸವಣ್ಣೆಪ್ಪ ಮುನವಳ್ಳಿಯವರು ಪ್ರಚಂಡ ಬಹುಮತದಿಂದ ಆರಿಸಿ ಬಂದರು. ಪ್ರತಿಸ್ಪರ್ಧಿ ಶ್ರೀ ಕಾಶಪ್ಪ ಸದಲಗಿಯವರು ೧೦ ಮತ ಪಡೆದು ಠೇವು ಕಳೆದುಕೊಂಡರು.

ಕನ್ನಡ ಸಂಸ್ಥಾನ

ಬೆಂಗಳೂರಿನ ವಿಶ್ವೇಶ್ವರಪುರ ರಾಷ್ಟ್ರೀಯ ವಿದ್ಯಾಲಯದಲ್ಲಿ ತಾ. ೧೨ ಕ್ಕೆ ಶ್ರೀ ಗೌರೀಶಂಕರ ಸ್ವಾಮಿಗಳವರು ಮಹಾತ್ಮಾ ಗಾಂಧಿಯವರ ಅಹಿಂಸಾ ಮಾರ್ಗವನ್ನೇ ಹಿಡಿದು ಅದೇ ಲೋಕಕ್ಕೆ ತಾರಕವೆಂದು ಭಾಷಣ ಮಾಡಿದರು.

ಹಾಸನದಲ್ಲಿ ಒಂದು ಕರ್ನಾಟಕ ಏಕೀಕರಣ ಸಮಿತಿ ಸ್ಥಾಪಿಸಲ್ಪಟ್ಟಿದ್ದು ಪ್ರಚಾರಕ್ಕಾಗಿ ಅದು ಜಿಲ್ಹೆಯಲ್ಲೆಲ್ಲ ಸಂಚರಿಸಲಿರುವರು.

ಜೋಗಜಲಪಾತ ಮತ್ತು ವಿದ್ಯುತ್‌ಕೇಂದ್ರವನ್ನು ಸಂದರ್ಶಿಸಬರುವವರ ಅನುಕೂಲತೆಗಾಗಿ ಮೈಸೂರು ಸರಕಾರದವರು ತಾಳಗುಪ್ಪೆಯ ಬಳಿ ಒಂದು ವಿಮಾನ ನಿಲ್ದಾಣ ತೆರೆಯುವ ಏರ್ಪಾಡು ಮಾಡುವರೆಂದು ತಿಳಿಯುತ್ತದೆ.

ಬೆಂಗಳೂರಲ್ಲಿ ಶ್ರೀ ಹಿರಾಲಾಲ ಎಚ್ ಎಲ್ ಕಾಜಿಯವರ ಅಧ್ಯಕ್ಷತೆಯಲ್ಲಿ (ತಾ. ಸೇರಿದ ೧೫) ಆನೆ ಅ. ಭಾ. ಸಹಕಾರಿ ಪರಿಷತ್ತಿನಲ್ಲಿ ಹಿಂದೀ ಸಹಕಾರಿ ಸಂಘವೊಂದನ್ನು ಸ್ಥಾಪಿಸಿ ಸಹಕಾರಿ ಚಳವಳಿಯ ನಿರ್ದೇಶ–ನಿಯಂತ್ರಣಗಳನ್ನು ಅದಕ್ಕೊಪ್ಪಿಸಬೇಕೆಂಬ ತೀರ್ಮಾನವಾಯಿತು. ಕಮ್ಯುನಿಜಮನ್ನು ಹಿಡಿತಕ್ಕೆ ತರಲು ಸಹಕಾರಿ ಚಳವಳಿಯೊಂದೇ ಉಪಾಯವೆಂದು ಅಧ್ಯಕ್ಷರು ಅಭಿಪ್ರಾಯಪಟ್ಟರು. ಅಂತರ್.. ಏಶಿಯಾ ಸಹಕಾರಿ ಪರಿಷತ್ತು ಸೇರಿಸಬೇಕೆಂದೂ ನಿರ್ಧರಿಸಲ್ಪಟ್ಟಿದೆ.

ಪಾಕಿಸ್ತಾನ ಸ್ಥಾಪನೆಯಾದೊಡನೆ ೯ ಜನರೊಡನೆ ಅಲ್ಲಿಗೆ ಹೋಗಿ ಮುಂದೆ ಹಿಂದೀ ಹೈಕಮಿಶನರರ ಅಪ್ಪಣೆಪಡೆಯದೆ ಕೃತಕ ಅಪ್ಪಣೆ ಚೀಟಿಗಳನ್ನು ಸೃಷ್ಟಿಸಿ ಭಾರತಕ್ಕೆ ಮರಳಿದ ಇಬ್ಬರನ್ನು ಬೆಂಗಳೂರಲ್ಲಿ ಬಂಧಿಸಲಾಗಿದೆ.

ದಾವಣಗೆರೆಯಲ್ಲಿ ಈ ತಿಂಗಳ ಕೊನೆಯ ವಾರ ಕರ್ನಾಟಕ ಯುವಕ ಪರಿಷತ್ತು ಸೇರುವದು. ೩ ರೂಪಾಯಿ, ತೆತ್ತು ವೈಯಕ್ತಿಕವಾಗಿ ಇಲ್ಲವೆ ಸಂಘಗಳ ಪರವಾಗಿ ಪ್ರತಿನಿಧಿಗಳಾಗಿ ಹೋಗಬಯಸುವವರು ಮಂಡಿಪೇಟಿಯಲ್ಲಿರುವ ಸ್ವಾಗತ ಕಾರ್ಯದರ್ಶಿಗಳಿಗೆ ಬರೆಯಬಹುದು.

ಕನ್ನಡ ಸಾಹಿತ್ಯ ಪರಿಷತ್ತಿನ ಜಾಣ, ಕಾವ ಪರೀಕ್ಷೆಗಳಿಗೆ (ಎಪ್ರಿಲ್ ೨) ೧೨ ಕೇಂದ್ರಗಳಲ್ಲಿ ಕ್ರಮವಾಗಿ ೩೯ ಮತ್ತು ೮೪ ವಿದ್ಯಾರ್ಥಿಗಳು ಕುಳಿತಿದ್ದು ಜೂನ್ ತಿಂಗಳಲ್ಲಿ ಫಲಿತಾಂಶ ಹೊರಬೀಳುವದು. ಮುಂದಿನ ಪರೀಕ್ಷೆ ನವೆಂಬರದಲ್ಲೆ ನಡೆಯುವದಿದ್ದು ಪರೀಕ್ಷೆಗಳಿಗೆ ಕೂಡಬಯಸುವವರು ಸೆಪ್ಟೆಂಬರ ಕೊನೆಯೊಳಗಾಗಿ ಅವಶ್ಯ ಶುಲ್ಕದೊಡನೆ ಅರ್ಜಿ ಮಾಡಬೇಕೆಂದು ಪರಿಷತ್ತಿನ ಕಾರ್ಯದರ್ಶಿಗಳು ತಿಳಸುತ್ತಾರೆ.

ಕರ್ನಾಟಕ ಪ್ರಾಂತಿಕ ಸಮಾಜವಾದಿ ಪಕ್ಷದ ಅಧಿವೇಶನ ಮೇ ೨೮-೨೯ಕ್ಕೆ ಶ್ರೀ. ಅಶೋಕ ಮೇಹತಾರ ಅಧ್ಯಕ್ಷತೆಯಲ್ಲಿ ಶಿವಮೊಗ್ಗೆಯಲ್ಲಿ ಜರುಗಲಿದೆ.

ಕಲಬುರ್ಗಿಯ ಗಾಂಧಿ ಸ್ಮಾರಕ ನಿಧಿ ಸಮಿತಿಯ ಅಧ್ಯಕ್ಷರಾದ ಡಾ. ಜಹಗೀರದಾರರು ಸುಮಾರು ೫೦೦೦ ರೂ. ಸಂಗ್ರಹಿಸಿ ಕೇಂದ್ರ ನಿಧಿಗೆ ಕಳಿಸಿದ್ದಾರೆ.

ಅ. ಭಾ. ಕಾಂಗ್ರೆಸ್ ಸಮಿತಿಯ ಕಾರ್ಯದರ್ಶಿಗಳಾದ ಶ್ರೀ ಶಂಕರರಾವ ದೇವರು ತಾ. ೧೫ ಕ್ಕೆ ಕಲಬುರ್ಗಿಗೆ ಭೆಟ್ಟಿಯಿತ್ತು ಶ್ರೀ ಜನಾರ್ದನರಾವ್ ದೇಸಾಯಿ ಮೊದಲಾದವರೊಡನೆ ಮಾತುಕತೆ ನಡೆಸಿ ಜಿಲ್ಹೆಯ ಪರಿಸ್ಥಿತಿ ತಿಳಿದುಕೊಂಡರು.

ಮೈಸೂರಿನ ಕಾಯದೆ ಹಾಗು ಕೂಲಿಕಾರ ಮಂತ್ರಿಯಾದ ಶ್ರೀ ಕೆ. ಟಿ. ಭಾಷ್ಯಂ ಅವರು ಜಿನೆವಾದಲ್ಲಿ ಜೂನ ೮ ಕ್ಕೆ ಸೇರಲಿರುವ ಅಂತರ್‌ರಾಷ್ಟ್ರೀಯ ಕೂಲಿಕಾರ ಪರಿಷತ್ತಿಗೆ ಭಾರತದ ಪ್ರತಿನಿಧಿಗಳಾಗಿ ನೇಮಿಸಲ್ಪಟ್ಟಿದ್ದಾರೆ ಕಳೆದ ವರ್ಷ ಫ್ರಾನ್ಸಿನಲ್ಲಿ ನಡೆದ ಪರಿಷತ್ತಿಗೂ ಇವರು ಹೋಗಿದ್ದರು.

ವಿಜಾಪುರ

ಬದಾಮಿ ತಾಲೂಕಿನ ಯರಗೊಪ್ಪ ಹಾಗು ಜಾಲಗೇರಿ ಹಳ್ಳಿಗಳ ರೈತರಿಗೂ ನಾಡಗೌಡರಿಗೂ ಹುಲ್ಲುಗಾವಲ ಬಗ್ಗೆ ತಂಟೆಯಿದ್ದುದರಿಂದ ಎರಡೂ ಇನಾಮು ಹಳ್ಳಿಗಳನ್ನು ಹೊಲಸಾಗುವಳಿ ಕಾಯದೆಯನ್ವಯ ಮುಂಬಯಿ ಸರಕಾರ ವಶಪಡಿಸಿಕೊಂಡಿದೆ.

ಸುಬ್ರಹ್ಮಣ್ಯದಲ್ಲಿ ೩ ನೆ ಕರ್ನಾಟಕ ಮಲೆನಾಡು ಸಮ್ಮೇಲನ

ಕರ್ನಾಟಕ 'ಮಲೆನಾಡು ಪರಿಷತ್ತಿನ ಮೂರನೆ ಅಧಿವೇಶನ ದಕ್ಷಿಣ ಕನ್ನಡ ಜಿಲ್ಹೆಯ ಶ್ರೀ ಸುಬ್ರಹ್ಮಣ್ಯ ಕ್ಷೇತ್ರದಲ್ಲಿ ಕೊಡಗಿನ ನ್ಯಾಯಾಧೀಶರಾದ ಶ್ರೀ ಎಸ್. ಮುದ್ದಪ್ಪನವರ ಅಧ್ಯಕ್ಷತೆಯಲ್ಲಿ ತಾ. ೧೨ ಸಾಂಗವಾಯಿತ್ತು. ಅಧ್ಯಕ್ಷರು ತಮ್ಮ ಭಾಷಣದಲ್ಲಿ ಮಲೆನಾಡಿನ ಹಿಂದಿನ ಉನ್ನತಿಯನ್ನೂ ಇಂದಿನ ಅಧೋಗತಿಯನ್ನೂ ಹೋಲಿಸಿ ಮಲೆನಾಡಿಗರ ಕಷ್ಟ ಪರಂಪರೆಗಳನ್ನು ಹೋಗಲಾಡಿಸಲು ಸರಕಾರವೂ ಜನತೆಯೂ ಕೈಕೊಳ್ಳಬೇಕಾದ ಉಪಾಯಗಳನ್ನು ವಿವೇಚಿಸಿದರು. ಮಲೆನಾಡು ಸುಧಾರಣಾ ಸಂಘದ ತಾತ್ಪೂರ್ತಿಕ ಅಧ್ಯಕ್ಷರಾದ ಶ್ರೀ ಎಂ. ಎಸ್. ಭಿಡೆಯವರು ಸಿದ್ಧಗೊಳಿಸಿದ ಶಾಶ್ವತ ಘಟನೆಯನ್ನೊಪ್ಪಿ ಸಭೆಯು ಸಂಘಕ್ಕೆ ಅವರನ್ನೇ ಅಧ್ಯಕ್ಷರನ್ನಾಗಿ ಆರಿಸಿತು. ಮಲೆನಾಡುಗಳಲ್ಲಿರುವವರ ಕುಂದುಕೊರತೆಗಳಾದ ಮಲೇರಿಯಾ, ಅಡವಿಗಳ ವಿಸ್ತರಣೆ, ಕಾಡಿಟ್ಟ ಅಡವಿಗಳ ಕಾಯದೆ ಮೊದಲಾದವುಗಳನ್ನುಲ್ಲೇಖಿಸಿ ಅವನ್ನು ನಿವಾರಿಸಬೇಕೆಂದೂ ಶಾಲೆ ಟಪಾಲು ಮೊದಲಾದ ಸೌಕರ್ಯಗಳನ್ನೊದಗಿಸಬೇಕೆಂದೂ ಸರಕಾರವನ್ನು ಕೇಳಿಕೊಳ್ಳುವ ಮತ್ತು ಕರ್ನಾಟಕ ಪ್ರಾಂತರಚನೆಗೆ ಬೆಂಬಲ ಕೊಡುವ ಗೊತ್ತುವಳಿಗಳಾದವು. ಶ್ರೀ ಕೆ. ಆರ್. ಕಾರಂತ ಮೊದಲಾದ ಪ್ರಮುಖರೂ ಮದ್ರಾಸ್ ಕೊಡಗು ಪ್ರಾಂತಗಳ ಅನೇಕ ಮಲೆನಾಡು ಶಾಖೆಯ ಅಧಿಕಾರಿಗಳೂ ಕಾರ್ಯಕಲಾಪಗಳಲ್ಲಿ ಭಾಗ ವಹಿಸಿದ್ದರು.

ಉತ್ತರ ಕನ್ನಡ

ಕಾರವಾರದಲ್ಲಿ ಕೂಡಿದ (ತಾ. ೧೪) ಆಹಾರೋತ್ಪಾದನ ಪರಿಷತ್ತಿನಲ್ಲಿ ಭಾಷಣ ಮಾಡುತ್ತ ಒಕ್ಕಲತನ ಮಂತ್ರಿ ಶ್ರೀ ಎಂ. ಪಿ. ಪಾಟೀಲರು ೧೯೫೧ ರೊಳಗೆ ಆಹಾರ ಸ್ವಾವಲಂಬನವನ್ನು ಸಾಧಿಸುವ ಯೋಜನೆಗೆ ರೈತರ ಸಹಕಾರವನ್ನು ಬೇಡಿದರು. ಜಿಲ್ಹಾ ಒಕ್ಕಲತನ ಅಧಿಕಾರಿ ಶ್ರೀ ಹಬ್ಬು ಅವರು ಜಿಲ್ಹೆಗೆ ಕೊರತೆ ಬೀಳುವ ೧೦ ಸಾವಿರ ಟನ್ ಧಾನ್ಯವನ್ನು ಸರಿಪಡಿಸಿಕೊಳ್ಳುವ ತಮ್ಮ ಯೋಜನೆಯನ್ನು ವಿವರಿಸಿದರು.

ಮುಂಬಯಿ ಶಾಸನ ಸಭೆಯ ೪೦ ಸದಸ್ಯರು ಮುಖ್ಯ ಮಂತ್ರಿ ಖೇರರಿಗೆ ಒಂದು ಮನವಿ ಕಳಿಸಿ ಅಧಿವೇಶನ ಕಾಲದಲ್ಲಿ ಸಿಗುವ ೫ ರೂಪಾಯಿಯ ದೈನಿಕ ಭತ್ತೆಯನ್ನು ಹೆಚ್ಚಿಸಬೇಕೆಂದು ಕೇಳಿಕೊಂಡಿದ್ದಾರೆಂದು ಕಾರವಾರದಿಂದ ಸುದ್ದಿ ಬಂದಿದೆ.

ಯಲ್ಲಾಪೂರದ ಸಮೀಪದಲ್ಲಿರುವ ಲಿಂಗ್ಯಾನಕೊಪ್ಪದಲ್ಲಿ ಶ್ರೀ ಕೃಷ್ಣಭಟ್ಟರ ಮನೆಯಲ್ಲಿ ದರೋಡೆ ಮಾಡಿದ ಬಗ್ಗೆ ಸೆಶನ್ಸ ಕೋರ್ಟಿನಲ್ಲಿ ಹೂಡಲಾದ ಖಟ್ಲೆಯಲ್ಲಿ ೧೮ ಆರೋಪಿಗಳಲ್ಲಿ ೧೩ ಜನರಿಗೆ ಬೇರೆ ಬೇರೆ ಅವಧಿಯ ಶಿಕ್ಷೆ ವಿಧಿಸಲ್ಪಟ್ಟಿದೆ. ಯಲ್ಲಾಪೂರ ಗ್ರಾಮದ ಒಬ್ಬ ಹವ್ಯಕ ಬ್ರಾಹ್ಮಣನ ಮನೆ, ಬಣವಿಗಳನ್ನು ಸುಟ್ಟು ಫಕೀರಾ ಯಾನೆ ವಂಕೇಸಿ ಸಿದ್ದಿಯೆಂಬವನಿಗೆ ೩॥ ವರ್ಷ ಸಶ್ರಮ ಶಿಕ್ಷೆಯಾಗಿದೆ.

ಶ್ರೀ ಪಾಂಡೇಶ್ವರ ಗಣಪತಿರಾಯರ ಅಧ್ಯಕ್ಷತೆಯಲ್ಲಿ ಕಾರವಾರದಲ್ಲಿ ನಡೆದ ಯಕ್ಷಗಾನ ಸಮ್ಮೇಲನದಲ್ಲಿ ಕರ್ನಾಟಕದಲ್ಲಿ ಬಳಕೆಯಲ್ಲಿರುವ ಯಕ್ಷಗಾನ ಪದ್ಧತಿಗಳಲ್ಲಿ ಏಕರೂಪತೆಯನ್ನುಂಟುಮಾಡಬೇಂಬಿತ್ಯಾದಿ ಗೊತ್ತುವಳಿಗಳಾದವು.

ಸುಂಕದ ಅಧಿಕಾರಿಗಳ ಕಣ್ಣು ತಪ್ಪಿಸಿ ಗೋವೆಯಿಂದ ಕಾರವಾರಕ್ಕೆ ೫೦೦ ತೊಲೆ ಚಿನ್ನವನ್ನು ಸಾಗಿಸುತ್ತಿದ್ದಾಗ ಮಜಲಿಯ ಸುಂಕದ ಕಟ್ಟೆಯವರು ಅದನ್ನು ಪತ್ತೆ ಹಚ್ಚಿದರು.

ಭಟಕಳದ ಮಜಲಿಸ್–ಈ–ಇಸ್ಲಾಮ ತಂಜೀಮ ಸಂಸ್ಥೆಯ ಸದಸ್ಯತ್ವವನ್ನು ಸರ್ವ ಜಾತಿಯವರಿಗೆ ತೆರೆದಿರಿಸಲಾಗಿದೆ.

ಬಳ್ಳಾರಿ

ಕಲೆಕ್ಟರರ ಅಧ್ಯಕ್ಷತೆಯಲ್ಲಿ ಸೇರಿದ ಬಳ್ಳಾರಿ ಜಿಲ್ಹಾ ಆಹಾರ ಸಮಿತಿಯು ರೈತರು ಸರಕಾರಕ್ಕೆ ಧಾನ್ಯ ಮಾರಲು ಸಿದ್ಧರಾಗಿರುವಾಗ ಹಣವಿಲ್ಲದ ಮೂಲಕ ಆಹಾರ ಖರೀದಿ ನಿಂತಿದ್ದರ ಬಗ್ಗೆ ವಿಷಾದ ಪ್ರದರ್ಶಿಸಿತು. ಸರಕಾರದವರು ಸೆಂಟ್ರಲ ಸ್ಟೇಟಿಗೆ ಕೊಟ್ಟ ಸಾಲದ ಅವಧಿಯನ್ನಾದರೂ ಬೆಳೆಸಬೇಕು ಇಲ್ಲವೆ ಸರಕಾರಿ ಬೊಕ್ಕಸದಿಂದ ಹಣ ಕೊಟ್ಟು ಧಾನ್ಯ ವಸೂಲಿಯನ್ನು ಯಶಸ್ವಿಗೊಳಿಸಬೇಕೆಂದು ಕೇಳಿಕೊಳ್ಳಲಾಯಿತು.

ದಕ್ಷಿಣ ಕನ್ನಡ

ಕಮ್ಯುನಿಸ್ಟರಿಗೆ ಆಶ್ರಯವಿತ್ತರೆಂದು ಮಂಗಳೂರು ಬೋಳೂರು ಚೆನ್ನಪ್ಪ ಪೂಜಾರಿ ಎಂಬವರಿಗೆ ಒಂಭತ್ತು ತಿಂಗಳ ಕಠಿಣ ಸಜೆ ವಿಧಿಸಲಾಗಿದೆ. ಈ ಸಂದರ್ಭದಲ್ಲಿ ಶ್ರೀ ಎಸ್. ಎಸ್. ಹೊಳ್ಳರಿಗೆ ಆಶ್ರಯವಿತ್ತರೆಂಬ ಆರೋಪಕ್ಕೊಳಗಾದ ಬಿ. ವೆಂಕಟರಾವ್ ಮತ್ತು ಬಿ. ರಾಮರಾವ್ ಎಂಬವರನ್ನು ಬಿಡುಗಡೆ ಮಾಡಲಾಗಿದೆ. ಅಲ್ಲದೆ ಗ್ರೇಟ್ ಇಂಡಿಯಾ ಬೀಡಿ ವರ್ಕ್ಸಿನ ಮುಂದೆ ಗಲಭೆ ಎಬ್ಬಿಸಿದರೆಂಬ ಆರೋಪಕ್ಕೊಳಗಾದ ಮೂರು ಮಂದಿಗೂ ೯ ತಿಂಗಳಿನಂತೆ ಕಠಿಣ ಸಜೆ ವಿಧಿಸಲಾಗಿದೆ.

ಮದ್ರಾಸು ಸರಕಾರದ ಸ್ಥಳೀಯ ಸ್ವರಾಜ್ಯ ಖಾತೆಯ ಮಂತ್ರಿಗಳಾದ ಶ್ರೀ. ಕೆ. ಚಂದ್ರಮೌಳಿಯವರು ದಿನಾಂಕ ೧೨ ರಂದು ಮಂಗಳೂರಿಗೆ ಬಂದವರು ಕುಂದಾಪುರಕ್ಕೆ ಮರುದಿನ ಹೋಗಿರುತ್ತಾರೆ. ಅಲ್ಲಿಯ ಸಹಕಾರಿ ರಚನಾ ಯೋಜನೆಯನ್ನು ಪರಿಶೀಲಿಸಿ ದಿನಾಂಕ ೧೪ ರಂದು ಮಂಗಳೂರಿಗೆ ಬಂದು ಮದ್ರಾಸಿನತ್ತ ತೆರಳಿದರು.

ಮಂಗಳೂರಿನ ಹಂಪನಕಟ್ಟೆಯಲ್ಲಿರುವ ಶಾರದಾ ಜುವೆಲರಿ ಮಾರ್ಟ್ ಎಂಬ ಬೆಳ್ಳಿ ಬಂಗಾರದ ಅಂಗಡಿಗೆ ದಿನಾಂಕ ೮ ರ ರಾತ್ರಿ ಕಳ್ಳರು ಹೊಕ್ಕು ಸುಮಾರು ೧೨ ಸಾವಿರ ರೂಪಾಯಿ ಬೆಲೆಬಾಳುವ ಚಿನ್ನಾಭರಣಗಳನ್ನೊಯ್ದಿರುವರು. ಪೋಲೀಸರು ತಪಾಸಣೆ ನಡೆಸುತಿದ್ದಾರೆ.

ಇತ್ತೀಚೆಗೆ ಜರಗಿದ ದ. ಕ. ಜಿಲ್ಲಾ ಬೋರ್ಡಿನ ಸಭೆಯಲ್ಲಿ ಕುಂದಾಪುರ ಹೈಸ್ಕೂಲಿನಲ್ಲಿ Teaching Practice ನ್ನು ಈ ವಿಧ ಜಿಸಿದ ಯೋಜನೆಯಂತೆ ಕಲಿಸಲು ನಿರ್ಣಯಿಸಲಾಯಿತು. ಅಲ್ಲದೆ ಕುಂಬಳೆ ಫಿರ್ಕಾದಲ್ಲಿರುವ ಬೋರ್ಡ ಎಲಿಮೆಂಟರೀ ಶಾಲೆಗಳನ್ನು ಬೇಜಿಕ್ ಶಾಲೆಗಳನ್ನಾಗಿ ಮಾರ್ಪಡಿಸಲು ನಿರ್ಣಯವಾಯಿತು. ಮಂಡಸೆ, ಮಲ್ಪೆ, ಫಲಿಮಾರುಗಳಲ್ಲಿ ಡಿಸ್ಪೆನ್ಸರಿಗಳಿಗಾಗಿ ೧,೨೦೩—೪—೦ ಗಳನ್ನು ಆಯುರ್ವೇದ ಔಷಧಿಗಳಿಗಾಗಿ ಮಂಜೂರು ಮಾಡಲಾಯಿತು. ಇದರಂತೆ ಕೆಲವೊಂದು ರಸ್ತೆಗಳ ದುರಸ್ತಿಗೂ ಹಣ ಪ್ರತ್ಯೇಕಿಸಲಾಯ್ತು. ಇಂದಿನ ಸಭೆಗೆ ಕಲೆಕ್ಟರರೇ ಅಧ್ಯಕ್ಷರಾಗಿದ್ದರು. ಜಿಲ್ಲಾ ಬೋರ್ಡುಗಳ ಚುನಾವಣೆಯು ಆಗೋಸ್ತು ತಿಂಗಳಲ್ಲಿ ಜರಗಲಿದೆಯೆಂದು ತಿಳಿದುಬಂದಿದೆ.

ಉಡುಪಿಯ ಶ್ರೀಕೃಷ್ಣಮಠದ ವಸಂತಭವನಕ್ಕೆ ದಿನಾಂಕ ೧೦ ನೇ ರಾತ್ರಿ ಬೆಂಕಿ ತಗಲಿ ಭಯಸೂಚಕ ನಗರಿಯಿಂದಾಗಿ ಬೆಂಕಿ ನಂದಿಸುವ ಯಂತ್ರಗಳು ಬಂದರೂ ಪ್ರಯೋಜನವಾಗಲಿಲ್ಲ. ಸುಮಾರು ೭೫ ಸಾವಿರ ರೂಪಾಯಿಗಳಷ್ಟು ನಷ್ಟವಾಗಿದೆಯೆಂದು ಊಹಿಸಲಾಗಿದೆ.

ಕುಂದಾಪುರ ಹೈಸ್ಕೂಲಿನ ವಠಾರದಲ್ಲಿ ವಸಂತ ಸಾಹಿತ್ಯೋತ್ಸವವು ದಿನಾಂಕ ೬ ರಂದು ಎಚ್. ರಾಮರಾಯರ ಅಧ್ಯಕ್ಷತೆಯಲ್ಲಿ ಜರಗಿತು. ಶ್ರೀ ಶಿವರಾಮ ಕಾರಂತ ಮೊದಲಾದವರ ಭಾಷಣಗಳಾದುವಲ್ಲದೆ ಶ್ರೀನಿವಾಸ ಉಡುಪರಿಂದ ಸಂಗೀತ ಕಚೇರಿಯೂ ಜರಗಿತು.

ಕುಂದಾಪುರದ ಕರ್ನಾಟಕ ಸಂಘದ ವಿಶೇಷ ಸಭೆಯೊಂದು ಶ್ರೀ ಹರಿದಾಸರಾಯರ ಅಧ್ಯಕ್ಷತೆಯಲ್ಲಿ ಜರಗಿದಾಗ ಶ್ರೀ ಶಿವರಾಮ ಕಾರಂತರು "ಕನ್ನಡ ಸಾಹಿತ್ಯದ ಸ್ವರೂಪ" ವೆಂಬ ವಿಚಾರವಾಗಿ ಭಾಷಣವಿತ್ತರು.

ಮೂಡಬಿದಿರೆಯ ಪ್ರಾಣಿಬಲಿ ನಿಷೇಧ ಸಮಿತಿಯವರ ಪ್ರಯತ್ನದಿಂದ ಕಾಂತಾವರ ಗ್ರಾಮದ ಮಾರಿಗುಡಿಯಲ್ಲಿ ನಡೆಯುವ ಪ್ರಾಣಿ ಬಲಿಯು ನಿಲ್ಲಿಸಲ್ಪಟ್ಟಿದೆ. ಬಲಿಗಾಗಿ ಬಂದಿದ್ದ ಒಂದು ಆಡನ್ನು ಗಾಂಧೀ ಸೇವಾಶ್ರಮಕ್ಕೆ ದಾನಮಾಡಲಾಯಿತು.

ಕೋಟೇಶ್ವರದ ಪ್ರೌಢ ಪ್ರಾಥಮಿಕ ಶಾಲೆಯ ಬೆಳ್ಳಿ ಹಬ್ಬ, ಹಳೆ ವಿದ್ಯಾರ್ಥಿ ದಿನ ಮತ್ತು ಕನ್ನಡ ವಸಂತೋತ್ಸವಗಳು ಮೇ ೧, ೨, ೩, ನೇ ತಾರೀಕುಗಳಲ್ಲಿ ಆಚರಿಸಲ್ಪಟ್ಟವು. ಸಮಾರಂಭಗಳ ಅಧ್ಯಕ್ಷತೆಯನ್ನು ಕ್ರಮವಾಗಿ ಶಿವಮೊಗ್ಗೆಯ ಪೌರ ಸಭಾಧ್ಯಕ್ಷ ಶ್ರೀ ಕೃಷ್ಣಪ್ಪ, ಬೈಂದೂರು ಬೋ. ಹೈಸ್ಕೂಲ ಮುಖ್ಯೋಪಾಧ್ಯಾಯ ಶ್ರೀ ಟಿ. ಶಂಕರರಾವ್, ಹಾಗು ಶ್ರೀ ಹೊಸಬೆಟ್ಟು ರಾಮರಾವ್ ಇವರುಗಳು ವಹಿಸಿದ್ದರು. ಕೊನೆಯ ದಿನ ಶ್ರೀ ಶಿವರಾಮ ಕಾರಂತ, ಸೂರ್ಯನಾರಾಯಣ ಅಡಿಗ ಮೊದಲಾದ ಸಾಹಿತಿಗಳ ಉಪನ್ಯಾಸಗಳಿದ್ದವು.

ಈ ಪತ್ರಿಕೆಯನ್ನು ಹುಬ್ಬಳ್ಳಿ ಸಂಯುಕ್ತ ಕರ್ನಾಟಕ ಮುದ್ರಣಾಲಯದಲ್ಲಿ ಲೋಕಶಿಕ್ಷಣ ಟ್ರಸ್ಟಿನ ಪರವಾಗಿ ಹ. ರಾ. ಮೊಹರೆಯವರು ಮುದ್ರಿಸಿ ಪ್ರಕಟಿಸಿದರು.